ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 11 ಶನಿವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 25 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4


ಡಾ.ಬಿ.ಆರ್.ಅಂಬೇಡ್ಕರ್ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್ (ರಿ.), ಸಮಾನತೆ-ಸ್ವಾಭಿಮಾನ-ಸ್ವಾವಲಂಬನೆ ಪ್ರತಿಷ್ಠಾನ (ರಿ.), ಸಮಾನತೆ ಪ್ರಕಾಶನ (ರಿ.), ಮೈಸೂರು



ರಾಜಕೀಯ ಮುತ್ಸದ್ಧಿ ಶ್ರೀ ವಿ.ಶ್ರೀನಿವಾಸ ಪ್ರಸಾದ್ : ಶ್ರದ್ಧಾಂಜಲಿ

ಸ್ವಾಭಿಮಾನಿಗೆ ಸಾವಿರದ ನುಡಿನಮನ





“ಮನುಷ್ಯ ಚಿರಂಜೀವಿಯಾಗಲಾರ ಆದರೆ ಆತನ ಚಿಂತನೆಗಳು ಶಾಶ್ವತವಾಗಿ ಉಳಿಯುತ್ತವೆ.”

–ಡಾ.ಬಾಬಾ ಸಾಹೇಬ್ ಅಂಬೇಡ್ಕರ್

ದಿನಾಂಕ : 11.05.2024ನೇ ಶನಿವಾರ | ಸಮಯ : ಬೆಳಗ್ಗೆ 10.30ಕ್ಕೆ

ಸ್ಥಳ : ಡಾ.ಬಿ.ಆರ್.ಅಂಬೇಡ್ಕರ್ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಟ್ರಸ್ಟ್ ಆವರಣ, ಸಿಲ್ಕ್ ಫ್ಯಾಕ್ಟರಿ ಎದುರು (Opp. Silk Factory), ಮಾನಂದವಾಡಿ ರಸ್ತೆ, ಮೈಸೂರು

ಧರ್ಮಪತ್ನಿ :- ಭಾಗ್ಯಲಕ್ಷ್ಮಿಪ್ರಸಾದ್, ಮಕ್ಕಳಾದ :- ಪ್ರತಿಮಾ ಪ್ರಸಾದ್ | ಪೂರ್ಣಿಮಾ ಪ್ರಸಾದ್ | ಪೂನಂ ಪ್ರಸಾದ್, ಅಳಿಯಂದಿರಾದ :- ದೇವರಾಜು | ಬಿ.ಹರ್ಷವರ್ಧನ್ | ಡಾ.ಮೋಹನ್ ಹಾಗೂ ಮೊಮ್ಮಕ್ಕಳು

ಪ್ರಕಟಣೆ : ಬಿ.ಹರ್ಷವರ್ಧನ್ ಮಾಜಿ ಶಾಸಕರು, ನಂಜನಗೂಡು ಕ್ಷೇತ್ರ, ವಿ.ಶ್ರೀನಿವಾಸಪ್ರಸಾದ್ ಅಭಿಮಾನಿ ಬಳಗ ಮೈಸೂರು ಮತ್ತು ಚಾಮರಾಜನಗರ

ಮಧ್ಯಾಹ್ನ 12.30ಕ್ಕೆ ಭೋಜನದ ವ್ಯವಸ್ಥೆ ಇರುತ್ತದೆ

ತಮಗೆ ಆದರದ ಸ್ವಾಗತ

ಮಹೇಶ್ ಪ್ರಿಂಟ್ 8904224836

ಸಂಸದ ಪ್ರಜ್ವಲ್, ನಿತ್ಯಾನಂದ ಸ್ವಾಮಿ 'ಕೈಲಾಸ' ಸೇರಲು ಪ್ರಯತ್ನಿಸುತ್ತಿದ್ದಾರೆ

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ



ಮೈಸೂರು,ಮೇ.10– ನನಗಿರುವ ಮಾಹಿಯ ಪ್ರಕಾರ ಅತ್ಯಾಚಾರ ಕೇಸಿನಲ್ಲಿ ದೇಶ ಬಿಟ್ಟು ಹೋಗಿ ಮತ್ತೊಂದು ಹೊಸ ದೇಶವನ್ನೇ ಕಟ್ಟಿಕೊಂಡಿರುವ ನಿತ್ಯಾನಂದ ಸ್ವಾಮಿ ಇರುವ ಜಾಗಕ್ಕೆ ಸೇರಲು ಹಾಸನ ಸಂಸದ ಪ್ರಜ್ವಲ್ ರೇವಣ್ಣ ಪ್ರಯತ್ನ ಮಾಡುತ್ತಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ ಆರೋಪಿಸಿದ್ದಾರೆ.

ಮೈಸೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬಿಡದಿಯ ನಿತ್ಯಾನಂದ ಪ್ರಕರಣ ಏನಾಯಿತು ಎಲ್ಲರಿಗೂ ಗೊತ್ತಿದೆ. ನನಗಿರುವ ಮಾಹಿತಿ ಪ್ರಕಾರ ಅತ್ಯಾಚಾರ ಕೇಸಿನ ಆರೋಪಿ ನಿತ್ಯಾನಂದಸ್ವಾಮಿ ಯಾರ ಕೈಗೂ ಸಿಗದೇ ತನ್ನದೇ ದೇಶ ಕಟ್ಟಿಕೊಂಡು ವಾಸವಾಗಿದ್ದಾನೆ. ಪ್ರಜ್ವಲ್ ರೇವಣ್ಣ ಕೂಡ ನಿತ್ಯಾನಂದ ಇರುವ ಜಾಗ ಸೇರಲು ಪ್ರಯತ್ನ ಮಾಡುತ್ತಿದ್ದಾರೆ. ಆದರೆ, ನೀವೆಲ್ಲರೂ ರಾಜ್ಯದಲ್ಲಿ ಪ್ರೆಸ್‌ಮೀಟ್‌ಗಳನ್ನು ಮಾಡಿ, ಜನರ ದಿಕ್ಕು ತಪ್ಪಿಸುವ ಕಾರ್ಯ ಮಾಡುತ್ತಿದ್ದೀರಿ ಎಂದು ಜೆಡಿಎಸ್ ಮತ್ತು ಬಿಜೆಪಿ ನಾಯಕರಿಗೆ ಛೇಡಿಸಿದ್ದಾರೆ.

ಕುಮಾರಸ್ವಾಮಿ ಅವರು ರಾಜ್ಯದಲ್ಲಿ ಎರಡು ಬಾರಿ ಮುಖ್ಯಮಂತ್ರಿ ಆಗಿದ್ದಾರೆ. ನಮ್ಮ ರಾಜ್ಯದ ಪೊಲೀಸರು ಪ್ರಜ್ವಲ್ ರೇವಣ್ಣ ಅಶ್ಲೀಲ ವಿಡಿಯೋ ಕೇಸ್ ತನಿಖೆ ಮಾಡುವ ಸಾಮರ್ಥ್ಯ ಹೊಂದಿದ್ದರೂ ಸಿಬಿಐಗೆ ಕೊಡುವಂತೆ ರಾಜ್ಯಪಾಲರಿಗೆ ಮನವಿ ಮಾಡಿ ಬಂದಿದ್ದಾರೆ. ಸಿಬಿಐ ತನಿಖೆಗೆ ವಹಿಸಿದರೆ ಕೇಂದ್ರ ಗೃಹ ಸಚಿವ ಅಮಿತ್ ಶಾ, ಪ್ರಜ್ವಲ್‌ನ ಕೇಸ್ ಮುಚ್ಚಿ ಹಾಕುವ ಭರವಸೆ ನೀಡಿದ್ದಾರಾ. ನಿಮಗೆ ಯಾಕೆ ಸಿಬಿಐ ಬಗ್ಗೆ ಅಷ್ಟು ಪ್ರೀತಿ. ಇಲ್ಲಿರುವ ಅಧಿಕಾರಿಗಳು ಕೂಡ ಸಮರ್ಥರು. ಬಿಜೆಪಿಯ ಸ್ಕ್ರಿಪ್ಟ್ ನೀವು ಓದುತ್ತಿದ್ದೀರಾ ಎಂದು ಆರೋಪಿಸಿದರು.

ಮುಖ್ಯವಾಗಿ ಈ ಪ್ರಕರಣದಲ್ಲಿ ಪೆನ್ ಡ್ರೈವ್ ಹಂಚಿದ್ದು ಯಾರು ಎಂಬುದನ್ನು ಆಮೇಲೆ ನೋಡೋಣ. ಆದರೆ, ವಿಡಿಯೋ ಮಾಡಿದ್ದು ಯಾರು, ನಿಮ್ಮ ಅಣ್ಣನ ಮಗ ಪ್ರಜ್ವಲ್ ಅಲ್ವಾ, ಹೆಣ್ಣು ಮಕ್ಕಳನ್ನು ರೇಪ್ ಮಾಡಿ ವಿಡಿಯೋ ಮಾಡಿದ್ದು ಆತನೇ ತಾನೇ. ರಾಜ್ಯದ ಮಾನ ಮರ್ಯಾದೆಯನ್ನು ರಾಷ್ಟ್ರ ಮಟ್ಟದಲ್ಲಿ ಹಾಳು ಮಾಡಿದ್ದೀರಿ. ಬೆಂಗಳೂರಿನ ಮಾನ ಮರ್ಯಾದೆ ಹರಾಜು ಹಾಕಿದ್ದೀರಿ. ಮೊದಲು ಪ್ರಜ್ವಲ್‌ನನ್ನು ನಮ್ಮ ದೇಶಕ್ಕೆ ಕರೆತನ್ನಿ. ನೀರವ್ ಮೋದಿ, ವಿಜಯ ಮಲ್ಯ ಯಾರನ್ನೂ ಬಿಜೆಪಿ ಸರ್ಕಾರ ಕರೆ ತರಲಿಲ್ಲ. ಪ್ರಜ್ವಲ್ ರೇವಣ್ಣನ ವಿಚಾರದಲ್ಲೂ ಇದೇ ಆಗಲಿದೆ ಎಂದು ವಾಗ್ದಾಳಿ ಮಾಡಿದರು. ವಕೀಲ ದೇವರಾಜೇಗೌಡ ಕ್ರಿಮಿನಲ್ ಬ್ಯಾಕ್‌ಗ್ರೌಂಡ್ ಹೊಂದಿರುವ ವ್ಯಕ್ತಿ. ಆತ ಕೊಟ್ಟ ಪೆನ್‌ಡ್ರೈವ್ ನೋಡಿಲ್ಲ ಅಂತೀರಾ ನಿಮ್ಮ ನಿಲುವು ಸ್ಪಷ್ಟ ಪಡಿಸಿ. ನಾನು ಸರ್ಕಾರಕ್ಕೆ ಆಗ್ರಹ ಮಾಡುತ್ತೇನೆ. ದೇವರಾಜೇಗೌಡನನ್ನು ವಶಕ್ಕೆ ಪಡೆದು ವಿಚಾರಣೆ ಮಾಡಿ, ಆತ ದುಡ್ಡು ಮಾಡಲು ಇದೆಲ್ಲ ಮಾಡಿದ್ದಾನೆ. ಆತನನ್ನು ಮಂಪರು ಪರೀಕ್ಷೆಗೆ ಒಳಪಡಿಸಿ ಎಂದು ಸರ್ಕಾರವನ್ನು ಆಗ್ರಹಿಸಿದರು.

ವಿ.ಶ್ರೀನಿವಾಸ್‌ಪ್ರಸಾದರಿಗೆ ಇಂದು ನುಡಿನಮನ

ಮೈಸೂರು, ಮೇ 10(ಜಿಎ)–ಇತ್ತೀಚೆಗೆ ನಿಧನರಾದ ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಅವರಿಗೆ ದೊರೆಸ್ವಾಮಿ ಸ್ನೇಹ ಬಳಗದ ಮತ್ತು ವಿವಿಧ ಸಂಸ್ಥೆಗಳ ವತಿಯಿಂದ ನಾಳೆ (ಮೇ11) ಮೈಸೂರಿನ ಅಶೋಕಪುರಂನ ಅಂಬೇಡ್ಕರ್ ಉದ್ಯಾನವನದಲ್ಲಿ ನುಡಿನಮನ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕನ್ನಡ ಕಲಾ ಕೂಟ ಅಧ್ಯಕ್ಷ ಚಂದ್ರಶೇಖರ್ ಈ ವಿಷಯ ತಿಳಿಸಿ, ವಿ.ಶ್ರೀನಿವಾಸ್ ಪ್ರಸಾದ್ ಅವರು ಶಾಸಕರು, ಸಂಸದರಾಗಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದು, ಅಂಬೇಡ್ಕರ್ ಅವರ ತತ್ವವನ್ನು ಅಳವಡಿಸಿಕೊಂಡು ಹಿಂದುಳಿದ ವರ್ಗಕ್ಕೆ ಸಾಕಷ್ಟು ಸೇವೆ ಸಲ್ಲಿಸಿದ್ದಾರೆ. ಅವರನ್ನು ನೆನೆಯುವುದು ಪ್ರತಿಯೊಬ್ಬರ ಕರ್ತವ್ಯವಾಗಿದ್ದು, ಶನಿವಾರ ಸಂಜೆ 6ಗಂಟೆಗೆ ನುಡಿನಮನ ಕಾರ್ಯಕ್ರಮ ಆಯೋಜಿಸಿದ್ದು, ಶಾಸಕರು, ಮಾಜಿ ಶಾಸಕರು, ಪಕ್ಷಾತೀತವಾಗಿ ಮುಖಂಡರು, ಅಭಿಮಾನಿಗಳು ಭಾಗವಹಿಸಲಿದ್ದಾರೆ ಎಂದರು.

ಹಸಿರು ಮೈಸೂರು ನರ್ಸರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ



ಹಸಿರು ಮೈಸೂರು ನರ್ಸರಿಗೆ ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ ನೀಡಿ ಪರಿಶೀಲಿಸಿದ ಬಳಿಕ ಬಸವ ಜಯಂತಿ ಅಂಗವಾಗಿ ಗಿಡ ನೆಟ್ಟರು.

ಮೈಸೂರು, ಮೇ 10(ಎಂಟಿವೈ)– ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ನೇತೃತ್ವದಲ್ಲಿ ಅಭಿವೃದ್ಧಿಪಡಿಸಿರುವ ಹಸಿರು ಮೈಸೂರು ನರ್ಸರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ ನೀಡಿ, ಸಾರ್ವಜನಿಕರಿಗೆ ವಿತರಿಸಲು ಬೆಳೆಸಿರುವ ಗಿಡಗಳನ್ನು ವೀಕ್ಷಿಸಿದರು.

ಮೈಸೂರು–ನಂಜನಗೂಡು ಮುಖ್ಯ ರಸ್ತೆಯಲ್ಲಿರುವ ನರ್ಸರಿಗೆ ಆಗಮಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಅವರು ಹಸಿರು ಮೈಸೂರು ಸಂಸ್ಥೆಯ ಕಾರ್ಯ ವೈಖರಿಯನ್ನು ವಿವರಿಸಿದರು. ಅಲ್ಲದೆ, ಈ ವರ್ಷ 16 ಸಾವಿರ ಗಿಡಗಳನ್ನು ರೈತರು ಹಾಗೂ ಸಾರ್ವಜನಿಕರಿಗೆ ವಿತರಿಸಲು ಉದ್ದೇಶಿಸಿರುವುದಾಗಿ ತಿಳಿಸಿದರು. ಗಿಡಗಳನ್ನು ವೀಕ್ಷಿಸಿದ ಸಿಎಂ, ಬಸವ ಜಯಂತಿ ಅಂಗವಾಗಿ ಸೀಬೆ ಗಿಡ ನೆಟ್ಟು ನೀರೆರೆದರು. ಪರಿಸರ ಸಮತೋಲನ ಕಾಪಾಡಿಕೊಳ್ಳಲು ಹೆಚ್ಚು ಗಿಡ–ಮರ ಬೆಳೆಸುವ ಅಗತ್ಯತೆಯನ್ನು ಸಿಎಂ ವಿವರಿಸಿದರು. ಈ ಸಂದರ್ಭದಲ್ಲಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಶಾಸಕರು ಹಾಗೂ ಮುಖಂಡರು ಉಪಸ್ಥಿತರಿದ್ದರು.

ಮೈಸೂರು ಜಿಲ್ಲಾಡಳಿತದಿಂದ ಬಸವಣ್ಣ, ಹೇಮರೆಡ್ಡಿ ಮಲ್ಲಮ್ಮರಿಗೆ ಗೌರವ ಸಲ್ಲಿಕೆ



ಮೈಸೂರು, ಮೇ 10 (ಎಂಟಿವೈ)– ಕರ್ನಾಟಕದ ಸಾಂಸ್ಕೃತಿಕ ನಾಯಕ, ವಿಶ್ವಗುರು ಬಸವಣ್ಣರ ಜಯಂತಿ ಹಾಗೂ ಶ್ರೀ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಜಯಂತಿಯನ್ನು ಜಿಲ್ಲಾಡಳಿತ ಸರಳವಾಗಿ ಆಚರಿಸಿ ಗೌರವ ಸಮರ್ಪಿಸಿತು.

ಮೈಸೂರಿನ ಗನ್‌ಹೌಸ್ ವೃತ್ತದ ಬಳಿಯಿರುವ ಬಸವಣ್ಣರ ಪ್ರತಿಮೆಗೆ ಜಿಲ್ಲಾಡಳಿತದ ವತಿಯಿಂದ ಮಾಲಾರ್ಪಣೆ ಮಾಡಲಾಯಿತು. ಬಳಿಕ ಬಸವಣ್ಣ ಹಾಗೂ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಅವರ ಭಾವಚಿತ್ರಕ್ಕೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ನಗರ ಪೊಲೀಸ್ ಆಯುಕ್ತ ರಮೇಶ್ .ಬಿ, ಜಿ.ಪಂ. ಸಿಇಒ ಕೆ.ಎಂ.ಗಾಯಿತ್ರಿ, ತಹಶೀಲ್ದಾರ್ ಮಹೇಶ್, ಡಾ.ಧರಣಿದೇವಿ ಮಾಲಗತ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎಸ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ. ಸುದರ್ಶನ್ ಹಾಗೂ ಇತರರು ಪುಷ್ಪ ನಮನ ಸಲ್ಲಿಸಿದರು.

ದೇವೇಗೌಡರು, ಅವರ ಕುಟುಂಬದ ವಿರುದ್ಧ ವಾಗ್ದಾಳಿ ನಡೆಸುವುದು ತರವಲ್ಲ...!

ಡಿಸಿಎಂ ಡಿ.ಕೆ.ಶಿವಕುಮಾರ್‌ಗೆ ಮಾಜಿ ಸಚಿವ ವಿ.ಸೋಮಣ್ಣ ಕಿವಿಮಾತು



ಬೆಂಗಳೂರು, ಮೇ 10(ಕೆಎಂಶಿ)– ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಹಾಗೂ ಅವರ ಕುಟುಂಬದವರ ವಿರುದ್ಧ ವಾಗ್ದಾಳಿ ನಡೆಸುವುದನ್ನು ನಿಲ್ಲಿಸಬೇಕೆಂದು ಬಿಜೆಪಿಯ ಹಿರಿಯ ನಾಯಕ ಹಾಗೂ ಮಾಜಿ ಸಚಿವ ವಿ.ಸೋಮಣ್ಣ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಒತ್ತಾಯಿಸಿದ್ದಾರೆ.

ಮುಖ್ಯಮಂತ್ರಿಯಾಗಲು ಆತುರ ಪಡಬೇಡಿ, ತರಾತುರಿಯಲ್ಲಿ ನಿರ್ಧಾರ ಕೈಗೊಂಡರೆ ಹಿನ್ನಡೆಯಾಗುತ್ತದೆ ಎಂದು ಎಚ್ಚರಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಿವಕುಮಾರ್ ಉನ್ನತ ಹುದ್ದೆಯೊಂದನ್ನು ಬಿಟ್ಟು ಎಲ್ಲಾ ಅಧಿಕಾರವನ್ನು ಸವಿದಿದ್ದಾರೆ, ಸವಿಯುತ್ತಿದ್ದಾರೆ.

ದೊಡ್ಡ ಸ್ಥಾನ ದಕ್ಕಿಸಿಕೊಳ್ಳಲು ತಾಳ್ಮೆ ಮುಖ್ಯ, ನಿಮಗೆ ದೊರಕಬೇಕಾದ ಸ್ಥಾನ ದೊರಕೇ ದೊರಕುತ್ತಿದೆ. ಆತುರ ಪಟ್ಟರೆ, ಲಭಿಸುವ ಅವಕಾಶವೂ ತಪ್ಪಬಹುದು ಎಂದಿದ್ದಾರೆ. ಹಳೇ ಮೈಸೂರು ಭಾಗದಲ್ಲಿ ನಿಮ್ಮಿಬ್ಬರ ಹೋರಾಟವನ್ನು, ಅನ್ಯ ಸಮಾಜದವರು ನೋಡಿಕೊಂಡು ಅದರಲ್ಲಿ ಕೆಲವರು ರಾಜಕೀಯ ಲಾಭ ಪಡೆದುಕೊಳ್ಳಲು ಪ್ರಯತ್ನಿಸುತ್ತಾರೆ. ಇಷ್ಟು ನಿಮಗೆ ಅರ್ಥವಾದರೆ ಸಾಕು. ಕಾಂಗ್ರೆಸ್ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಶಿವಕುಮಾರ್ ಮುಖ್ಯಮಂತ್ರಿ ಆಗಬೇಕೆಂದು ಆಸೆ ಪಟ್ಟವನಲ್ಲಿ ನಾನೂ ಒಬ್ಬ. ಆದರೆ ಅವರಿಗೆ ಧಕ್ಕಬೇಕಾದ ಸ್ಥಾನ ಧಕ್ಕಲಿಲ್ಲ. ಅವರ ಊರಿನವನಾಗಿ ದುಡುಕಬೇಡಿ ಎಂದಷ್ಟೇ ಕಿವಿಮಾತು ಹೇಳುತ್ತೇನೆ.

ಪ್ರಜ್ವಲ್ ತಪ್ಪು ಮಾಡಿದ್ದರೆ ಕಠಿಣ ಶಿಕ್ಷೆ ಆಗಲೇಬೇಕು, ಅದರಲ್ಲಿ ಎರಡು ಮಾತಿಲ್ಲ, ಆ ವಿಷಯದಲ್ಲಿ ಯಾರೂ ತಲೆ ತೂರಿಸುವುದಿಲ್ಲ, ನೀವು ಅನಗತ್ಯವಾಗಿ ಇಲ್ಲದವರನ್ನು ಎಳೆ ತಂದು ಗೊಂದಲ ಸೃಷ್ಟಿಸಿಕೊಳ್ಳಬೇಡಿ. ಶಿವಕುಮಾರ್ ಆತ್ಮೀಯ ಸ್ನೇಹಿತರಾದರೂ ಸೋಮಣ್ಣ, ಪ್ರಜ್ವಲ್ ಪ್ರಕರಣದ ವಿಷಯದಲ್ಲಿ ಗೌಡರ ಕುಟುಂಬದ ಪರ ನಿಂತಿದ್ದಾರೆ. ಲೋಕಸಭಾ ಚುನಾವಣಾ ಟಿಕೆಟ್ ಹಂಚಿಕೆ ಸಂದರ್ಭದಲ್ಲಿ ತುಮಕೂರಿನಿಂದ ಸ್ಪರ್ಧಿಸಲು ರಾಜ್ಯದ ಕೆಲವು ಬಿಜೆಪಿ ನಾಯಕರೇ ಸೋಮಣ್ಣ ಅವರಿಗೆ ಅಡ್ಡಗಾಲಾಕಿದ್ದರು.

ಇಂತಹ ಸನ್ನಿವೇಶದಲ್ಲಿ ದೇವೇಗೌಡ, ಕುಮಾರಸ್ವಾಮಿ, ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಅವರುಗಳು, ಸೋಮಣ್ಣ ಅವರ ಬೆನ್ನಿಗೆ ನಿಂತರು. ಎನ್‌ಡಿಎ ಕೂಟದ ಪಾಲುದಾರರಾಗಿರುವ ಜೆಡಿಎಸ್, ತುಮಕೂರು ಲೋಕಸಭಾ ಕ್ಷೇತ್ರದಿಂದ ಸೋಮಣ್ಣ ಅವರಿಗೆ ಬಿಜೆಪಿ ಟಿಕೆಟ್ ದೊರಕಿದ ನಂತರ ಚುನಾವಣಾ ಸಂದರ್ಭದಲ್ಲೂ ಗೌಡರು ಮತ್ತು ಕುಮಾರಸ್ವಾಮಿ ಅವರ ಪರ ಬಿರುಸಿನ ಪ್ರಚಾರ ಕೈಗೊಂಡರು.


ಪ್ರಜ್ವಲ್ ವಿಷಯಕ್ಕೆ ಸಂಬಂಧಿಸಿದಂತೆ ಶಿವಕುಮಾರ್ ಹಾಗೂ ಕುಮಾರಸ್ವಾಮಿ ನಡುವೆ ಪರಸ್ಪರ ವಾಗ್ದಾಳಿ, ಆರೋಪ–ಪ್ರತ್ಯಾರೋಪ ನಡೆಯುತ್ತಿದೆ. ಇದರ ಮಧ್ಯೆ ಮಂಡ್ಯ, ಮೈಸೂರು, ಹಾಸನ, ರಾಮನಗರದಲ್ಲಿ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ವಿರುದ್ಧ ಜೆಡಿಎಸ್ ಕಾರ್ಯಕರ್ತರು ನಿರಂತರವಾಗಿ ಪ್ರತಿಭಟನೆ ನಡೆಸಿದ್ದಾರೆ.

ಇಂತಹ ಸನ್ನಿವೇಶದಲ್ಲಿ ಅನ್ಯ ಪಕ್ಷದ ಯಾವುದೇ ಮುಖಂಡರು ಮಧ್ಯೆ ಪ್ರವೇಶ ಮಾಡಿಲ್ಲ. ಆದರೆ ಸೋಮಣ್ಣ ಇಂದು ಏಕಾಏಕಿ ಗೌಡರ ಕುಟುಂಬದ ಪರ ನಿಂತು ಸ್ನೇಹಿತ ಶಿವಕುಮಾರ್ ಅವರಿಗೆ ಕಿವಿಮಾತು ಹೇಳಿದ್ದಾರೆ.

ಧನ್ಯತಾ ಬಿ.ಗೌಡಗೆ 607 ಅಂಕ




ಮೈಸೂರು, ಮೇ 10–ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಭಾರತೀಯ ವಿದ್ಯಾಭವನದ ವಿದ್ಯಾರ್ಥಿನಿ ಧನ್ಯತಾ ಬಿ.ಗೌಡ 607 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಕನ್ನಡ–123, ಇಂಗ್ಲೀಷ್–98, ಹಿಂದಿ–99, ಗಣಿತ–90, ವಿಜ್ಞಾನ–100 ಹಾಗೂ ಸಮಾಜ–97 ಅಂಕಗಳನ್ನು ಪಡೆದಿದ್ದಾಳೆ. ಮೈಸೂರಿನ ಅಖಿಲ ಕರ್ನಾಟಕ ಒಕ್ಕಲಿಗ ಮಹಾಸಭಾದ ಅಧ್ಯಕ್ಷ ಎನ್.ಬೆಟ್ಟೇಗೌಡ ಹಾಗೂ ಸುನಿತಾ ಬಿ.ಗೌಡ ದಂಪತಿ ಪುತ್ರಿ.



ಮೈಸೂರು ತಾಲೂಕು ಹುಯಿಲಾಳು ಗ್ರಾಮದ ಶ್ರೀ ಮನೆ ಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ವತಿಯಿಂದ ನಗರದ ಬಸವೇಶ್ವರ ವೃತ್ತದಲ್ಲಿರುವ ಬಸವಣ್ಣ ಅವರ ಪ್ರತಿಮೆಗೆ ಟ್ರಸ್ಟ್ ಅಧ್ಯಕ್ಷ ಹುಯಿಲಾಳು ರಾಮಸ್ವಾಮಿ ಮಾಲಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ದೇವು, ಚಂದು, ದೇವರಾಜ್ ಇದ್ದರು.

ಯುವ ಮುಖಂಡ ಮದನ್ ಮಹದೇಶ್ ಹುಟ್ಟುಹಬ್ಬ: ಉಚಿತ ಆರೋಗ್ಯ ತಪಾಸಣಾ ಶಿಬಿರ



ಯುವ ಮುಖಂಡ ಮದನ್ ಮಹದೇಶ್ ಅವರ ಹುಟ್ಟುಹಬ್ಬದ ಪ್ರಯುಕ್ತ ಉಚಿತ ಅರೋಗ್ಯ ತಪಾಸಣಾ ಶಿಬಿರವನ್ನು ಗೋಕುಲಂನಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾಗಿತ್ತು. ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ಶ್ರೀಮತಿ ಭಾಗ್ಯ ಮಹದೇಶ್, ಎಸ್‌ಬಿಎಂ ಮಂಜು, ಪ್ರೇಮಾ ಶಂಕರೇಗೌಡ, ಡಾ. ಶುಶ್ರುತ್ ಗೌಡ, ಪಾಲಹಳ್ಳಿ ರಾಮಕೃಷ್ಣ, ನಳಿನಿ ಮಂಜುನಾಥ್, ನಂದನ್ ಮಹದೇಶ್, ಪಾಪಣ್ಣ, ಕೃಷ್ಣ, ಪ್ರದೀಪ್ ಕೃಷ್ಣೇಗೌಡ, ಪುರುಷೋತ್ತಮ್, ಪುಟ್ಟಣ್ಣ, ಗೋವಿಂದು, ಮಹದೇಶ್, ಕಾಂತರಾಜ್, ವೆಂಕಟೇಶ್, ಲೋಕೇಶ್, ಅಯೂಬ್ ಖಾನ್ ಇತರರು ಈ ವೇಳೆ ಉಪಸ್ಥಿತರಿದ್ದರು.

ಮೇ 13 ರಿಂದ 27ರವರೆಗೆ ಜಿಲ್ಲೆಯಲ್ಲಿ ಕಂದಾಯ ಸೇವೆಗಳ ವಿಶೇಷ ಅಭಿಯಾನ



ಮೈಸೂರು, ಮೇ 10 (ಆರ್‌ಕೆ)– ಗ್ರಾಮ ಆಡಳಿತ ಅಧಿಕಾರಿಗಳ ವ್ಯಾಪ್ತಿಯಲ್ಲಿ ಬಾಕಿ ಇರುವ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಲು ಮೈಸೂರು ಜಿಲ್ಲೆಯಾದ್ಯಂತ ಮೇ 13 ರಿಂದ 27 ರವರೆಗೆ ಕಂದಾಯ ಸೇವೆಗಳ ವಿಶೇಷ ಅಭಿಯಾನ ಕೈಗೊಳ್ಳಲಾಗಿದೆ.

ಎಲ್ಲಾ ತಾಲೂಕುಗಳ ತಹಸೀಲ್ದಾರ್‌ಗಳು ಪ್ರತೀ ಗ್ರಾಮಗಳಿಗೆ ಭೇಟಿ ನೀಡಿ ಬೆಳಗ್ಗೆ 9.30 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಆಧಾರ್ ಸೀಡಿಂಗ್, ಎನ್‌ಸಿಪಿಐ, ಫ್ರೂಟ್ಸ್ ಅಪ್ಡೇಷನ್, ಬಾಕಿ ಪರಿಹಾರ ಪಾವತಿ, ಪೌತಿ ಖಾತೆ ಅರ್ಜಿ ಸೇರಿದಂತೆ ರೈತರು, ಸಾಮಾಜಿಕ ಪಿಂಚಣಿ ಸೇರಿದಂತೆ ಇನ್ನಿತರ ಸೌಲಭ್ಯಗಳ ಸಂಬಂಧ ಖುದ್ದಾಗಿ ವಿಚಾರಿಸಿ ಸಮಸ್ಯೆಗಳನ್ನು ಬಗೆಹರಿಸುವಂತೆ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಸೂಚನೆ ನೀಡಿದ್ದಾರೆ.

ಮಧ್ಯಾಹ್ನ 2.30 ರಿಂದ ಸಂಜೆ 6 ಗಂಟೆಯವರೆಗೆ ಲ್ಯಾಂಡ್ ಬೀಟ್ ಅಪ್ಡೇಷನ್, ಬಗರ್‌ಹುಕುಂ, ಬರ ಪರಿಹಾರ, ಮಳೆ ಹಾನಿ, ಕಂದಾಯ ಗ್ರಾಮಗಳ ರಚನೆ, ಪ್ರಕೃತಿ ವಿಕೋಪದ ಬಗ್ಗೆ ಗ್ರಾಮದ ಜನರಿಗೆ ಅಗತ್ಯ ಸೇವೆ ಒದಗಿಸಬೇಕು. ರೆವಿನ್ಯೂ ಇನ್ಸ್‌ಪೆಕ್ಟರ್‌ಗಳು ವಿಶೇಷ ಆಂದೋಲನದ ಕೊಂಡಿಯಾಗಿ ಕಾರ್ಯ ನಿರ್ವಹಿಸಬೇಕೆಂದು ತಿಳಿಸಿದ್ದಾರೆ.

ಆಯಾ ದಿನವೇ ಸಂಜೆ ಅಭಿಯಾನದ ಪ್ರಗತಿ ವರದಿಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬೇಕು. ವಾರದಲ್ಲಿ 1 ದಿನ ಅಪರಾಹ್ನ ಸಭೆ ನಡೆಸಿ ತಾಲೂಕು ಕಚೇರಿಯಲ್ಲಿ ಬಾಕಿ ಇರುವ ಆರ್‌ಟಿಸಿ ಕಾಲಂ 3 ಮತ್ತು 9ರ ವ್ಯತ್ಯಾಸ, ಪೋಜಿಣಿ ಅರ್ಜಿಗಳನ್ನು ತ್ವರಿತಗತಿಯಲ್ಲಿ ವಿಲೇವಾರಿ ಮಾಡಬೇಕೆಂದು ಅವರು ಸೂಚನೆ ನೀಡಿದ್ದಾರೆ.

ವಾರಕ್ಕೊಮ್ಮೆ ಜಿಲ್ಲಾಧಿಕಾರಿಗಳು ಕಂದಾಯ ಸೇವೆಗಳ ವಿಶೇಷ ಆಂದೋಲನದ ಪ್ರಗತಿ ಪರಿಶೀಲನೆ ನಡೆಯಲಿದ್ದು, ಪ್ರಗತಿ ತೋರದ ಅಧಿಕಾರಿಗಳ ವಿರುದ್ಧ ಅಗತ್ಯ ಶಿಸ್ತು ಕ್ರಮ ವಹಿಸಲಾಗುವುದು. ಒಟ್ಟಾರೆ ಈ ವಿಶೇಷ ಆಂದೋಲನದಿಂದ ಗ್ರಾಮೀಣ ಪ್ರದೇಶದ ರೈತರ ಸಮಸ್ಯೆಗಳನ್ನು ಇತ್ಯರ್ಥಪಡಿಸುವ ಜೊತೆಗೆ ಸಾಮಾಜಿಕ ಭದ್ರತಾ ಯೋಜನೆಗಳ ಪಿಂಚಣಿಯನ್ನು ತಲುಪಿಸುವಲ್ಲಿ ಯಶಸ್ವಿಯಾಗಲಿದೆ ಎಂದು ಡಾ. ರಾಜೇಂದ್ರ ತಿಳಿಸಿದ್ದಾರೆ.

ಲೈಂಗಿಕ ಪ್ರಕರಣದಲ್ಲಿ ರಾಜಕೀಯ ಕೆಸರೆರಚಾಟ ನಿಲ್ಲಿಸಿ ಸಂತ್ರಸ್ತೆಯರಿಗೆ ನ್ಯಾಯ ಕೊಡಿಸೋಣ

ಪಕ್ಷಾತೀತವಾಗಿ ಸಹಕರಿಸಲು ಅಹಿಂದ ಬಳಗ ಮನವಿ

ಮೈಸೂರು, ಮೇ.10(ಜಿಎ)–ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ಪ್ರಕರಣದಲ್ಲಿ ರಾಜಕೀಯ ಕೆಸರೆರಚಾಟ ನಿಲ್ಲಿಸಿ, ಸಂತ್ರಸ್ತೆಯರಿಗೆ ನ್ಯಾಯ ಕೊಡಿಸಲು ಪಕ್ಷಾತೀತವಾಗಿ ಸಹಕರಿಸಿ ಎಂದು ಅಹಿಂದ ಬಳಗ ಒತ್ತಾಯಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಬಳಗದ ಅಹಿಂದ ಜವರಪ್ಪ ಮಾತನಾಡಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದಿರುವ ಹಾಸನದಲ್ಲಿ ನಡೆದಿದೆ ಎನ್ನಲಾದ ಲೈಂಗಿಕ ದೌರ್ಜನ್ಯ ಪ್ರಕರಣ ಮತ್ತು ಆನಂತರದ ಬೆಳವಣಿಗೆಗಳು ಇಡೀ ನಾಗರಿಕ ಸಮಾಜ ತಲೆತಗ್ಗಿಸುವಂತಹದ್ದು, ಲೈಂಗಿಕ ದೌರ್ಜನ್ಯ ಮತ್ತು ಅಶ್ಲೀಲ ವೀಡಿಯೋ ಹಂಚಿಕೆಯ ವಿಷಯದಲ್ಲಿ ರಾಜಕೀಯ ನಾಯಕರು ಪರಸ್ಪರ ನಡೆಸುತ್ತಿರುವ ಕೆಸರೆರಚಾಟವನ್ನು ಸಾಕು ಮಾಡಿ. ನ್ಯಾಯ ಸಮ್ಮತ ತನಿಖೆಗೆ ಸಹಕರಿಸಿ. ಪ್ರತಿಭಟನೆಯ ಹೆಸರಿನಲ್ಲಿ ಲೈಂಗಿಕ ದೌರ್ಜನ್ಯದ ಅಂಶವನ್ನು ಬಿಟ್ಟು ತನಿಖೆ ದಿಕ್ಕು ತಪ್ಪಿಸುತ್ತಿರುವುದು ಸರಿಯಲ್ಲ ಎಂದರು. ಈ ಪ್ರಕರಣದಲ್ಲಿ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಮತ್ತು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರು ಸಿದ್ದರಾಮಯ್ಯ ಅವರ ಹೆಸರನ್ನು ದುರುದ್ದೇಶದಿಂದ ಎಳೆದು ತಂದಿರುವುದು ಸರಿಯಲ್ಲ. ಸಿದ್ದರಾಮಯ್ಯ ಅವರು ಬಡ ಮಹಿಳೆಯರ ಕಣ್ಣೀರು ಒರೆಸುವ ಕಾರ್ಯವನ್ನು ತಮ್ಮ ರಾಜಕೀಯದ ಉದ್ದಕ್ಕೂ ಮಾಡಿಕೊಂಡು ಬಂದಿದ್ದಾರೆ. ಅವರದ್ದು ಸೈದ್ಧಾಂತಿಕ ಬದ್ಧತೆಯ ರಾಜಕಾರಣ, ನಿಮ್ಮ ಹಾಗೇ ಫಲಾಯನದ ರಾಜಕಾರಣವಲ್ಲ.

ಹಿರಿಯ ರಾದ ತಾವು ಆಧಾರ ರಹಿತ ಆರೋಪಕ್ಕೆ ಮುಂದಾಗಬಾರದು ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಉತ್ತನ ಹಳ್ಳಿ ಶಿವಣ್ಣ, ಹರೀಶ್ ಬಾಬಣ್ಣ, ಮಹೇಶ್ ಸೋಸಲೆ, ಸಚಿನ್ ಉಪಸ್ಥಿತರಿದ್ದರು.



ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಮೈಸೂರು ಘಟಕದ ವತಿಯಿಂದ ಶ್ರೀ ಬಸವೇಶ್ವರರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಸಂಘದ ಜಿಲ್ಲಾಧ್ಯಕ್ಷ ಜೆ.ಗೋವಿಂದರಾಜು, ಕಾರ್ಯದರ್ಶಿ ರೇವಣ್ಣ, ಖಜಾಂಚಿ ರಮೇಶ್ ಕುಮಾರ್, ಹಿರಿಯ ಉಪಾಧ್ಯಕ್ಷ ಮಾಲಂಗಿ ಸುರೇಶ್, ಉಪಾಧ್ಯಕ್ಷ ರಘು ಎಸ್. ಹಾಗೂ ಮಹಾದೇವ ಜಯಪ್ಪ ಸುರೇಶ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.05.2024 ಶನಿವಾರ, ಮಳೆ ನಕ್ಷತ್ರ: ಕೃತ್ತಿಕ 11.05.2024 ರಿಂದ 24.05.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಮೃಗಶಿರ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸಿ.ಎಫ್.ಟಿ.ಆರ್.ಐ ಶೋಧ ಅನುಶೋಧ –ಪ್ರಾಯೋಜಿತ ಕಾರ್ಯಕ್ರಮ, 6.40 ಪದ ಸಂಸ್ಕೃತಿ–ಟಿ.ಎಸ್. ಗೋಪಾಲ್, 6.50 ರೈತರಿಗೆ ಸಲಹೆ, 7.15 'ಸೌಹಾರ್ದತೆಯ ಸಂಕೇತಗಳು' ಬಾನುಲಿ ಸರಣಿ, ಪ್ರಸ್ತುತಿ–ಅಬ್ದುಲ್ ರಶೀದ್, 8.30 'ಹಾದಿಯಲ್ಲಿ ಕಂಡ ಮುಖ' ಬಾನುಲಿ ಸರಣಿ – ದುರ್ಮರುಗಿ ಅಲೆಮಾರಿ ಕಾಯಕದ ಫಕೀರಪ್ಪ ಮತ್ತು ದುರ್ಗಮ್ಮ ಅವರೊಂದಿಗೆ ಮಾತುಕತೆ, ಪ್ರಸ್ತುತಿ–ಅಬ್ದುಲ್ ರಶೀದ್, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಬಾಂಬೆ ಜಯಶ್ರೀ–ಹಾಡುಗಾರಿಕೆ, 11.00 ಮಿಶ್ರಮಾಧುರ್ಯ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ, 1.00 ಚಿತ್ರಗೀತೆಗಳು, 1.20 ಭಾವ ಗೀತೆ – ಸಿದ್ಧರಾಮ, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ–ಮೈಸೂರಿನ ಅರಿವು ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ– 'ನನ್ನ ಬಾ' ರಚನೆ–ಪ್ರಶಾಂತ್ ಹಿರೇಮಠ, ನಿರ್ಮಾಣ–ಉಮೇಶ್ ಎಸ್. ಎಸ್, 4.30 ನೆನಪಿನಂಗಳ–ಹಿರಿಯ ರಂಗ ಕಲಾವಿದ ಹೊಸಹೊಳಲು ಹೆಚ್. ಆರ್. ನಂಜಶೆಟ್ಟಿ ಅವರೊಂದಿಗೆ ಎನ್.ವಿ. ರಮೇಶ್ ನಡೆಸಿದ್ದ ಸಂವಾದ, 6.50 ಕಿಸಾನ್‌ವಾಣಿ–ತರಕಾರಿ ಬೇಸಾಯ ಈ ಕುರಿತು ಕೆ. ಆರ್. ನಗರ ತಾಲೂಕು ಬಸವ ರಾಜಪುರದ ಬಿ.ಎಸ್.ಅನುಸೂಯ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್. ಕೇಶವಮೂರ್ತಿ, 8.00 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಜಿ. ಕೆ. ರಘುರಾಮನ್ – ನಾದಸ್ವರ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ

■ **ಪೆಟ್ ಕ್ಲಿನಿಕ್, ವಿಜಯನಗರ ನಾಲ್ಕನೇ ಹಂತ :** ನಾಯಿ ಮತ್ತು ಬೆಕ್ಕುಗಳಿಗೆ ಉಚಿತ ರೇಬೀಸ್ ರೋಗ ನಿರೋಧಕ ಲಸಿಕೆ ಮತ್ತು ಉಚಿತ ಜಂತುಹುಳು ನಿವಾರಣಾ ಶಿಬಿರ, ಸ್ಥಳ: ಪೆಟ್ ಕ್ಲಿನಿಕ್, ವಿಜಯನಗರ 4ನೇ ಹಂತ, ಬೆಳಗ್ಗೆ 8 ರಿಂದ.

■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್:** 134ನೇ ವರ್ಷದ ಶ್ರೀ ರಾಮೋತ್ಸವ, ಬೆಳಗ್ಗೆ 8ಕ್ಕೆ ಅಭಿಷೇಕ, ಅರ್ಚನೆ, ಮಹಾಮಂಗಳಾರತಿ, ಸ್ಥಳ: ಸಭಾದ ಆವರಣ, ಶ್ರೀರಾಮಪೇಟೆ.

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ :**ಆರ್ಟಿಸ್ಟ್ರಿ ಚಿನ್ನಾಭರಣ ಪ್ರದರ್ಶನ, ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಶೋ ರೂಂ, ಬಿ.ಎನ್. ರಸ್ತೆ, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ, ಕಲಾ ಮತ್ತು ಸಾಹಿತ್ಯಿಕ ಸಂಘದ ಸಂಪಾದಕ ಮಂಡಳಿ :** ವಾರ್ಷಿಕ ಕಲಾ–ಸಾಹಿತ್ಯಿಕ ಪರ್ವ 'ಶಬ್ದ', ಉಪಸ್ಥಿತರು : ಸಂಗೀತ ಸಂಯೋಜಕ ಡಾ. ವಿ. ನಾಗೇಂದ್ರ ಪ್ರಸಾದ್, ಸ್ಥಳ: ವಿಶ್ವವಿದ್ಯಾನಿಲಯ ಆವರಣ, ಬೆಳಗ್ಗೆ 10ಕ್ಕೆ.

■ **ಶ್ರೀ ಶಂಕರ ಜಯಂತಿ ಸಭಾ :** ಶ್ರೀ ಶಂಕರ ಭಗವತ್ಪಾದರ ಜಯಂತ್ಯುತ್ಸವ ಹಾಗೂ 45ನೇ ವಾರ್ಷಿಕೋತ್ಸವ, ಬೆಳಗ್ಗೆ 9.30 ರಿಂದ ಶ್ರೀಮದ್ ಭಗವತ್ಪಾದರಿಗೆ ರುದ್ರಾಭಿಷೇಕ, ಷೋಡಶೋಪಚಾರ ಪೂಜೆ, ಸಹಸ್ರ ನಾಮಾರ್ಚನೆ, ಬೆಳಗ್ಗೆ 11.30ಕ್ಕೆ ಮಹಾಮಂಗಳಾರತಿ, ರಾಜಾಶೀರ್ವಾದ, ಪ್ರಸಾದ ವಿನಿಯೋಗ, ಸಂಜೆ 5 ರಿಂದ ವಿದುಷಿ ಡಾ. ವೀಣಾ ಮತ್ತು ವೃಂದದವರಿಂದ ವೀಣಾವಾದನ, ಸ್ಥಳ: ಶ್ರೀ ಶಂಕರ ಜಯಂತಿ ಸಭಾ, ಸಮುದಾಯ ಭವನ, ತೆಂಗಿನ ತೋಪು, ಸರಸ್ವತಿಪುರಂ.

■ **ಮೈಸೂರು ಆರ್ಟ್ ಗ್ಯಾಲರಿ :** ಸಾಧಕರೊಂದಿಗೆ ಸಂವಾದ–92, ತಿಂಗಳ ಸಾಧಕರು, ಅನಾಥ ಮಕ್ಕಳ ಆಶ್ರಯದಾತ ದಂಪತಿ ಎಸ್.ಕೆ. ಸುರೇಶ್ ಮತ್ತು ಶ್ರೀಮತಿ ಎಸ್.ಎಲ್. ಪಾರ್ವತಿ, ಮುಖ್ಯ ಅತಿಥಿಗಳು : ಸಮಾಜ ಸೇವಾ ಕಾರ್ಯಕರ್ತ ಪಿ. ಜಯರಾಜ ಹೆಗ್ಡೆ, ಅಧ್ಯಕ್ಷತೆ : ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಅಧ್ಯಕ್ಷ ಎಲ್. ಶಿವಲಿಂಗಪ್ಪ, ವಿಶೇಷ ಆಹ್ವಾನಿತರು : ಉದ್ಯಮಿ ಎ. ವಿಶ್ವನಾಥ್, ಲೇಖಕಿ ಶ್ರೀಮತಿ ಪುಷ್ಪಲತಾ ಫಣಿರಾಜ್, ಗೋವಿಂದಾಚಾರ್, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ಬೆಳಗ್ಗೆ 11ಕ್ಕೆ.

■ **ಮೈಸೂರು ಸ್ಕೂಲ್ ಆಫ್ ಆರ್ಕಿಟೆಕ್ಚರ್ :** ನಮ್ಮ ಎಂಎಸ್‌ಎ ಹಬ್ಬ, ಮುಖ್ಯ ಅತಿಥಿಗಳು : ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ ಕುಲಪತಿ ಡಾ. ಎಸ್. ವಿದ್ಯಾಶಂಕರ್, ವಿಟಿಯು ಪ್ರಾದೇಶಿಕ ನಿರ್ದೇಶಕ ಡಾ. ಟಿ.ಪಿ. ರೇಣುಕಾಮೂರ್ತಿ, ಸ್ಥಳ: ಎಂಎಸ್‌ಎ ಸಭಾಂಗಣ, ಮೈಸೂರು ಸ್ಕೂಲ್ ಆಫ್ ಆರ್ಕಿಟೆಕ್ಚರ್, ಸಂಜೆ 4ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮುಕ್ತಿದಾನಂದ ಅವರಿಂದ ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಕಲಾಸುರುಚಿ, ಕುತೂಹಲಿ–ಕನ್ನಡ, ದಿ ಅಕಾಡೆಮಿ ಟ್ರಸ್ಟ್ :** ಸೈನ್ಸ್ ಸಂಜೆ, ಸೆರಾಮಿಕ್ಸ್ : ಕುಂಬಾರನಿಂದ ಚಂದಿರನವರೆಗೆ ವಿಶ್ರಾಂತ ಹಿರಿಯ ವಿಜ್ಞಾನಿ ಡಾ. ರಾಯಸ ರಾಮಚಂದ್ರ ರಾವ್, ಸ್ಥಳ: ಸುರುಚಿ ರಂಗಮನೆ, ಕುವೆಂಪುನಗರ, ಸಂಜೆ 6.30 ರಿಂದ.

■ **ಅಂಬೇಡ್ಕರ್ ವಿವಿದೋದ್ದೇಶ ಸಹಕಾರ ಸಂಘ :** ದಿವಂಗತ ವಿ. ಶ್ರೀನಿವಾಸ ಪ್ರಸಾದ್ ಅವರಿಗೆ ನುಡಿನಮನ, ಉಪಸ್ಥಿತರು : ಮಜಿ ಶಾಸಕ ಜಯಣ್ಣ, ಸಿದ್ದಯ್ಯ, ಕೆ.ಎಂ. ಸುರೇಶ್ ಕುಮಾರ್, ಮಾಜಿ ಮೇಯರ್ ಪುರುಷೋತ್ತಮ್, ಅಚ್ಯುತಾನಂದ, ಎಂ. ಸುರೇಶ್, ತುಂಬಲ ರಾಮಣ್ಣ, ಸ್ಥಳ: ವಿಶ್ವಮೈತ್ರಿ ಬುದ್ಧ ವಿಹಾರ, ಬಲ್ಲಾಳ್ ಸರ್ಕಲ್, ಬೆಳಗ್ಗೆ 10ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 11 ಶನಿವಾರ 2024

ಸಂಪುಟ: 45 | ಸಂಚಿಕೆ: 25 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com, website: www.mysurumithra.com

ಪ್ರಜ್ವಲ್ ರೇವಣ್ಣ ವಿರುದ್ಧ ಮತ್ತೊಂದು ಎಫ್‌ಐಆರ್

ಬಿಗಿಗೊಳ್ಳುತ್ತಿವೆ ಕಾನೂನಿನ ಕುಣಿಕೆಗಳು!



ಬೆಂಗಳೂರು, ಮೇ 10– ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ದೇಶ ಬಿಟ್ಟು ಪರಾರಿಯಾಗಿರುವ ಹಾಸನ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಮೂರನೇ ಎಫ್‌ಐಆರ್ ದಾಖಲಾಗಿದ್ದು ಪೊಲೀಸರು ಎಫ್‌ಐಆರ್‌ನಲ್ಲಿ ಒಂದಕ್ಕಿಂತ ಒಂದು ಕಠಿಣ ಸೆಕ್ಷನ್‌ಗಳನ್ನು ನಮೂದಿಸಿದ್ದು, ಪ್ರಜ್ವಲ್ ರೇವಣ್ಣ ಅವರಿಗೆ ದಿನೇ ದಿನೆ ಕಾನೂನಿನ ಉರುಳು ಬಿಗಿಗೊಳ್ಳುತ್ತಿದೆ.

ಪ್ರಜ್ವಲ್ ಮತ್ತು ಅವರ ತಂದೆ ಶಾಸಕ ಹೆಚ್.ಡಿ.ರೇವಣ್ಣ ವಿರುದ್ಧ ಹೊಳೆ ನರಸೀಪುರ ಠಾಣೆಯಲ್ಲಿ ಏಪ್ರಿಲ್ 28ರಂದು ದಾಖಲಾದ ಪ್ರಕರಣದಲ್ಲಿ ಎಲ್ಲವೂ ಜಾಮೀನು ರಹಿತವಲ್ಲದ ಸೆಕ್ಷನ್‌ಗಳನ್ನು ನಮೂದಿಸಲಾಗಿತ್ತು. ಈ ಪ್ರಕರಣದಲ್ಲಿ ಪ್ರಜ್ವಲ್ ನ್ಯಾಯಾಲಯದ ಮುಂದೆ ಹಾಜರಾದ ತಕ್ಷಣವೇ ಜಾಮೀನು ದೊರೆಯುವ ಸಾಧ್ಯತೆ ಇತ್ತು. ಆದರೆ ಮೇ 1ರಂದು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ನೀಡಿದ ದೂರಿಗೆ ಪೊಲೀಸರು ಕಠಿಣ ಸೆಕ್ಷನ್‌ಗಳನ್ನು ನಮೂದಿಸಲಾಗಿತ್ತು. ಅದೇ ರೀತಿ ಇದೀಗ ಮತ್ತೋರ್ವ ಸಂತ್ರಸ್ತೆ ನೀಡಿರುವ ದೂರಿನನ್ವಯ ಪೊಲೀಸರು ಪ್ರಜ್ವಲ್ ವಿರುದ್ಧ ಭಾರತೀಯ ದಂಡ ಸಂಹಿತೆ 376(2) (ಎನ್), 376(2) (ಕೆ), 354(ಎ), 354(ಬಿ), 354(ಸಿ) ಮತ್ತು 506ರಡಿ ಪ್ರಕರಣವನ್ನು ದಾಖಲಿಸಲಾಗಿದೆ. ಪ್ರಜ್ವಲ್ ವಿರುದ್ಧ ದಾಖಲಾಗಿದ್ದ 2ನೇ ಎಫ್‌ಐಆರ್‌ನಲ್ಲೂ ಕೂಡ ಇದೇ ಸೆಕ್ಷನ್‌ಗಳನ್ನು ನಮೂದು ಮಾಡಲಾಗಿತ್ತು. ಭಾರತೀಯ ದಂಡ ಸಂಹಿತೆ 376(2) (ಎನ್)–ಅತ್ಯಾಚಾರ ಮಾಡುವಾಗ ದೈಹಿಕವಾಗಿ ಘಾಸಿಗೊಳಿಸುವುದು (ಈ ಆರೋಪ ● 7ನೇ ಪುಟಕ್ಕೆ

ಬಸವೇಶ್ವರರ ಪ್ರತಿಮೆಗೆ ಸಿಎಂ ಸಿದ್ದರಾಮಯ್ಯ ಪುಷ್ಪಾರ್ಚನೆ



ಮೈಸೂರಿನ ಗನ್‌ಹೌಸ್ ಬಳಿಯಿರುವ ಬಸವೇಶ್ವರರ ಪ್ರತಿಮೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪುಷ್ಪ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಸುತ್ತೂರು ಶ್ರೀ ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪ್ರದೀಪ್‌ಕುಮಾರ್, ವರುಣ ಮಹೇಶ್ ಇನ್ನಿತರರನ್ನು ಕಾಣಬಹುದು.

ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣ ದಿನಕ್ಕೊಂದು ತಿರುವು; ಡಿಸಿಎಂ ಡಿ.ಕೆ.ಶಿವಕುಮಾರ್ ವಿರುದ್ಧ ಸಮರ ಸಾರಿದ್ದ

ಬಿಜೆಪಿ ಮುಖಂಡರೂ ಆದ ವಕೀಲ ದೇವರಾಜೇಗೌಡ ಪೊಲೀಸ್ ವಶಕ್ಕೆ



ಬೆಂಗಳೂರು, ಮೇ 10– ಬಿಜೆಪಿ ಮುಖಂಡರೂ ಆದ ವಕೀಲ ದೇವರಾಜೇಗೌಡ ಅವರನ್ನು ಚಿತ್ರದುರ್ಗ ಜಿಲ್ಲೆ ಹಿರಿಯೂರಿನಲ್ಲಿ ಪೊಲೀಸರು ವಶಕ್ಕೆ ಪಡೆದಿದ್ದಾರೆ. ದೇವರಾಜೇಗೌಡರ ವಿರುದ್ಧ ಕಳೆದ ಏಪ್ರಿಲ್ 1ರಂದು ಹೊಳೆ ನರಸೀಪುರ ಠಾಣೆಯಲ್ಲಿ ಮಹಿಳೆಯೊಬ್ಬರು ಲೈಂಗಿಕ ದೌರ್ಜನ್ಯ ದೂರು ದಾಖಲಿಸಿದ್ದರು. ಮತ್ತೊಂದೆಡೆ ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರು, ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯದ ಪೆನ್‌ಡ್ರೈವ್ ಅನ್ನು ದೇವರಾಜೇಗೌಡರೇ ಬಿಡುಗಡೆ ಮಾಡಿದ್ದು, ಎಸ್‌ಐಟಿ ಮೇಲೆ ತಪ್ಪು ಅಭಿಪ್ರಾಯ ಬರುವಂತೆ ಪತ್ರಿಕಾಗೋಷ್ಠಿ ನಡೆಸಿ ಅಪಪ್ರಚಾರ ಮಾಡುತ್ತಿದ್ದಾರೆ. ಹೀಗಾಗಿ ಅವರನ್ನು ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕೆಂದು ಹೈಗ್ರೌಂಡ್ ಪೊಲೀಸ್ ಠಾಣೆಯಲ್ಲಿ ಇಂದು ದೂರು ದಾಖಲಿಸಿದ್ದರು.

ದೇವರಾಜೇಗೌಡರನ್ನು ಯಾವ ಪ್ರಕರಣದಲ್ಲಿ ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂಬುದು ಖಚಿತವಾಗಿಲ್ಲ. ಆದರೆ, ಇಂದು ಪತ್ರಿಕಾಗೋಷ್ಠಿ ನಡೆಸುತ್ತೇನೆ ಎಂದು ಹೇಳಿದ್ದ ದೇವರಾಜೇಗೌಡರು, ● 7ನೇ ಪುಟಕ್ಕೆ

ಎಸ್‌ಎಸ್‌ಎಲ್‌ಸಿ ಪಾಸಾದ ಸಂಭ್ರಮದಲ್ಲೇ ನಿಶ್ಚಿತಾರ್ಥ; ಬಳಿಕ ಬಾಲಕಿಯ ಬರ್ಬರ ಹತ್ಯೆ!!

● ಸೋಮವಾರಪೇಟೆ ಬಳಿ ಭೀಕರ ಘಟನೆ: ನಿಶ್ಚಿತಾರ್ಥ ಮಾಡಿಕೊಂಡ ದುಷ್ಕರ್ಮಿ ಬಾಲಕಿಯ ರುಂಡದೊಂದಿಗೆ ಪರಾರಿ

● ಅಪ್ರಾಪ್ತೆ ವಿವಾಹ ಮಾಡದಂತೆ ಅಧಿಕಾರಿಗಳಿಂದ ಅರಿವು; ಇದಕ್ಕೆ ರೊಚ್ಚಿಗೆದ್ದ ವ್ಯಕ್ತಿಯಿಂದ ರಾಕ್ಷಸೀ ಕೃತ್ಯ



ಯು.ಎಸ್.ಮೀನಾ ಪ್ರಕಾಶ್ ಓಂಕಾರಪ್ಪ

ಮಡಿಕೇರಿ, ಮೇ 10–ಕೊಡಗಿನ ಕಾಡಂಚಿನಲ್ಲಿರುವ ಕುಗ್ರಾಮದ ಸರ್ಕಾರಿ ಪ್ರೌಢಶಾಲೆಯ ಏಕೈಕ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿನಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಶಾಲೆಗೆ ಶೇ.100ರಷ್ಟು ಫಲಿತಾಂಶದ ಹಿರಿಮೆ ತಂದುಕೊಟ್ಟ ಸಂಭ್ರಮದಿಂದ ಹೊರಬರುವ ಮುನ್ನವೇ ಈಕೆಯ ತಲೆಯನ್ನು ತುಂಡರಿಸಿ ಬರ್ಬರವಾಗಿ ಹತ್ಯೆ ಮಾಡಿ, ಹಂತಕ ಆಕೆಯ ರುಂಡವನ್ನು ಕೊಂಡೊಯ್ದಿರುವ ರಾಕ್ಷಸೀ ಕೃತ್ಯ ಸೋಮವಾರಪೇಟೆ ತಾಲೂಕು ಸೂರ್ಲಬ್ಬಿ ಗ್ರಾಮದಿಂದ ವರದಿಯಾಗಿದೆ.

ಈ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಏಕೈಕ ವಿದ್ಯಾರ್ಥಿನಿಯಾಗಿದ್ದ ಕುಂಬಾರಗಡಿಗೆ ನಿವಾಸಿ ಸುಬ್ರಮಣಿ ಮತ್ತು ಜಾನಕಿ ದಂಪತಿ ಪುತ್ರಿ ಯು.ಎಸ್. ಮೀನಾ (15) ಬರ್ಬರವಾಗಿ ಹತ್ಯೆಗೀಡಾದವಳಾಗಿದ್ದು, ಈಕೆಯನ್ನು ಹಮ್ಮಿಯಾಲ ಗ್ರಾಮದ ಮೊಣ್ಣಂಡ ಪ್ರಕಾಶ್ ಓಂಕಾರಪ್ಪ(32) ಕೊಲೆ ಮಾಡಿ ಪರಾರಿಯಾಗಿದ್ದಾನೆ.

ವಿವರ: ಸೋಮವಾರಪೇಟೆ ತಾಲೂಕಿನ ಕುಗ್ರಾಮ ಸೂರ್ಲಬ್ಬಿಯ ಕುಂಬಾರಗಡಿಗೆ ನಿವಾಸಿ ಸುಬ್ರಮಣಿ ಮತ್ತು ಜಾನಕಿ ದಂಪತಿ ತಮ್ಮ ಪುತ್ರಿ ಮೀನಾಳನ್ನು ಹೆಮ್ಮಿಯಾಲ ಗ್ರಾಮದ ಮೊಣ್ಣಂಡ ಪ್ರಕಾಶ್ ಓಂಕಾರಪ್ಪ ಎಂಬಾತನಿಗೆ ವಿವಾಹ ಮಾಡಲು ಗುರುವಾರ ಬೆಳಗ್ಗೆ ನಿಶ್ಚಿತಾರ್ಥ ಕಾರ್ಯ ನೆರವೇರಿಸಿದ್ದರು. ಅಷ್ಟರಲ್ಲಿ ಎಸ್‌ಎಸ್ ಎಲ್‌ಸಿ ಫಲಿತಾಂಶ ಬಂದಿದ್ದು, ಮೀನಾ ಈ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದಳು. ಸೂರ್ಲಬ್ಬಿ ಸರ್ಕಾರಿ ಪ್ರೌಢಶಾಲೆಯ ಏಕೈಕ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿನಿ ಈಕೆ ಆಗಿದ್ದರಿಂದ ಶಾಲೆಯು ಶೇ.100 ರಷ್ಟು ಫಲಿತಾಂಶ ಪಡೆದ ಹಿರಿಮೆಗೆ ಪಾತ್ರವಾಗಿತ್ತು. ಈ ಹಿನ್ನೆಲೆಯಲ್ಲಿ ಶಾಲೆ ಮತ್ತು ಮೀನಾ ಮನೆಯಲ್ಲಿ ಸಂಭ್ರಮ ಮನೆ ಮಾಡಿತ್ತು. ಆದರೆ ಅಪ್ರಾಪ್ತೆ ಮೀನಾಳಿಗೆ ನಿಶ್ಚಿತಾರ್ಥವಾಗಿರುವ ಮಾಹಿತಿಯನ್ನು ಗ್ರಾಮಸ್ಥರಿಂದ ಪಡೆದಿದ್ದ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಮಧ್ಯಾಹ್ನದ ವೇಳೆಗೆ ಸೂರ್ಲಬ್ಬಿ ಗ್ರಾಮಕ್ಕೆ ಭೇಟಿ ನೀಡಿ, ಮೀನಾ ಅಪ್ರಾಪ್ತೆಯಾಗಿರುವುದರಿಂದ ● 7ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಗೆಳೆಯ : (ಮಂಜುಗಡ್ಡೆ ಕೈಯ್ಯಲ್ಲಿ ಹಿಡಿದುಕೊಂಡು ಅದನ್ನೇ ನೋಡ್ತಾ ಇದ್ದ ಸ್ನೇಹಿತನಿಗೆ) "ಆವಾಗಲಿಂದ ಏನ್ ನೋಡ್ತಾ ಇದ್ದೀಯಾ?"

ಆತ : "ಇದರಲ್ಲಿ ಎಲ್ಲೋ ನೀರು ಸೋರ್‍ತಾ ಇದೆ. ಎಲ್ಲಿ ಅಂತಾ ಗೊತ್ತಾಗ್ತಾ ಇಲ್ಲ!"

ಮೈಸೂರು ಮಿತ್ರ

ಶನಿವಾರ, 11 ಮೇ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಕೇಳಿದರೂ, ನೋಡಿದರೂ, ನೆನಪು ಮಾಡಿಕೊಂಡರು, ಹೇಳಿದರೂ, ಅನುಮೋದಿಸಿದರೂ ಧರ್ಮವು ಯಾವಾಗಲೂ ಮನುಷ್ಯನನ್ನು ಕಾಪಾಡುತ್ತದೆ. – ಸುಭಾಷಿತ ಸುಧಾನಿಧಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಯಾರೂ ಇಲ್ಲದ ಊರಿಗೆ ಹೋಗಿ ನೀರು ಮಜ್ಜಿಗೆ ಬಯಸಿದಂತೆ

ನಿಮ್ಮ ಪತ್ರಗಳು

■ 'ವಿ.ಶ್ರೀನಿವಾಸ್ ಪ್ರಸಾದ್ ಬೊಟಾನಿಕಲ್ ಗಾರ್ಡನ್' ಮರು ನಾಮಕರಣ ಮಾಡಿ

ಮಾನ್ಯರೇ,

ನಂಜನಗೂಡು ಕ್ಷೇತ್ರವನ್ನು ಮೈಸೂರಿನ ಉಪನಗರವನ್ನಾಗಿ ಅಭಿವೃದ್ಧಿಗೊಳಿಸಲು



ಪಣ ತೊಟ್ಟು ತಮಿಳುನಾಡಿನ ಊಟಿಯ ಸರ್ಕಾರಿ ಬೊಟಾನಿಕಲ್ ಗಾರ್ಡನ್ ಮಾದರಿಯಲ್ಲಿ ನಂಜನಗೂಡಿನ ಪ್ರವಾಸಿ ಮಂದಿರದ ಬಳಿ 'ಸಸ್ಯ ಕಾಶಿ' ನಿರ್ಮಿಸಲು ನೀಲನಕ್ಷೆ ರೂಪಿಸಿ ವಿಶೇಷ ಆಸಕ್ತಿ ವಹಿಸಿ ಕಾರ್ಯರೂಪಕ್ಕೆ ತರಲು ಪ್ರಮುಖ ಕಾರಣಕರ್ತರಾಗಿದ್ದವರು ಅಂದಿನ ಕಂದಾಯ ಸಚಿವ ವಿ.ಶ್ರೀನಿವಾಸ್ ಪ್ರಸಾದ್. 2015ರಲ್ಲಿ ಸಿಎಂ ಸಿದ್ಧರಾಮಯ್ಯರಿಂದ ಇದಕ್ಕೆ ಚಾಲನೆ ನೀಡಿದ್ದು ಸರಿಯಷ್ಟೆ.

ಸರಿ ಸುಮಾರು ಹತ್ತೊಂಬತ್ತುವರೆ ಎಕರೆಯಲ್ಲಿ ಕಪಿಲ ನದಿ ತೀರಕ್ಕೆ ಹೊಂದಿ ಕೊಂಡಂತಿರುವ ತೋಟಗಾರಿಕೆ, ಲೋಕೋಪಯೋಗಿ ಇಲಾಖೆಗಳಿಗೆ ಸೇರಿದ ಭೂ ಪ್ರದೇಶವನ್ನು ಬಳಸಿಕೊಂಡು ವಿವಿಧ ರೀತಿಯ ಅಲಂಕಾರಿಕ ಹೂವಿನ ಗಿಡಗಳು, ಔಷಧೀಯ ಗಿಡಗಳ ಬೆಳೆಸುವಿಕೆ, ಮ್ಯೂಸಿಯಂ, ಕಪಿಲ ಸ್ನಾನ ಘಟ್ಟದವರೆಗೆ ವಾಯು ವಿಹಾರಿಗಳಿಗೆ ಪ್ರತ್ಯೇಕ ಮಾರ್ಗ, ಲಾಲ್‌ಬಾಗ್ ಮಾದರಿಯಲ್ಲಿ ಗಾಜಿನ ಮನೆ, ಮಕ್ಕಳು ಆಟವಾಡಲು ಆಟಿಕೆಗಳು, ನದಿ ವೀಕ್ಷಣೆ ನಿರ್ಮಿಸುವ ಕುರಿತಂತೆ ಈ ಬೃಹತ್ ಯೋಜನೆಯಲ್ಲಿ ಎಳ್ಳಷ್ಟು ಕೆಲಸ ನಡೆದಿದೆ ವಿನಃ ಶ್ರೀನಿವಾಸಪ್ರಸಾದ್ ಅಂದುಕೊಂಡಂತೆ ಈ ಕನಸಿನ ಯೋಜನೆ ಅಭಿವೃದ್ಧಿಗೊಳ್ಳದೆ ಬದಲಾದ ರಾಜಕೀಯ ಬೆಳವಣಿಗೆಗಳಿಂದ ಆಮೆಗತಿಯಲ್ಲಿ ಮಂದಗತಿಯಲ್ಲಿ ಸಾಗಿದ್ದು ವಿಪರ್ಯಾಸ. ಸದ್ಯ, ಇದಕ್ಕೆ ಚಾಲನೆ ನೀಡಿ ಇನ್ನೇನು ಒಂದು ದಶಕವೇ ಕಳೆದು ಹೋಗುತ್ತಿರುವುದು ಕಾಮಗಾರಿ ಅಪೂರ್ಣವಾಗಿರುವುದರಿಂದ ಕಪಿಲ ನದಿ ತೀರದಲ್ಲಿ ಸುಂದರವಾದ ಸಸ್ಯಕಾಶಿ ನಿರ್ಮಾಣವಾಗುತ್ತಿದೆ ಎಂದುಕೊಂಡಿದ್ದ ಜನತೆಯಲ್ಲಿ ಸಹಜವಾಗಿ ಬೇಸರ ತರಿಸಿದೆ. ಕೆಲವು ದಿನಗಳ ಹಿಂದೆ ನಮ್ಮನ್ನು ಅಗಲಿದ ಮುತ್ಸದ್ದಿ ರಾಜಕಾರಣಿ ಸಂಸದ ವಿ.ಶ್ರೀನಿವಾಸಪ್ರಸಾದ್ ಅವರ ಕನಸಿನ ಈ ಯೋಜನೆ ಪೂರ್ಣಗೊಳ್ಳಲು ಸಿಎಂ ಸಿದ್ದರಾಮಯ್ಯ ಸಂಬಂಧಪಟ್ಟವರಿಗೆ ತಾಕೀತು ಮಾಡಿ ಆದಷ್ಟು ಬೇಗ ಈ ಪ್ರತಿಷ್ಠಿತ ಯೋಜನೆಯ ಮುಂದುವರಿದ ಕಾಮಗಾರಿ ಪೂರ್ಣಗೊಳಿಸಲಿ.

ಹಾಗೆಯೇ, 'ಕಪಿಲ ಸಸ್ಯ ಕಾಶಿ' ಎಂಬ ಹೆಸರನ್ನು ಸ್ವತಃ ಚಾಲನೆ ಸಮಯದಲ್ಲಿ ನೀಡಿದ್ದ ಸಿದ್ದರಾಮಯ್ಯ ಈಗ, 'ವಿ.ಶ್ರೀನಿವಾಸಪ್ರಸಾದ್ ಬೊಟಾನಿಕಲ್ ಗಾರ್ಡನ್' ಎಂದು ಮರು ನಾಮಕರಣ ಮಾಡಿ ಈ 'ಸಸ್ಯ ಕಾಶಿ'ಯಲ್ಲಿ ಶ್ರೀನಿವಾಸಪ್ರಸಾದ್‌ರ ಪುತ್ಥಳಿ ನಿರ್ಮಿಸಲಿ. ಕಳಂಕ ರಹಿತ ಕೆಲವೇ ಕೆಲವು ಯೋಗ್ಯ ರಾಜಕಾರಣಿಗಳಲ್ಲಿ ಒಬ್ಬರಾಗಿ ನಿದರ್ಶನವಾಗಿರುವ ವಿ.ಶ್ರೀನಿವಾಸಪ್ರಸಾದ್ ಅವರ ಹೆಸರು ಶಾಶ್ವತವಾಗಿ ನಂಜನಗೂಡಿನ ಜನ ಮಾನಸದಲ್ಲಿ ಚಿರಸ್ಥಾಯಿಯಾಗಿ ಉಳಿಯಲು ಸರ್ಕಾರ ಈ ಮೂಲಕ ಗೌರವ ನೀಡಲು ಶೀಘ್ರ ಮುಂದಾಗಬೇಕಿದೆ.

– ಅನಿಲ್ ಕುಮಾರ್, ನಂಜನಗೂಡು

■ ಬಲಹೀನವಾಗುತ್ತಿರುವ ಚುನಾವಣಾ ಆಯೋಗ

ಮಾನ್ಯರೆ,

ಲೋಕಸಭಾ ಚುನಾವಣೆ ರಾಜ್ಯದಲ್ಲಿ ಮುಗಿದಿದೆ. ಮುಂಬರುವ ಜೂನ್ 4 ರಂದು ಫಲಿತಾಂಶ ಹೊರಬೀಳಲಿದೆ. ಆದರೆ ಕೇಂದ್ರ ಚುನಾವಣಾ ಆಯೋಗ ವರ್ಷದಿಂದ ವರ್ಷಕ್ಕೆ ಬಲಹೀನವಾಗುತ್ತಿದೆ. ಮತದಾನದ ದಿನ ಹಾಗೂ ಅದಕ್ಕಿಂತ ಮುಂಚಿತವಾಗಿ ಚುನಾವಣೆಯಲ್ಲಿ ಮತದಾರರಿಗೆ ಹಣ ಹಂಚಿಕೆ ಸೇರಿದಂತೆ ಹಲವಾರು ಆಮಿಷಗಳನ್ನು ಒಡ್ಡಿದ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿವೆ. ಹತಾಶೆಯಿಂದ ಬೆಳಗಾವಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಹಣ ಹಂಚಿದರೆಂದು ಆ ಕ್ಷೇತ್ರದಿಂದ ಸ್ಪರ್ಧಿಸಿರುವ ಬಿಜೆಪಿ ಅಭ್ಯರ್ಥಿ ಜಗದೀಶ್ ಶೆಟ್ಟರ್ ಚುನಾವಣಾಧಿಕಾರಿ ಹಾಗೂ ಪೊಲೀಸರಿಗೆ ದೂರು ನೀಡಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಕಲಬುರಗಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪರವಾಗಿ ಫೋನ್ ಪೇ ಮೂಲಕ ಹಣ ಹಂಚಲಾಗಿದೆ ಎಂಬ ಆರೋಪವನ್ನು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ ಖರ್ಗೆ ಮಾಡಿದ್ದಾರೆ. ಈ ರೀತಿಯ ಚುನಾವಣಾ ಅಕ್ರಮಗಳು ಎಗ್ಗಿಲ್ಲದೇ ಇಡೀ ದೇಶಾದ್ಯಂತ ನಡೆದಿವೆ. ಅನೇಕ ಅಭ್ಯರ್ಥಿಗಳಿಂದ ಹಾಗೂ ಅವರ ಬೆಂಬಲಿಗರಿಂದ ಅಕ್ರಮವಾಗಿ ಸಾಗಿಸುತ್ತಿದ್ದ ನೂರಾರು ಕೋಟಿ ರೂ. ಅಕ್ರಮ ಹಣ, ಅಕ್ರಮ ಮದ್ಯ ಹಾಗೂ ಇನ್ನಿತರ ಬೆಲೆ ಬಾಳುವ ವಸ್ತುಗಳನ್ನು ವಶಪಡಿಸಿಕೊಂಡಿರುವ ಪೊಲೀಸರು ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಚುನಾವಣಾ ಪ್ರಚಾರ ಸಭೆಗಳಲ್ಲಿ ವಿವಿಧ ಪಕ್ಷಗಳ ನಾಯಕರು, ಪ್ರಚೋದನಾಕಾರಿ ಭಾಷಣಗಳನ್ನು ಮಾಡಿದ್ದಾರೆ. ಜಾತಿ ಮತ್ತು ಧರ್ಮಗಳ ಹೆಸರಿನಲ್ಲಿ ಮತಯಾಚಿಸಿದ್ದಾರೆ. ಇಂತಹವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕಾಗಿದ್ದ ಚುನಾವಣಾ ಆಯೋಗ ಮೂಕ ಪ್ರೇಕ್ಷಕನಾಗಿರುವುದು ಅತ್ಯಂತ ಬೇಸರದ ಸಂಗತಿ. ಬರೀ ಚುನಾವಣೆಗಳನ್ನು ನಡೆಸುವುದಷ್ಟೇ ಚುನಾವಣಾ ಆಯೋಗದ ಕೆಲಸವಲ್ಲ. ಚುನಾವಣೆಗಳು ಅತ್ಯಂತ ಪಾರದರ್ಶಕವಾಗಿ ಹಾಗೂ ನ್ಯಾಯ ಸಮ್ಮತವಾಗಿ ನಡೆಯುವಂತೆ ನೋಡಿಕೊಳ್ಳುವ ಜವಾಬ್ದಾರಿ ಕೂಡ ಕೇಂದ್ರ ಚುನಾವಣಾ ಆಯೋಗಕ್ಕೆ ಸೇರಿದೆ. ಇಡೀ ಚುನಾವಣಾ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತಂದು ದೇಶದ ಜನರ ಮೆಚ್ಚುಗೆಗೆ ಪಾತ್ರರಾಗಿದ್ದ ಟಿ.ಎನ್.ಶೇಷನ್‌ರಂತಹ ಮುಖ್ಯ ಚುನಾವಣಾ ಆಯುಕ್ತರು ಅಧಿಕಾರಕ್ಕೆ ಬಂದು, ನಿಂತ ನೀರಾಗಿರುವ ಚುನಾವಣಾ ಆಯೋಗಕ್ಕೆ ಜೀವ ಸೆಲೆ ತುಂಬಬೇಕಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

■ 'ಪ್ರೀತಿ ವಿಭೂತಿ'

ಮಾನ್ಯರೆ,

ದ್ವೇಷಾಸೂಯೆಗಳು–ಇಲ್ಲವೆ, ತಾತ್ಸಾರ–ತಾಂಡವವಾಡುತ್ತಿರುವ ಈ ಹೊತ್ತಿನಲ್ಲಿ ನಮ್ಮ ನಡುವೆ 'ಪ್ರೀತಿ ವಿಭೂತಿ', 'ದೇವತಾ ಮನುಷ್ಯ' ಎಂದು ಕರೆಯಬಹುದಾದ ಮಹಾನುಭಾವರೊಬ್ಬರಿದ್ದಾರೆ; ಮತ್ಯಾರೂ ಅಲ್ಲ : ಸುತ್ತೂರು ಶ್ರೀ ಕ್ಷೇತ್ರದ ಶ್ರೀ ವೀರ ಸಿಂಹಾಸನ ಸಂಸ್ಥಾನ ಮಠದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು!

ಕೆಲ ತಿಂಗಳ ಹಿಂದೆ ನನಗೆ ಪ್ರತಿಷ್ಠಿತ ಪಂಪ ಪ್ರಶಸ್ತಿ ಪ್ರಾಪ್ತವಾದಾಗ, ಪೂಜ್ಯರು ನನಗೆ ಬರೆದ ಅಭಿನಂದನಾ ಪತ್ರದ ಒಂದು ಭಾಗವಿದು: "ಕಳೆದ ಹಲವಾರು ದಶಕಗಳಿಂದ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಸಂಶೋಧನಾ, ವಿಮರ್ಶೆ, ಕಾವ್ಯಾನುಸಂಧಾನಗಳಿಂದ ಶ್ರೀಮಂತಗೊಳಿಸಿರುವ ಹಿರಿಮೆ ನಿಮ್ಮದು. ಸುಮಾರು 300ಕ್ಕೂ ಹೆಚ್ಚು ಮೌಲಿಕ ಕೃತಿಗಳನ್ನು ರಚಿಸಿರುವ ನಿಮ್ಮ ವಿದ್ವತ್ತು, ಕನ್ನಡ ಸಾಹಿತ್ಯ ರಂಗಕ್ಕೆ ಒಂದು ಅಚ್ಚರಿ ! ನಿಮ್ಮ ಬಹುಮುಖ ಪ್ರತಿಭೆ, ಪಾಂಡಿತ್ಯ ಮತ್ತು ನಾಡು–ನುಡಿ ಸಂಸ್ಕೃತಿಗಳಿಗೆ ಸಲ್ಲಿಸಿರುವ ಸೇವೆ ಅನನ್ಯ" (ನನಗೆ ಡಾ. ದ.ರಾ. ಬೇಂದ್ರೆ ಕಾವ್ಯ ಪ್ರಶಸ್ತಿ ಬಂದಾಗಲೂ ಇಂಥದೇ ಪತ್ರ ಲಿಖಿಸಿದ್ದರು, ಸ್ವಾಮೀಜಿ) ಮಹಾಸ್ವಾಮಿಗಳ ಶ್ರೀ/ಶಿವ ಪಾದಾರವಿಂದಗಳಿಗೆ 'ನಮೋ, ನಮೋ' ಎನ್ನುತಿರ್ದೇನು!

–ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.

ನಿಷ್ಕಳಂಕ ರಾಜಕಾರಣ; ಸ್ವಾಭಿಮಾನದ ಅಸ್ಮಿತೆ

ವಿ.ಶ್ರೀನಿವಾಸ ಪ್ರಸಾದ್



"ಶ್ರೀನಿವಾಸಪ್ರಸಾದ್ ಅವರು ಭೌತಿಕವಾಗಿ ನಮ್ಮೊಂದಿಗಿಲ್ಲ. ಆದರೆ ಅವರ ಸ್ವಾಭಿಮಾನ, ದೂರದೃಷ್ಟಿ ಚಿಂತನೆ, ಸಮಾನತೆಯ ಸಂಕಲ್ಪ ಎಲ್ಲವೂ ನಮ್ಮೆಲ್ಲರೆದೆಯಲ್ಲಿ ಚಿರಸ್ಥಾಯಿಯಾಗಿವೆ. ನಂಜನಗೂಡನ್ನು ಸರ್ವಜನಾಂಗದ ಶಾಂತಿಯ ತೋಟವನ್ನಾಗಿಸಲು ಪಣ ತೊಟ್ಟಿದ್ದ ಅವರು ಸಮಾಜದ ಎಲ್ಲಾ ತಳ ವರ್ಗದವರನ್ನು ಒಂದೆಡೆ ಸೇರಿಸಿ ಸಮಾನತೆಯ ಸಮುದಾಯ ಭವನಗಳ ಸಂಕೀರ್ಣ ತೆರೆಯಲು ನಿವೇಶನ ಮಂಜೂರು ಮಾಡಿಸಿ ಅಗತ್ಯ ಅನುದಾನವನ್ನು ಕೊಡಿಸಿದ್ದರು. ಅವುಗಳನ್ನು ಪೂರ್ಣಗೊಳಿಸಬೇಕಿದೆ. ಇನ್ನು ನಂಜನಗೂಡನ್ನು ಮೈಸೂರಿನ ಸ್ಯಾಟಲೈಟ್ ಸಿಟಿಯನ್ನಾಗಿ ಮಾಡುವ ಕನಸು ಹೊತ್ತಿದ್ದರು. ಶಿಕ್ಷಣ ಹಾಗೂ ಉದ್ಯೋಗಾವಕಾಶಗಳ ಹೆಚ್ಚಳದ ಬಗ್ಗೆ ಸದಾ ಕಾಳಜಿ ತೋರಿದ್ದರು. ಹೀಗೆ ಹಲವು ಕನಸುಗಳನ್ನು ಬಿತ್ತಿ ಹೋಗಿರುವ ಅವರ ಆಶಯಗಳನ್ನು ನಾವು ಸಾಕಾರಗೊಳಿಸುವತ್ತ ಸಾಗಬೇಕಿದೆ. ಅವರ ಕನಸಿನ ಯೋಜನೆಗಳನ್ನು ಅನುಷ್ಠಾನಗೊಳಿಸಿ ಸತ್ಕಾರ್ಯಗಳಲ್ಲಿ ಅವರನ್ನು ಇನ್ನು ಕಾಣಬೇಕಿದೆ.



ಬಿ.ಹರ್ಷವರ್ಧನ್
ಮಾಜಿ ಶಾಸಕರು

ರಾಷ್ಟ್ರ ಹಾಗೂ ರಾಜ್ಯ ರಾಜಕಾರಣದಲ್ಲಿ 50 ವರ್ಷಗಳ ಸುದೀರ್ಘ ರಾಜಕೀಯ ಪಯಣದ ಮೂಲಕ ದೇಶದ ಗಮನ ಸೆಳೆದಿದ್ದ ಮುತ್ಸದ್ಧಿ ರಾಜಕಾರಣಿ ವಿ. ಶ್ರೀನಿವಾಸಪ್ರಸಾದ್ ಅವರನ್ನು ದಲಿತರ ಕಣ್ಮಣಿ, ದಲಿತರ ನೇತಾರ, ದಲಿತ ರಾಜಕಾರಣದ ಹೆಗ್ಗುರುತು–ಹೀಗೆ ಅನೇಕ ನಾಮಾವಳಿಗಳಿಂದ ಕರೆದು ಅಭಿಮಾನಿಸುವುದನ್ನು ನಾವು ಕಂಡಿದ್ದೇವೆ. ಇದು ನಿಜವೂ ಹೌದು. ಆದರೆ, ಅವರು ಕೇವಲ ದಲಿತರ ಕಾಳಜಿಯನ್ನಷ್ಟೇ ಮಾಡುತ್ತಿದ್ದರೆ ಎಂಬ ಪ್ರಶ್ನೆಯನ್ನು ಮುಂದಿಟ್ಟುಕೊಂಡರೆ ತಕ್ಷಣ ಇಲ್ಲ, ಖಂಡಿತ ಸಾಧ್ಯವಿಲ್ಲ.!

ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಮುಖ್ಯವಾಹಿನಿಗೆ ಬರದ ಶೋಷಿತ ಸಮುದಾಯಗಳ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು ವಿ.ಶ್ರೀನಿವಾಸ ಪ್ರಸಾದ್. ದಲಿತರಷ್ಟೇ ಅಲ್ಲ, ಶೋಷಿತ, ಹಿಂದುಳಿದ, ಅಲ್ಪಸಂಖ್ಯಾತ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ಸಿಗುವಂತಾಗಬೇಕೆಂಬ ತುಡಿತವನ್ನು ಸದಾ ಹೊಂದಿದ್ದರು. ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರ ಆಶಯದಂತೆ ಸಮಾಜದ ಯಾವುದೇ ಸಮುದಾಯವೂ ತಿರಸ್ಕಾರಕ್ಕೆ ಒಳಗಾಗಬಾರದು, ಎಲ್ಲರಿಗೂ ಸಮಾನ ಅವಕಾಶ ಸಿಗಬೇಕು ಹಾಗೂ ಸಮಾಜದಲ್ಲಿ ಸಮಾನತೆ ನೆಲೆಗೊಳ್ಳಬೇಕು ಎಂಬುದು ಅವರ ಅಚಲ ನಿಲುವಾಗಿತ್ತು.

ರಾಜಕೀಯದ ಕನಸಿಗೆ ಪ್ರೇರಣೆ: ವಿ.ಶ್ರೀನಿವಾಸ ಪ್ರಸಾದ್ ಅವರು 2011ರಲ್ಲಿ ನಂಜನಗೂಡು ವಿಧಾನ ಸಭಾ ಕ್ಷೇತ್ರದ ಶಾಸಕರಾಗಿದ್ದರು. ಆ ಸಂದರ್ಭ ಕುಕ್ಕೆ ಸುಬ್ರಹ್ಮಣ್ಯದಲ್ಲಿ ನಡೆಯುತ್ತಿದ್ದ ಮಡೆ ಸ್ನಾನದ ಬಗ್ಗೆ ರಾಜ್ಯದಲ್ಲಿ ದೊಡ್ಡ ಚರ್ಚೆ ನಡೆಯುತ್ತಿತ್ತು. ಆಗ ವಿಧಾನಸಭಾ ಅಧಿವೇಶನದಲ್ಲಿ ಈ ವಿಷಯದ ಕುರಿತು ವಿ.ಶ್ರೀನಿವಾಸಪ್ರಸಾದ್ ಮಾತನಾಡಲಿದ್ದಾರೆ ಎಂಬ ವಿಷಯ ನನ್ನ ಕಿವಿಗೆ ಬಿತ್ತು. ಏನು ಮಾತನಾಡುತ್ತಾರೆ ಎಂಬ ಕುತೂಹಲ ಆ ವೇಳೆ ನನಗೂ ಇತ್ತು. ಅದನ್ನು ನೇರವಾಗಿ ಕೇಳಿ, ಕಣ್ತುಂಬಿಕೊಳ್ಳಬೇಕು ಅಂತ ವಿಧಾನಸೌಧಕ್ಕೆ ತೆರಳಿದ್ದೆ. ನಾನು ಈ ಹಿಂದೆ ಬೆಂಗಳೂರಿನಲ್ಲಿ ನಮ್ಮ ತಾತಾ ಬಿ.ಬಸವಲಿಂಗಪ್ಪ ಸ್ಥಾಪಿಸಿದ್ದ ನಾಗಸೇನಾ ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗ ಅಧಿವೇಶನ ವೀಕ್ಷಿಸಲು ಕರೆದುಕೊಂಡು ಹೋಗಿದ್ದರು. ನನ್ನ ತಾತಾ ಬಿ.ಬಸವಲಿಂಗಪ್ಪನವರು ಹಲವು ಬಾರಿ ಸಚಿವರಾಗಿದ್ದರು. ಅದು ಬಿಟ್ಟರೆ ಇದು ನನ್ನ ಎರಡನೇ ವಿಧಾನಸೌಧ ಭೇಟಿಯಾಗಿತ್ತು. ನನ್ನ ಪಾಸ್ ಸಮಯವೂ ಮೀರುತ್ತಿದ್ದರೂ ಇನ್ನೂ ಶ್ರೀನಿವಾಸಪ್ರಸಾದ್ ಅವರ ಭಾಷಣ ಶುರುವಾಗಿರಲಿಲ್ಲ. ಅಷ್ಟಕ್ಕೆ ಮಾರ್ಷಲ್ ಬಂದು ನಿಮ್ಮ ಸಮಯ ಮುಗಿದಿದೆ ಹೊರಡಬಹುದು ಎಂದರು. ನಾನು ಶ್ರೀನಿವಾಸಪ್ರಸಾದರ ಅಳಿಯ, ಅವರು ಮಡೆಸ್ನಾನದ ಬಗ್ಗೆ ಮಾತನಾಡಲಿದ್ದು ಅದನ್ನು ನೋಡಬೇಕೆಂಬ ತವಕದಿಂದ ಬಂದಿದ್ದೇನೆ ಅಂತ ಅವರಿಗೆ ಹೇಳಿದೆ. ಈ ಸಂದರ್ಭ ಸದನದ ಮಾರ್ಷಲ್, ನಾನೂ ಕೊಳ್ಳೇಗಾಲದವನು, ಸಾಹೇಬರ ಅಬ್ಬರದ ಭಾಷಣಗಳನ್ನು ನಾನು ಸಾಕಷ್ಟು ಕೇಳಿದ್ದೇನೆ, ಆಯ್ತು ನೀವು ಕೇಳಿ ಅಂತ ನನಗೆ ವಿನಾಯಿತಿಕೊಟ್ಟು ಗ್ಯಾಲರಿಯಲ್ಲಿರಲು ಅವಕಾಶ ಕಲ್ಪಿಸಿದರು.

ವಿ.ಶ್ರೀನಿವಾಸಪ್ರಸಾದ್ ಅವರು ಅಂದು ಮಡೆಸ್ನಾನದ ಬಗ್ಗೆ ಸುದೀರ್ಘ ವಿಷಯ ಮಂಡನೆ ಮಾಡಿದರು. ಈ ಸಂದರ್ಭ ಸದನದಲ್ಲಿ ಆಡಳಿತ ಹಾಗೂ ಪ್ರತಿಪಕ್ಷದ ನಾಯಕರು ಅವರ ಮಾತುಗಳನ್ನು ತದೇಕ ಚಿತ್ತದಿಂದ ಆಲಿಸಿದ್ದರು. ಅವರ ಮಾತಿನ ತೀಕ್ಷ್ಣತೆ, ಸೂಕ್ಷ್ಮತೆ, ನಿಖರತೆ ಹಾಗೂ ಪ್ರಖರತೆ ಇಡೀ ಸದನವನ್ನು ಚಿಂತನೆಗೆ ದೂಡಿತು. ಅವರ ಮಾತುಗಳಿಂದ ಪ್ರೇರಣೆಗೊಂಡು, ನಾನು ಅವರ ಮಾರ್ಗದರ್ಶನದಲ್ಲಿ ಸದನ ಪ್ರವೇಶಿಸಿ ಎಲ್ಲಾ ವರ್ಗಗಳ ಹಿತ ಕಾಯುವ ಶಾಸಕನಾಗಬೇಕೆಂಬ ತುಡಿತ ಮನದಲ್ಲಿ ಅರಿವಿಲ್ಲದೇ ಆ ದಿನ ಮೂಡಿತು. ನಾನು ಶಾಸಕನಾದ ಮೇಲೆ ಅವರ ಸ್ಫೂರ್ತಿಯ ಸೆಲೆಯಿಂದ ಐದು ವರ್ಷದ ಅವಧಿಯಲ್ಲಿ, 164 ದಿನಗಳ ವಿಧಾನ ಮಂಡಲ ಅಧಿವೇಶನದಲ್ಲಿ 161 ದಿನ ಸದನದ ಕಲಾಪದಲ್ಲಿ ಭಾಗಿಯಾಗಿದ್ದೆ.

ಒಂದೇ ಭೇಟಿಗೆ ಅಳಿಯನಾದೆ: ರಾಜ್ಯದ ಹಿರಿಯ ರಾಜಕಾರಣಿ ಮಾಜಿ ಸಚಿವ ಬಿ.ಬಸವಲಿಂಗಪ್ಪ ಅವರ ಬಗ್ಗೆ ಅಪಾರ ಅಭಿಮಾನ, ಗೌರವ ಹೊಂದಿದ್ದ ವಿ.ಶ್ರೀನಿವಾಸಪ್ರಸಾದರು ಬೂಸಾ ಚಳವಳಿ ಮೂಲಕ ಹೋರಾಟ, ನಂತರ ರಾಜಕೀಯ ರಂಗ ಪ್ರವೇಶಿಸಿದ್ದವರು. ಬಿ.ಬಸವಲಿಂಗಪ್ಪ ಅವರ ಕುಟುಂಬದೊಂದಿಗೆ ಸಂಬಂಧ ಬೆಸೆದುಕೊಳ್ಳಬೇಕೆಂಬ ಇರಾದೆ ಶ್ರೀನಿವಾಸಪ್ರಸಾದ್ ಅವರ ಮನದಲ್ಲಿ ಮನೆ ಮಾಡಿತ್ತು. ಬಸವಲಿಂಗಪ್ಪ ಪುತ್ರಿ ಶೀಲಾರಾಣಿ ಹಾಗೂ ಬಸವರಾಜು ದಂಪತಿ ಪುತ್ರನಾದ ನಾನು ಇಂಜಿನಿಯರಿಂಗ್ ಮುಗಿಸಿ ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೆ. ಸಾಮಾನ್ಯವಾಗಿ ವಧು ನೋಡಲು ಹೋಗುವ ಸಂಪ್ರದಾಯವಿದೆ. ಆದರೆ 2007ರಲ್ಲಿ ವಿ.ಶ್ರೀನಿವಾಸಪ್ರಸಾದ್ ನಮ್ಮ ಮನೆಗೆ ಬರುತ್ತಾರೆ ಅಂತ ನನ್ನ ಕಿವಿಗೆ ಬಿತ್ತು. ನನಗೂ ಶ್ರೀನಿವಾಸ ಪ್ರಸಾದ್ ಅವರ ಬಗ್ಗೆ ಅಪಾರ ಅಭಿಮಾನವಿತ್ತು. ಶ್ರೀನಿವಾಸಪ್ರಸಾದ್ ನಮ್ಮ ಮನೆಗೆ ಬಂದಾಗ ಏನೋ ಒಂಥರಾ ಅವ್ಯಕ್ತ ಸಂತೋಷ. ಶ್ರೀನಿವಾಸಪ್ರಸಾದ್ ಅವರು ಮನೆಗೆ ಬರುತ್ತಿದ್ದಂತೆ ಹೊಸ್ತಿಲಿಗೆ ನಮಸ್ಕರಿಸಿ ಒಳ ಬಂದರು. ಅದು ಬಿ.ಬಸವಲಿಂಗಪ್ಪ ಅವರ ಮೇಲೆ ಅವರಿಗಿದ್ದ ಅತೀವ ಗೌರವದ ದ್ಯೋತಕಕ್ಕೆ ಹಿಡಿದ ಕನ್ನಡಿಯಾಗಿತ್ತು. ವರನನ್ನೇ ಹುಡುಕಿಕೊಂಡು ಬಂದಿದ್ದ ಶ್ರೀನಿವಾಸಪ್ರಸಾದ್ ಎದುರಾದ ಕ್ಷಣ ಇಂದಿಗೂ ಕಣ್ಣ ಮುಂದೆ ಇದೆ. ನಮಗೆ ವರ ಒಪ್ಪಿಗೆಯಾಗಿದೆ ಎಂದ ಮೇಲೆ ನಾನು ಅವರ ಪುತ್ರಿ ಪೂರ್ಣಿಮ ಫೋಟೋ ನೋಡಿದ್ದು. ಆ ನಂತರ 2007 ಫೆಬ್ರವರಿಯಲ್ಲಿ ನಿಶ್ಚಿತಾರ್ಥ ಆಗಿ ಅದೇ ವರ್ಷ ಮೇ 24ರಂದು ವಿವಾಹ ನೆರವೇರಿತು. ಆ ಮೂಲಕ ಬಸವಲಿಂಗಪ್ಪ ಹಾಗೂ ಶ್ರೀನಿವಾಸಪ್ರಸಾದ್ ಎರಡೂ ಕುಟುಂಬಗಳ ನಡುವೆ ಸಂಬಂಧದ ಬಾಂಧವ್ಯ ಬೆಸೆಯಿತು.

ಸ್ವಾಭಿಮಾನಕ್ಕಾಗಿ ಹೋರಾಟ: 2013ರಲ್ಲಿ ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಬಳಿಕ ವಿ.ಶ್ರೀನಿವಾಸಪ್ರಸಾದ್ ಕಂದಾಯ ಮಂತ್ರಿಯಾಗಿದ್ದರು. ಪಾರದರ್ಶಕ, ನಿಷ್ಕಳಂಕ ಹಾಗೂ ಜನಪರ ಆಡಳಿತ ನೀಡಿದ ಕೀರ್ತಿ ಅವರ ಮುಡಿಗೇರಿತ್ತು. ಆದರೆ 2016ರಲ್ಲಿ ಸಕಾರಣವಿಲ್ಲದೇ ಅವರನ್ನು ಸಂಪುಟದಿಂದ ಮುಖ್ಯಮಂತ್ರಿ ಸಿದ್ಧರಾಮಯ್ಯ ಕೈಬಿಟ್ಟರು. ಸ್ವಾಭಿಮಾನಕ್ಕೆ ಧಕ್ಕೆಯಾದರೆ ಕ್ಷಣ ಕಾಲವೂ ಸಹಿಸಿಕೊಳ್ಳದಿರುವ ಸ್ವಭಾವ ಅವರ ಹುಟ್ಟು ಗುಣವಾಗಿದ್ದು, ತಮಗಾದ ಅನ್ಯಾಯದ ವಿರುದ್ಧ ಹೋರಾಟಕ್ಕೆ ಮುಂದಾದ ವಿ.ಶ್ರೀನಿವಾಸ ಪ್ರಸಾದ್ ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಲ್ಲದೆ ರಾಜಕೀಯವಾಗಿ ಸಮರ್ಥವಾಗಿ ಎದುರಾಳಿಗಳ ವಿರುದ್ಧ ಹೋರಾಡಲು ಬೆಂಬಲಿಗರು ಹಾಗೂ ಅಭಿಮಾನಿಗಳ ಸಲಹೆಯಂತೆ ಬಿಜೆಪಿಯಿಂದ 2017ರಲ್ಲಿ ಎದುರಾದ ಉಪಚುನಾವಣೆಯಲ್ಲಿ ಸ್ಪರ್ಧಿಸಿದರು.

ಈ ಸಂದರ್ಭ ಆಡಳಿತ ಪಕ್ಷ ಕಾಂಗ್ರೆಸ್‌ನ ಹಣ ಬಲದ ಮುಂದೆ ಸೋಲನನುಭವಿಸಬೇಕಾಯಿತು. ಚುನಾವಣೆಯಲ್ಲಿ ಸೋತರೂ ತನ್ನ ಸ್ವಾಭಿಮಾನ ಸೋಲಲಿಲ್ಲ ಎಂಬ ಆತ್ಮಾಭಿಮಾನ ಅವರಲ್ಲಿತ್ತು. 2018ರ ಸಾರ್ವತ್ರಿಕ ಚುನಾವಣೆಯಲ್ಲಿ ಮತ್ತೆ ಸ್ಪರ್ಧಿಸಿ, ಗೆಲುವಿನೊಂದಿಗೆ ಚುನಾವಣಾ ನಿವೃತ್ತಿ ಪಡೆಯುವಂತೆ ನಾನೂ ಸೇರಿದಂತೆ ಅವರ ಅಪಾರ ಸಂಖ್ಯೆಯ ಅಭಿಮಾನಿಗಳು ಅವರ ಮನವೊಲಿಸುವ ಪ್ರಯತ್ನ ಮಾಡಿದಾಗ ನನಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಇಷ್ಟವಿಲ್ಲ. ನೀನು ರಾಜಕಾರಣಿಯಾಗುವ ಎಲ್ಲಾ ಲಕ್ಷಣಗಳಿವೆ, ನನ್ನ ಎಲ್ಲಾ ಕನಸುಗಳನ್ನು ಇನ್ನು ಮುಂದೆ ನೀನೇ ಈಡೇರಿಸಬೇಕು ಎಂದು ಹೇಳಿ ನನಗೆ ಬಿಜೆಪಿ ಟಿಕೆಟ್ ಕೊಡಿಸಿದ್ದಲ್ಲದೆ ಚುನಾವಣೆಯಲ್ಲಿ ಗೆಲುವು ಸಾಧಿಸಲು ಅಗತ್ಯ ಮಾರ್ಗದರ್ಶನ ನೀಡಿ ಶಾಸಕರನ್ನಾಗಿ ಮಾಡಿದರು.

ನಂಜನಗೂಡಿನ ಮತದಾರರ ಆಶೀರ್ವಾದ ಹಾಗೂ ಬಿಜೆಪಿ ವರಿಷ್ಟರ ನೆರವಿನೊಂದಿಗೆ ಮೊದಲ ಬಾರಿಗೆ ನಾನು ಶಾಸಕನಾದರೂ ನನ್ನ ಬೆನ್ನ ಹಿಂದೆ ವಿ.ಶ್ರೀನಿವಾಸ ಪ್ರಸಾದ್ ಅವರು ಇದ್ದುದರಿಂದ ನನಗೆ ಏನನ್ನಾದರೂ ಸಾಧಿಸಲೇಬೇಕೆಂಬ ತುಡಿತ ಹೆಚ್ಚಾಯಿತು. ಧೈರ್ಯ ಮತ್ತು ಶಕ್ತಿಯ ಚಿಲುಮೆಯಾಗಿ ನನ್ನೊಂದಿಗಿದ್ದ ಶ್ರೀನಿವಾಸಪ್ರಸಾದ್ ಅವರು ಕಂಡಿದ್ದ ಕನಸಿನ ಯೋಜನೆಗಳನ್ನು ಸಾಕಾರಗೊಳಿಸುವುದು ನನ್ನ ಮುಂದೆ ಇದ್ದ ಗುರಿಯಾಗಿತ್ತು. ನಂಜನಗೂಡಿನ ರೈತರ ಹಲವು ದಶಕಗಳ ಕನಸಾಗಿದ್ದ ನುಗು ಏತ ನೀರಾವರಿ, ಶ್ರೀಕಂಠೇಶ್ವರಸ್ವಾಮಿ ದೇವಾಲಯದಲ್ಲಿ ಬೆಳ್ಳಿರಥ, ವಸತಿಗೃಹ, ಕೆರೆ ತುಂಬಿಸುವ ಯೋಜನೆ ಹೀಗೆ ಹತ್ತು–ಹಲವು ಯೋಜನೆಗಳನ್ನು ಕಾರ್ಯಗತಗೊಳಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ನಡೆಸಿದ ಪರಿಣಾಮವಾಗಿ ಎಲ್ಲವೂ ಅನುಷ್ಠಾನಗೊಂಡಿವೆ. ನನ್ನ ಶಾಸಕ ಅವಧಿ ಮುಗಿಯುವ ಹೊತ್ತಿಗೆ 830 ಕೋಟಿ ಯೋಜನೆಗಳನ್ನು ನಂಜನಗೂಡಿಗೆ ತಂದಿದ್ದನ್ನು ಕಂಡು ಶ್ರೀನಿವಾಸ ಪ್ರಸಾದ್ ಸಾರ್ಥಕ ಭಾವದಲ್ಲಿ ನನಗೆ ಹರಸಿದ್ದು, ನನ್ನ ಜೀವನದ ಬಹುದೊಡ್ಡ ಸಾಧನೆ ಎಂದರೆ ಅತಿಶಯೋಕ್ತಿ ಆಗಲಾರದು. ನನ್ನ ಮೇಲೆ ಭರವಸೆ ಯಿಟ್ಟು ಶಾಸಕನನ್ನಾಗಿ ಮಾಡಿದ್ದಕ್ಕೆ ನಾನು ಕ್ಷೇತ್ರ ಸರ್ವಾಂಗೀಣ ಅಭಿವೃದ್ಧಿ ಮಾಡಲು ಸಾಧ್ಯವಾಯಿತು.

ಇದೀಗ ಅವರು ಭೌತಿಕವಾಗಿ ನಮ್ಮೊಂದಿಗಿಲ್ಲ. ಆದರೆ ಅವರ ಸ್ವಾಭಿಮಾನ, ದೂರದೃಷ್ಟಿ ಚಿಂತನೆ, ಸಮಾನತೆಯ ಸಂಕಲ್ಪ ಎಲ್ಲವೂ ನಮ್ಮೆಲ್ಲರೆದೆಯಲ್ಲಿ ಚಿರಸ್ಥಾಯಿಯಾಗಿವೆ. ನಂಜನಗೂಡನ್ನು ಸರ್ವಜನಾಂಗದ ಶಾಂತಿಯ ತೋಟವನ್ನಾಗಿಸಲು ಪಣ ತೊಟ್ಟಿದ್ದ ಅವರು ಸಮಾಜದ ಎಲ್ಲಾ ತಳ ವರ್ಗದವರನ್ನು ಒಂದೆಡೆ ಸೇರಿಸಿ ಸಮಾನತೆಯ ಸಮುದಾಯ ಭವನಗಳ ಸಂಕೀರ್ಣ ತೆರೆಯಲು ನಿವೇಶನ ಮಂಜೂರು ಮಾಡಿಸಿ ಅಗತ್ಯ ಅನುದಾನವನ್ನು ಕೊಡಿಸಿದ್ದರು. ಅವುಗಳನ್ನು ಪೂರ್ಣಗೊಳಿಸಬೇಕಿದೆ. ಇನ್ನು ನಂಜನಗೂಡನ್ನು ಮೈಸೂರಿನ ಸ್ಯಾಟಲೈಟ್ ಸಿಟಿಯನ್ನಾಗಿ ಮಾಡುವ ಕನಸು ಹೊತ್ತಿದ್ದರು.

ಶಿಕ್ಷಣ ಹಾಗೂ ಉದ್ಯೋಗಾವಕಾಶಗಳ ಹೆಚ್ಚಳದ ಬಗ್ಗೆ ಸದಾ ಕಾಳಜಿ ತೋರಿದ್ದರು. ಹೀಗೆ ಹಲವು ಕನಸುಗಳನ್ನು ಬಿತ್ತಿ ಹೋಗಿರುವ ಅವರ ಆಶಯಗಳನ್ನು ನಾವು ಸಾಕಾರಗೊಳಿಸುವತ್ತ ಸಾಗಬೇಕಿದೆ. ಅವರ ಕನಸಿನ ಯೋಜನೆಗಳನ್ನು ಅನುಷ್ಠಾನಗೊಳಿಸಿ ಸತ್ಕಾರ್ಯಗಳಲ್ಲಿ ಅವರನ್ನು ಇನ್ನು ಕಾಣಬೇಕಿದೆ. ಇದೇ ನಾವು ಅವರಿಗೆ ಸಲ್ಲಿಸುವ ಘನ ಗೌರವ ಎಂದು ನಂಬಿದ್ದೇನೆ.

ಶೀಘ್ರವೇ ಮೈಸೂರಿಗೆ 100 ಇ-ಬಸ್

ಮೈಸೂರು ನಗರದಲ್ಲಿ ದಸರಾ ಒಳಗೆ ವರ್ತುಲ ಬಸ್ ಸೇವೆ

ಹಳೆಯ 118 ಸಿಟಿ ಬಸ್‌ಗಳನ್ನು ಸ್ಕ್ರ್ಯಾಪ್‌ಗೆ ಕಳಿಸಲು ಸಂಸ್ಥೆ ನಿರ್ಧಾರ



ಮೈಸೂರು, ಮೇ 10 (ಆರ್‌ಕೆ)–ಮೈಸೂರು ನಗರ ಬಸ್ ನಿಲ್ದಾಣದಿಂದ ರೈಲು ನಿಲ್ದಾಣ, ಗ್ರಾಮಾಂತರ ಬಸ್ ನಿಲ್ದಾಣ, ಸರ್ಕಾರಿ ಆಸ್ಪತ್ರೆ, ಕಚೇರಿ, ಮಾರುಕಟ್ಟೆಗಳಿಗೆ ಸಂಪರ್ಕ ಕಲ್ಪಿಸುವ ವರ್ತುಲ (ಸರ್ಕ್ಯುಲರ್) ಸಾರಿಗೆ ಸೇವೆ ಕಲ್ಪಿಸಲು ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮುಂದಾಗಿದೆ.

ಮೈಸೂರಿನ ವಿವಿಧ ವಸತಿ ಬಡಾವಣೆ, ನಗರಕ್ಕೆ ಹೊಂದಿಕೊಂಡಂತಿರುವ ಗ್ರಾಮಗಳು ಹಾಗೂ ದೂರದ ಊರುಗಳಿಂದ ಬರುವ ಪ್ರಯಾಣಿಕರು ಸಿಟಿ ಬಸ್ ಸ್ಟ್ಯಾಂಡ್, ರೈಲ್ವೆ ಸ್ಟೇಷನ್, ಸಬರ್ಬನ್ ಬಸ್‌ಸ್ಟ್ಯಾಂಡ್, ಕೆ.ಆರ್.ಆಸ್ಪತ್ರೆ, ಸರ್ಕಾರಿ ಆಯುರ್ವೇದ ಆಸ್ಪತ್ರೆಗೆ ಹೋಗುವವರ ಅನುಕೂಲಕ್ಕಾಗಿ ಪ್ರತ್ಯೇಕವಾಗಿ ಸರ್ಕ್ಯುಲರ್ ಬಸ್ ಸೇವೆ ಒದಗಿಸಲು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಮೈಸೂರು ನಗರ ವಿಭಾಗವು ಸರ್ವ ರೀತಿಯಲ್ಲಿ ಸಿದ್ಧತೆ ಮಾಡಿಕೊಂಡಿದೆ.

2024ರ ದಸರಾ ಮಹೋತ್ಸವ ಆರಂಭವಾಗುವುದರೊಳಗಾಗಿ 2 ಬಸ್‌ಗಳನ್ನು ಮೈಸೂರು ನಗರದಲ್ಲಿ ಸರ್ಕ್ಯುಲರ್ ಬಸ್ ಸಂಚಾರ ಸೇವೆ ಯನ್ನು ಆರಂಭಿಸಲು ಸಿದ್ಧತೆ ಮಾಡಿ ಕೊಳ್ಳುತ್ತಿದ್ದೇವೆ ಎಂದು ಕೆಎಸ್‌ಆರ್‌ಟಿಸಿ ಮೈಸೂರು ನಗರ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಹೆಚ್.ವಿ.ವೀರೇಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಮೊದಲನೇ ಹಂತದಲ್ಲಿ ಎರಡು ಬಸ್‌ಗಳನ್ನು ಈ ಸೇವೆಗೆ ಒದಗಿಸಿ 1 ಬಸ್ಸು, ಮೈಸೂರು ನಗರ ಬಸ್ ನಿಲ್ದಾಣದಿಂದ ಹೊರಟು, ಸಯ್ಯಾಜಿರಾವ್ ರಸ್ತೆಯ ಸರ್ಕಾರಿ ಸಂಸ್ಕೃತ ಪಾಠಶಾಲೆ ಸರ್ಕಲ್, ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ಸರ್ಕಲ್, ಜೆಎಲ್‌ಬಿ ರಸ್ತೆ ಮೆಟ್ರೋಪೋಲ್ ಸರ್ಕಲ್, ದಾಸಪ್ಪ ಸರ್ಕಲ್, ರೈಲು ನಿಲ್ದಾಣ, ಇರ್ವಿನ್ ರಸ್ತೆ, ಸಬರ್ಬನ್ ಬಸ್ ನಿಲ್ದಾಣ, ಛತ್ರಿಮರದ ರಸ್ತೆ, ನಜರ್‌ಬಾದ್‌ನ ಬಿಎಸ್‌ಎನ್‌ಎಲ್ ಕಚೇರಿ, ಹಾರ್ಡಿಂಗ್ ಸರ್ಕಲ್, ಅರಮನೆ ಉತ್ತರ ದ್ವಾರದ ಮೂಲಕ ಮರಳಿ ಸಿಟಿ ಬಸ್ ಸ್ಟ್ಯಾಂಡ್ ತಲುಪಲಿದೆ.

ಮತ್ತೊಂದು ಬಸ್ಸು ಅದಕ್ಕೆ ವಿರುದ್ಧ ಮಾರ್ಗದಲ್ಲಿ ಸಿಟಿ ಬಸ್‌ಸ್ಟ್ಯಾಂಡ್‌ನಿಂದ ಹೊರಟು ಸಂಸ್ಕೃತ ಪಾಠಶಾಲೆ, ಅರಮನೆ ದಕ್ಷಿಣ ದ್ವಾರ, ಹಾರ್ಡಿಂಗ್ ಸರ್ಕಲ್, ಬಿಎನ್ ರಸ್ತೆಯ ಗ್ರಾಮಾಂತರ ಬಸ್ ನಿಲ್ದಾಣ, ಇರ್ವಿನ್ ರಸ್ತೆ, ಸರ್ಕಾರಿ ಆಯುರ್ವೇದ ಆಸ್ಪತ್ರೆ, ರೈಲು ನಿಲ್ದಾಣ, ಜೆಎಲ್‌ಬಿ ರಸ್ತೆ, ರಾಮಸ್ವಾಮಿ ಸರ್ಕಲ್, ಚಾಮರಾಜ ಜೋಡಿ ರಸ್ತೆ ಪಾಠಶಾಲೆ ಸರ್ಕಲ್ ಹಾರ್ಡಿಂಗ್ ಸರ್ಕಲ್ ಮೂಲಕ ನಗರ ಬಸ್ ನಿಲ್ದಾಣ ತಲುಪುವುದು.

ಈ ಮಾರ್ಗದ ಸೇವೆಗೆ ಪ್ರಯಾಣಿಕರಿಂದ ಯಾವ ರೀತಿಯ ಪ್ರತಿಕ್ರಿಯೆ ಬರುತ್ತದೆ ನೋಡಿಕೊಂಡು ಬೇಡಿಕೆಗನುಗುಣವಾಗಿ ಬಸ್‌ಗಳನ್ನು ಒದಗಿಸಲಾಗುವುದು. ಬೇಡಿಕೆ ಹೆಚ್ಚಾದರೆ, ಶೀಘ್ರವೇ ಎರಡರ ಜೊತೆಗೆ ಇನ್ನೂ ಎರಡು ಬಸ್ಸುಗಳನ್ನು ಬಳಸಿಕೊಂಡು ಹೆಚ್ಚಿನ ಸಂಖ್ಯೆಯ ಮಾರ್ಗಗಳಲ್ಲಿ ಬಸ್ ಸೇವೆ ಒದಗಿಸಲಾಗುವುದು ಎಂದು ಅವರು ತಿಳಿಸಿದರು.

ಮೈಸೂರು ನಗರದಲ್ಲಿ ಒಟ್ಟು 493 ಬಸ್‌ಗಳು ಸಂಚರಿಸುತ್ತಿವೆ. ಆ ಪೈಕಿ ಚಾಮುಂಡಿ ಬೆಟ್ಟಕ್ಕೆ 11 ಹಾಗೂ ಹೆಬ್ಬಾಳ ಇನ್‌ಫೋಸಿಸ್ ಟೆಕ್ನಾಲಜೀಸ್ ಮಾರ್ಗಕ್ಕೆ 11 ಹವಾನಿಯಂತ್ರಿತ ಓಲ್ವೋ ಬಸ್‌ಗಳು ಸಂಚರಿಸುತ್ತಿವೆ ಎಂದ ವೀರೇಶ ಅವರು, ಸದ್ಯದಲ್ಲೇ ಕೇಂದ್ರ ಸರ್ಕಾರದ ಯೋಜನೆಯಡಿ ಮೈಸೂರು ನಗರಕ್ಕೆ 100 ಹೊಸ ಎಲೆಕ್ಟ್ರಿಕ್ ಬಸ್‌ಗಳನ್ನು ನೀಡಲಾಗುತ್ತಿದೆ ಎಂದರು.

ಜೊತೆಗೆ ರಾಜ್ಯ ಸರ್ಕಾರವೂ 50 ಹೊಸ ನಗರ ಸಾರಿಗೆ ಬಸ್‌ಗಳನ್ನು ಮಂಜೂರು ಮಾಡಲಿದ್ದು ಆ 150 ಬಸ್‌ಗಳು ಬಂದ ನಂತರ ಅವಧಿ ಮೀರುತ್ತಿರುವ 118 ಸಿಟಿ ಬಸ್‌ಗಳನ್ನು ಸ್ಕ್ರ್ಯಾಪ್‌ಗೆ ಕಳುಹಿಸುತ್ತೇವೆ ಎಂದು ಅವರು ತಿಳಿಸಿದರು.

ಮಹಿಳೆಯರಿಗೆ 12ನೇ ಶತಮಾನದಲ್ಲೆ ಧಾರ್ಮಿಕ, ಸಾಮಾಜಿಕ ಸಮಾನತೆ ಸಂದೇಶ ಸಾರಿದ್ದು ಅಣ್ಣ ಬಸವಣ್ಣ

ಕುಂದೂರು ಮಠದ ಶ್ರೀಶರತ್ ಚಂದ್ರ ಸ್ವಾಮೀಜಿ ಅಭಿಮತ



ಬಸವ ಜಯಂತಿ ಕಾರ್ಯಕ್ರಮದಲ್ಲಿ 'ಬಸವಣ್ಣ ಮತ್ತು ಸಾಂಸ್ಕೃತಿಕ ನಾಯಕತ್ವ' ಕುರಿತು ಕುಂದೂರು ಮಠದ ಶ್ರೀ ಶರತ್ ಚಂದ್ರ ಸ್ವಾಮೀಜಿ ಮಾತನಾಡಿದರು.

ಮೈಸೂರು, ಮೇ 10(ಎಸ್‌ಪಿಎನ್)– 12ನೇ ಶತಮಾನದಲ್ಲೇ ಮಹಿಳೆಯರಿಗೆ ಧಾರ್ಮಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯ ಸಾರಿದ ಕೀರ್ತಿ ಅಣ್ಣ ಬಸವಣ್ಣರಿಗೆ ಸಲ್ಲುತ್ತದೆ ಕುಂದೂರು ಮಠದ ಶ್ರೀ ಶರತ್ ಚಂದ್ರ ಸ್ವಾಮೀಜಿ ಅಭಿಪ್ರಾಯಪಟ್ಟರು.

ಮೈಸೂರು ಅಗ್ರಹಾರ ಬಸವೇಶ್ವರ ರಸ್ತೆಯ ಬಸವಕೇಂದ್ರದಲ್ಲಿ ಜಾಗತಿಕ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕ ಹಾಗೂ ಮಹಿಳಾ ಘಟಕ, ಲಿಂಗಾಯತ ಸಾಂಸ್ಕೃತಿಕ ಸಮಿತಿ, ಬಸವಕೇಂದ್ರ ರಾಷ್ಟ್ರೀಯ ಬಸವ ದಳ, ತರಳಬಾಳು ಸಮಾಗಮ ಸಹಯೋಗದೊಂದಿಗೆ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ 'ಬಸವಣ್ಣ ಮತ್ತು ಸಾಂಸ್ಕೃತಿಕ ನಾಯಕತ್ವ' ಕುರಿತು ಮಾತನಾಡಿದರು.

ಮಹಾರಾಷ್ಟ್ರ ಸರ್ಕಾರ ಛತ್ರಪತಿ ಶಿವಾಜಿ ಮಹಾರಾಜ್ ಅವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಣೆ ಮಾಡಿದೆ. ಏಕೆಂದರೆ, ಮಹಾರಾಷ್ಟ್ರದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಸಾಂಸ್ಕೃತಿಕ, ಸಾಮಾಜಿಕ ಕೊಡುಗೆ ಅಪಾರ. ಅದೇ ರೀತಿ ಕರ್ನಾಟಕದಲ್ಲಿ ವಚನ ಚಳವಳಿ ಮತ್ತು ಸಾಹಿತ್ಯದ ಮೂಲಕ ಕನ್ನಡಿಗರ ಸಾಮಾಜಿಕ ಜೀವನ ಮಟ್ಟವನ್ನು ಸುಧಾರಿಸಿದ ಕೀರ್ತಿ ಅಣ್ಣ ಬಸವಣ್ಣರಿಗೆ ಸಲ್ಲುತ್ತದೆ. ಇದನ್ನು ಗುರುತಿಸಿರುವ ರಾಜ್ಯ ಸರ್ಕಾರ ಬಸವಣ್ಣನವರನ್ನು 'ಕರ್ನಾಟಕ ಸಾಂಸ್ಕೃತಿಕ ನಾಯಕ' ಎಂದು ಘೋಷಣೆ ಮಾಡಿರುವುದು ಸಂತೋಷದ ಸಂಗತಿ ಎಂದರು.

1951–52ರ ಪ್ರಥಮ ಲೋಕಸಭಾ ಚುನಾವಣೆಯಲ್ಲಿ ಉತ್ತರ ಭಾರತದ 38 ಲಕ್ಷದಷ್ಟು ಮಹಿಳೆಯರಿಗೆ ಮತದಾನ ಮಾಡಲು ಸಾಧ್ಯವಾಗಲಿಲ್ಲ. ಏಕೆಂದರೆ, ಗುರುತಿನ ಚೀಟಿಯಲ್ಲಿ ಅವರ ಹೆಸರೇ ನಮೂದಾಗಿರದ ಕಾರಣ ಮತಗಟ್ಟೆಗೆ ಬಂದು ಮಹಿಳೆಯರು ವಾಪಸ್ಸು ಹೋಗಿದ್ದರು. ಆದರೆ, ಕರ್ನಾಟಕದಲ್ಲಿ ಮಹಿಳೆಯರಿಗೆ ಧಾರ್ಮಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯವಿದ್ದ ಪರಿಣಾಮ ಪ್ರಥಮ ಲೋಕಸಭಾ ಚುನಾವಣೆಯಲ್ಲಿ ಮತದಾನ ಮಾಡಲು ಬಂದ ಮಹಿಳೆಯರಿಗೆ ಈ ಸಮಸ್ಯೆ ಉದ್ಭವಿಸಿಲ್ಲ ಎಂದರು.

ಈ ನೆಲದ ಆಚಾರ–ವಿಚಾರಗಳನ್ನು ವಚನ ಸಾಹಿತ್ಯದಲ್ಲಿ ಅಧ್ಯಯನದ ಮೂಲಕ ತಿಳಿದುಕೊಳ್ಳಬಹುದು. ಇದರಲ್ಲಿ ಅನೇಕ ಸಮಾಜ ಸುಧಾರಕರ ಅನುಭವಗಳು ಅಡಕವಾಗಿವೆ ಹಾಗೂ ಅನೇಕ ಸಮಸ್ಯೆಗಳ ಸಂಬಂಧ ವಚನ ಸಾಹಿತ್ಯದ ಮೂಲಕ ವಚನಕಾರರು ವಿರೋಧ ವ್ಯಕ್ತಪಡಿಸಿರುವುದು ಇದರಲ್ಲಿ ಉಲ್ಲೇಖವಾಗಿವೆ. ಹಾಗಾಗಿ ರಾಜ್ಯ ಸರ್ಕಾರ ಅಣ್ಣ ಬಸವಣ್ಣನವರ ಸಾಂಸ್ಕೃತಿಕ ಹೋರಾಟಗಳನ್ನು ಗುರುತಿಸಿ, 'ಕರ್ನಾಟಕ ಸಾಂಸ್ಕೃತಿಕ ನಾಯಕ' ಎಂದು ಘೋಷಣೆ ಮಾಡಿರುವುದು ಒಳ್ಳೆ ಸಂಗತಿ ಎಂದರು.

ಈ ವೇಳೆ ಮೈಸೂರು ನೀಲಕಂಠಸ್ವಾಮಿ ಮಠದ ಶ್ರೀ ಸಿದ್ದಮಲ್ಲ ಸ್ವಾಮೀಜಿ, ಜಾಗತಿಕ ಲಿಂಗಾಯತ ಮಹಾಸಭಾದ ಶರಣ ಮಹಾದೇವಪ್ಪ, ಪಾಲಿಕೆ ಮಾಜಿ ಸದಸ್ಯೆ ಸೌಮ್ಯ ಉಮೇಶ್, ಮಹಿಳಾ ಘಟಕದ ಅಧ್ಯಕ್ಷೆ ಜ್ಯೋತಿ ರೇಚಣ್ಣ, ಮರಪ್ಪ, ಉಷಾ ಗಂಗಾಧರ ಸ್ವಾಮಿ, ಎಂ.ರಾಜು, ಜಯಶಂಕರ್, ಮಂಜುನಾಥ್ ಸದಸ್ಯರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ

ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ

ಮೈಸೂರು, ಮೇ 10– ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ ಹಾಗೂ ವರ್ಣ ಕಲೆಕ್ಟಿವ್ ಮತ್ತು ಮೈಸೂರ್ ಆರ್ಟ್ ಸೆಂಟರ್ ಸಹಯೋಗದಲ್ಲಿ, 'ART intro' ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ ಮೇ 12 ರಂದು ಬೆಳಗ್ಗೆ 11.00 ಕ್ಕೆ ಹಾರ್ಡ್ವಿಕ್ ಶಾಲೆ ಆವರಣದಲ್ಲಿರುವ ಏರ್ಪಡಿಸಲಾಗಿದೆ.

ಮುಖ್ಯ ಅತಿಥಿಗಳಾಗಿ ಹಿರಿಯ ರಂಗಕರ್ಮಿ ಇಂದಿರಾ ನಾಯರ್, ಸಂಗೀತ ಸಂಯೋಜಕ ಶ್ರೀಕಂಠ, ಭಾಗವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಹಿರಿಯ ರಂಗ ನಿರ್ದೇಶಕರು, ಗಾಂಧಿವಾದಿ ಹಾಗೂ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆಯ ಮ್ಯಾನೇಜಿಂಗ್ ಟ್ರಸ್ಟಿ ಪ್ರಸನ್ನ ಹಾಗೂ ಶಿಬಿರದ ನಿರ್ದೇಶಕ ಚೆಲುವರಾಜು ಉಪಸ್ಥಿತರಿರುವರು.

ಕಾರ್ಯಕ್ರಮದಲ್ಲಿ ಮಕ್ಕಳ ಚಿತ್ರಕಲಾ ಪ್ರದರ್ಶನ ಹಾಗೂ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳಿರುತ್ತದೆ. ಹೆಚ್ಚಿನ ಮಾಹಿತಿಗೆ 9845605012 ಸಂಪರ್ಕಿಸಬಹುದು.

ಮೈಸೂರಲ್ಲಿ ಗುಡುಗು ಸಹಿತ ಭಾರಿ ಮಳೆ

ಮೈಸೂರು, ಮೇ 10(ಎಂಕೆ)– ಮೈಸೂರಿನಲ್ಲಿ ಗುರುವಾರ ರಾತ್ರಿ ಮಿಂಚು–ಗುಡುಗು ಸಹಿತ ಧಾರಾಕಾರವಾಗಿ ಮಳೆ ಸುರಿಯಿತು.

ರಾತ್ರಿ 9.50ರ ಸುಮಾರಿಗೆ ಆರಂಭವಾದ ಮಳೆ ಗಂಟೆಗೂ ಹೆಚ್ಚು ಕಾಲ ಧಾರಾಕಾರವಾಗಿ ಸುರಿಯಿತು. ಪರಿಣಾಮ ನಗರದ ರಸ್ತೆಗಳು, ಚರಂಡಿ, ಮ್ಯಾನ್‌ಹೋಲ್‌ಗಳು ಉಕ್ಕಿ ಹರಿದವು. ಕನಕಗಿರಿ, ಗುಂಡೂರಾವ್ ನಗರ, ಮಧುವನ, ಐಶ್ವರ್ಯನಗರ, ಆನಂದನಗರ ಸೇರಿದಂತೆ ನಗರದ ತಗ್ಗು ಪ್ರದೇಶಗಳಲ್ಲಿನ ಹಲವಾರು ಮನೆಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಯಾಯಿತು.

ಕನಕಗಿರಿಯ 1ನೇ ಕ್ರಾಸ್‌ನಲ್ಲೇ ಹತ್ತಾರು ಮನೆಗಳಿಗೆ ನೀರು ನುಗ್ಗಿದ್ದರಿಂದ ನಿವಾಸಿಗಳು ಇಡೀ ರಾತ್ರಿ ಮನೆಯೊಳಗೆ ನುಗ್ಗಿದ್ದ ನೀರನ್ನು ತೋಡಿ ಹೊರ ಹಾಕಲು ಹಾರಸಾಹಸ ಪಡುವಂತಾಯಿತು. ಹಾಗೆಯೇ ಬಹುತೇಕ ಕಡೆಗಳಲ್ಲಿ ಯುಜಿಡಿ ಮ್ಯಾನ್‌ಹೋಲ್‌ಗಳು ಉಕ್ಕಿ ಹರಿದು ಮಳೆ ನೀರಿನೊಂದಿಗೆ ಕೊಳಚೆ ನೀರು ನುಗ್ಗಿದ್ದರಿಂದ ಭಾರಿ ಕಿರಿಕಿರಿ ಉಂಟಾಯಿತು. ದೇವರಾಜ ಮಾರುಕಟ್ಟೆ ಹಿಂಭಾಗದಲ್ಲಿರುವ ಕೊತ್ವಾಲ್ ರಾಮಯ್ಯ ಬೀದಿಯಲ್ಲಿ ಕೆಲ ಮನೆಗಳಿಗೆ ನೀರು ನುಗ್ಗಿದ್ದು, ಸ್ಥಳಕ್ಕೆ ದಾವಿಸಿದ ಪಾಲಿಕೆಯ ಅಭಯ ತಂಡ ನೀರನ್ನು ಹೊರಹಾಕುವಲ್ಲಿ ಸಫಲರಾಗಿದ್ದಾರೆ.



ಧರೆಗುರುಳಿದ ಮರ: ವಿಜಯನಗರದ ಯೋಗ ನರಸಿಂಹಸ್ವಾಮಿ ದೇವಸ್ಥಾನದ ಸಮೀಪದ ಹುಣಸೂರು ರಸ್ತೆ ಮಾರ್ಗದಲ್ಲಿ ಮರವೊಂದು ಬುಡಸಮೇತ ನೆಲಕ್ಕುರುಳಿದ್ದು, ಸಂಚಾರಕ್ಕೆ ತೊಂದರೆಯಾಗಿದೆ. ಹಾಗೆಯೇ ಬಾರೀ ಗಾಳಿ–ಮಳೆಗೆ ನಗರದ ಹಲವೆಡೆ ಮರದ ರಂಬೆ–ಕೊಂಬೆಗಳು ಮುರಿದು ಬಿದ್ದಿರುವ ಸಾಧ್ಯತೆ ಇದೆ ಎಂದು ನಗರಪಾಲಿಕೆ ಕಂಟ್ರೋಲ್ ರೂಂ ಸಿಬ್ಬಂದಿ ಮಾಹಿತಿ ನೀಡಿದರು.

ಮುರಿದು ಬಿದ್ದ ವಿದ್ಯುತ್ ಕಂಬಗಳು: ನಗರದ ಸಿದ್ದಾರ್ಥ ಬಡಾವಣೆಯ ಮೋಕ್ಷ ಮಾರ್ಗ, ವರುಣ ಸೇರಿದಂತೆ ವಿವಿಧೆಡೆ 10 ಕ್ಕೂ ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. ಇನ್ನಷ್ಟು ಕಡೆಗಳಲ್ಲಿ ವಿದ್ಯುತ್ ಕಂಬಗಳು ಮುರಿದು ಬಿದ್ದಿರುವ ಸಾಧ್ಯತೆ ಇದೆ. ಆದರೆ ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ ಎಂದು ಚೆಸ್ಕಾಂ ಅಧಿಕಾರಿಯೊಬ್ಬರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಸಿಎಸ್‌ಕೆ ವಿರುದ್ಧ ಗುಜರಾತ್‌ಗೆ ಜಯ



ಅಹಮದಾಬಾದ್, ಮೇ 10– ನಾಯಕ ಶುಭ್‌ಮನ್ ಗಿಲ್ ಹಾಗೂ ಸಾಯಿ ಸುದರ್ಶನ ಅವರ ಶತಕದ ನೆರವಿನಿಂದ ಗುಜರಾತ್ ಟೈಟಾನ್ಸ್ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ 35 ರನ್‌ಗಳ ಜಯ ಗಳಿಸಿದೆ.

ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ 20 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 231ರನ್ ಗಳಿಸಿತು. ನಾಯಕ ಶುಭ್‌ಮನ್ ಗಿಲ್ 104, ಸಾಯಿ ಸುದರ್ಶನ 103, ಡೇವಿಡ್ ಮಿಲ್ಲರ್ 16 ರನ್ ಗಳಿಸಿದರು. ಚೆನ್ನೈ ಪರ ತುಷಾರ್ ದೇಶಪಾಂಡೆ 2 ವಿಕೆಟ್ ಪಡೆದರು.

ಗುರಿ ಬೆನ್ನತ್ತಿದ ಚೆನ್ನೈ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 196 ರನ್ ಗಳಿಸಿ ಸೋಲು ಅನುಭವಿಸಿತು. ತಂಡದ ಪರ ಡ್ಯಾರಿಲ್ ಮೆಚೆಲ್ 65, ಮೋಯಿನ್ ಅಲಿ 56, ಶಿವಂ ದುಬೆ 21, ಜಡೇಜಾ 18, ಧೋನಿ 26 ರನ್ ಗಳಿಸಿದರು. ಗುಜರಾತ್ ಪರ ಮೋಹಿತ್ ಶರ್ಮಾ 3, ರಶೀದ್ ಖಾನ್ 2, ಉಮೇಶ್ ಯಾದವ್, ಸಂದೀಪ್ ವಾರಿಯರ್ ತಲಾ ಒಂದೊಂದು ವಿಕೆಟ್ ಪಡೆದರು. ಗುಜರಾತ್ ಪರ ನಾಯಕ ಶುಭ್‌ಮನ್ ಗಿಲ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.



ಬಸವ ಜಯಂತಿ ಪ್ರಯುಕ್ತ ಮೈಸೂರಿನಲ್ಲಿ ಬಸವೇಶ್ವರರ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ನಮನ ಸಲ್ಲಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಇದೇ ವೇಳೆ ಬಸವ ಬಳಗಗಳ ಒಕ್ಕೂಟದ ಕಚೇರಿಗೆ ಭೇಟಿ ನೀಡಿ ಚಹಾ ಸೇವಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ, ಬಸವ ಬಳಗಗಳ ಅಧ್ಯಕ್ಷ ಪ್ರದೀಪ್ ಕುಮಾರ್ ಮತ್ತಿತರರಿದ್ದರು.

ಇಂದು ಶ್ರೀನಿವಾಸ ಪ್ರಸಾದರ ಶ್ರದ್ಧಾಂಜಲಿ ಸಭೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಸ್ಥಿತಿ


ಮೈಸೂರು, ಮೇ 10(ಎಸ್‌ಪಿಎನ್)– ಇತ್ತೀಚೆಗೆ ನಿಧನರಾದ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರಿಗೆ ಮೇ 11 ರಂದು ಬೆಳಗ್ಗೆ 10.30ಕ್ಕೆ ಮೈಸೂರು–ನಂಜನಗೂಡು ರಸ್ತೆಯ ಡಾ.ಬಿ.ಆರ್.ಅಂಬೇಡ್ಕರ್ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಟ್ರಸ್ಟ್ ಆವರಣದಲ್ಲಿ ಶ್ರದ್ಧಾಂಜಲಿ ಸಭೆ ಆಯೋಜಿಸಲಾಗಿದೆ.



ಶ್ರೀನಿವಾಸ ಪ್ರಸಾದ್

ಡಾ.ಬಿ.ಆರ್.ಅಂಬೇಡ್ಕರ್ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್, ಸಮಾನತೆ ಸ್ವಾಭಿಮಾನ ಸ್ವಾಲಂಬನೆ ಪ್ರತಿಷ್ಠಾನ ಹಾಗೂ ಸಮಾನತೆ ಪ್ರಕಾಶನ ಸಹಯೋಗದೊಂದಿಗೆ ಈ ಕಾರ್ಯಕ್ರಮ ಆಯೋಜಿಸಲಿದ್ದು, ಈ ಕಾರ್ಯಕ್ರಮದಲ್ಲಿ ಮೈಸೂರು ವಿಶ್ವಮೈತ್ರಿ ಬುದ್ಧವಿಹಾರದ ಕಲ್ಯಾಣಸಿರಿ ಭಂತೇಜಿ ಸಾನಿಧ್ಯ ವಹಿಸಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ವಿ.ಶ್ರೀನಿವಾಸ ಪ್ರಸಾದ್ ಅವರ ಪತ್ನಿ ಭಾಗ್ಯಲಕ್ಷ್ಮಿ ಶ್ರೀನಿವಾಸ ಪ್ರಸಾದ್ ಉಪಸ್ಥಿತರಿರುತ್ತಾರೆ.

ಮಾಜಿ ಮುಖ್ಯಮಂತ್ರಿಗಳಾದ ಡಾ.ಎಂ.ವೀರಪ್ಪಮೊಯ್ಲಿ, ಬಿ.ಎಸ್.ಯಡಿಯೂರಪ್ಪ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹಾದೇವಪ್ಪ, ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯಾ, ವಕೀಲ ಸಿ.ಎಸ್.ದ್ವಾರಕನಾಥ್, ಸಂಸದ ಪ್ರತಾಪ ಸಿಂಹ, ಶಾಸಕ ಟಿ.ಎಸ್.ಶ್ರೀವತ್ಸ, ಪ್ರತಿಮಾ ಪ್ರಸಾದ್, ಡಾ.ಸಿ. ಬಸವರಾಜು, ಭರತ್ ರಾಮಸ್ವಾಮಿ ಉಪಸ್ಥಿತರಿರುತ್ತಾರೆ.



ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸಿ.ನರೇಂದ್ರ ಮೈಸೂರಿನಲ್ಲಿ ಬಸವೇಶ್ವರರ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ನಮನ ಸಲ್ಲಿಸಿದರು. ಈ ವೇಳೆ ಬೋವಿ ನಿಗಮದ ಮಾಜಿ ಅಧ್ಯಕ್ಷ ಸೀತಾರಾಮ್, ಡಿಸಿಸಿ ಪ್ರಧಾನ ಕಾರ್ಯದರ್ಶಿ ಚಂದ್ರು, ಹುಣಸೂರು ಬಸವಣ್ಣ ಹಾಗೂ ಕಾಂಗ್ರೆಸ್ ಮುಖಂಡರು ಇದ್ದರು.

ವಿಧಾನ ಪರಿಷತ್ ಮಾಜಿ ಸದಸ್ಯ ಟಿ.ಕೆ.ಚಿನ್ನಸ್ವಾಮಿ ನಿಧನ

ಮೈಸೂರು, ಮೇ 10– ವಿಧಾನ ಪರಿಷತ್ ಮಾಜಿ ಸದಸ್ಯ ಟಿ.ಕೆ. ಚಿನ್ನಸ್ವಾಮಿ ಅವರು ಗುರುವಾರ ರಾತ್ರಿ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.



ಇವರು ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ 1988ರಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ವಿಧಾನ ಪರಿಷತ್ ಪ್ರವೇಶಿಸಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದ ಇವರು, ಸುಮಾರು 15 ಕೃತಿಗಳನ್ನು ರಚಿಸಿದ್ದರು ಎಂದು ತಿಳಿಸಿರುವ ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ಇವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿದ್ದಾರೆ. ಮೃತರು ಮೂಲತಃ ಕೊಡಗಿನವರಾಗಿದ್ದು, ಕೆ.ಆರ್.ನಗರ ಶಾಲೆಯಲ್ಲಿ ಶಿಕ್ಷಕರಾಗಿದ್ದರು. ಅವರು ಪುತ್ರ ಸೇರಿದಂತೆ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ ಎಂದು ವೆಂಕಟೇಶ್ ತಿಳಿಸಿದ್ದಾರೆ.

ಮಹಾದೇವಮ್ಮ

ಮೈಸೂರು, ಮೇ 10– ಮೈಸೂರಿನ ಶ್ರೀರಾಂಪುರ ನಿವಾಸಿ ರಾಜಮಲ್ಲು ಅವರ ಧರ್ಮಪತ್ನಿ ಮಹಾದೇವಮ್ಮ (65) ಅವರು ಶುಕ್ರವಾರ ನಿಧನರಾದರು.



ಇವರು ಪತಿ, ಐವರು ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಕೆ.ಜಿ.ಕೊಪ್ಪಲು ರುದ್ರಭೂಮಿಯಲ್ಲಿ ಶನಿವಾರ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಮೃತರ ಕುಟುಂಬದವರು ತಿಳಿಸಿದ್ದಾರೆ. ಮಹಾದೇವಮ್ಮ ಅವರ ನಿಧನಕ್ಕೆ ಶ್ರೀ ವೆಂಕಟೇಶ್ವರ ಟ್ರೇಡರ್ಸ್ ಮಾಲೀಕರಾದ ವಿಕ್ರಾಂತ ಪಿ.ದೇವೇಗೌಡ ಮತ್ತಿತರರು ಸಂತಾಪ ಸೂಚಿಸಿದ್ದಾರೆ.



ಕರ್ನಾಟಕದ ಸಾಂಸ್ಕೃತಿಕ ನಾಯಕ,ಕಾಯಕಯೋಗಿ ಭಕ್ತಿ ಭಂಡಾರಿ ಬಸವಣ್ಣನವರ ಜಯಂತಿ ಹಿನ್ನೆಲೆಯಲ್ಲಿ ಮೈಸೂರಿನ ಗನ್ ಹೌಸ್ ಬಳಿಯ ಬಸವೇಶ್ವರ ವೃತ್ತದ ಬಸವೇಶ್ವರರ ಪುತ್ಥಳಿಗೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾಲಾರ್ಪಣೆ ಮಾಡಿದರು. ಮುಖಂಡರಾದ ರವಿಶಂಕರ್, ವಿಜಯ್ ಕುಮಾರ್, ಅಸಂಘಟಿತ ಕಾರ್ಮಿಕರ ಘಟಕದ ಅಧ್ಯಕ್ಷ ವಿನಯ್ ಕುಮಾರ್, ಯುವ ಕಾಂಗ್ರೆಸ್ ಅಧ್ಯಕ್ಷ ರಾಕೇಶ್, ಮುಖಂಡರಾದ ಗಣೇಶ್, ಡೈರಿ ವೆಂಕಟೇಶ್, ವಿಶ್ವನಾಥ್ (ವಿಶ್ವ), ಫಾರೂಕ್, ಮಧುರಾಜ್, ಕುಮಾರ್ (ಕುಮ್ಮಿ) ಮತ್ತಿತರರು ಉಪಸ್ಥಿತರಿದ್ದರು.



ಬಸವ ಜಯಂತಿ ಪ್ರಯುಕ್ತ ಬಸವೇಶ್ವರರ ಪ್ರತಿಮೆಗೆ ದಕ್ಷಿಣ ಶಿಕ್ಷಕರ ಕ್ಷೇತ್ರದ ಜೆಡಿಎಸ್ ಟಿಕೆಟ್ ಆಕಾಂಕ್ಷಿ ಕೆ.ವಿವೇಕಾನಂದ ಮಾಲಾರ್ಪಣೆ ಮಾಡಿ, ಗೌರವ ಸಲ್ಲಿಸಿದರು. ಈ ವೇಳೆ ಪ್ರದೀಪ್, ನಾಗಣ್ಣ, ನಂದೀಶ್, ಚಂದ್ರಪ್ಪ, ಧನಂಜಯ, ನಿರಂಜನ್ ಮತ್ತಿತರರಿದ್ದರು.



ಬಸವ ಜಯಂತಿ ಅಂಗವಾಗಿ ಬಸವೇಶ್ವರರ ಪ್ರತಿಮೆಗೆ ಬಿಜೆಪಿ ಮುಖಂಡ, ಮಾಜಿ ಮೇಯರ್ ಸಂದೇಶ್ ಸ್ವಾಮಿ ಮಾಲಾರ್ಪಣೆ ಮಾಡಿ, ನಮನ ಸಲ್ಲಿಸಿದರು. ಇದೇ ವೇಳೆ ವಿದ್ಯಾವಂತ ಸಮಾಜದಲ್ಲಿ ಜಾತೀಯತೆ, ಅಸಮಾನತೆ ಹೆಚ್ಚುತ್ತಿದ್ದು, ಅನುಭವ ಮಂಟಪದ ಮೂಲಕ 12ನೇ ಶತಮಾನದಲ್ಲೇ ಸಮಾನತೆ ಸಂದೇಶ ಸಾರಿದ ಬಸವಣ್ಣನವರನ್ನು ಸದಾ ಸ್ಮರಿಸಬೇಕು ಎಂದು ಆಶಿಸಿದರು. ಬಿಜೆಪಿ ಎನ್‌ಆರ್ ಕ್ಷೇತ್ರದ ಅಧ್ಯಕ್ಷ ಸ್ಮಾರ್ಟ್ ಮಂಜು, ಮುಖಂಡರಾದ ಸು.ಮುರುಳೀಧರ್, ಪದ್ಮನಾಭ್, ರೇಣುಕಾ ರಾಜ್ ಮತ್ತಿತರರಿದ್ದರು.



ಮೈಸೂರಿನ ಕನ್ನಡ ಗೆಳೆಯರ ಬಳಗದ ವತಿಯಿಂದ ಬಸವ ಜಯಂತಿಯನ್ನು ಆಚರಿಸಲಾಯಿತು. ಸಂಘದ ಅಧ್ಯಕ್ಷ ಕಾರ್ತಿಕ್ ಕುಮಾರ್, ಪುಟ್ಟ ಮಾಧವಸ್ವಾಮಿ ನಾಯಕ, ಗೋವಿಂದರಾಜು, ನಟರಾಜ, ರುದ್ರಪ್ಪ, ಬ್ಯಾತಳ್ಳಿ ಮಂಜಪ್ಪ, ಬ್ಯಾಂಕ್ ಸಿದ್ದೇಶ್, ಶಿವಪ್ಪ, ಮಾಜಿ ಅಧ್ಯಕ್ಷ ಲಕ್ಷ್ಮಿಕಾಂತ್ ಉಪಸ್ಥಿತರಿದ್ದರು.



ವಿಶ್ವಮಾನವ ಮೈಸೂರು ವಿವಿ ನೌಕರರ ವೇದಿಕೆ ವತಿಯಿಂದ ಬಸವಣ್ಣನವರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಬಸವ ಜಯಂತಿ ಆಚರಿಸಲಾಯಿತು. ಕನ್ನಡ ಚಳುವಳಿ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ, ಸಿಂಡಿಕೇಟ್ ಸದಸ್ಯ ಮಹದೇಶ, ಕನ್ನಡ ಸಾಹಿತ್ಯ ಪರಿಷತ್ ಸದಸ್ಯ ಚಂದ್ರಶೇಖರ್, ವೇದಿಕೆ ಅಧ್ಯಕ್ಷ ವಾಸುದೇವ್, ಉಪಾಧ್ಯಕ್ಷ ಭಾಸ್ಕರ್, ಕಾರ್ಯದರ್ಶಿ ವಿನೋದ್, ಕುಸ್ತಿಪಟು ಪ್ರವೀಣ್ ಇತರರು ಉಪಸ್ಥಿತರಿದ್ದರು.



ಮೈಸೂರು ತಾಲೂಕು ವರಣ ಹೋಬಳಿಯ ಟಿ.ಎಂ.ಹುಂಡಿ ಗ್ರಾಮದಲ್ಲಿ ಬಸವ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಗ್ರಾಮ ದೇವತೆಯಾದ ದೊಡ್ಡಮ್ಮತಾಯಿಗೆ ಹೊಸ ಕೊಳಗ ಧರಿಸಿ, ಹೋಮ, ಪೂಜೆ ಸಲ್ಲಿಸಲಾಯಿತು. ಹೊಸದಾದ ತೇರಿನಲ್ಲಿ ಬಸವಮೂರ್ತಿಯನ್ನು ಇಟ್ಟು ಗ್ರಾಮದ ಬೀದಿಗಳಲ್ಲಿ ವೀರಗಾಸೆ ಕುಣಿತದ ಮೂಲಕ ಮೆರವಣಿಗೆ ಮಾಡಲಾಯಿತು. ದೇವಲಾಪುರ ಬಿಕ್ಷದ ಮಠದ ಶ್ರೀ ಜಡೇಸ್ವಾಮೀಜಿ ಹಾಗೂ ಗ್ರಾಮದ ಹಿರಿಯ ಮುಖಂಡರನ್ನು ಸನ್ಮಾನಿಸಲಾಯಿತು. ಮೆರವಣಿಗೆ ಮುಗಿದ ನಂತರ ಪ್ರಸಾದ ವಿನಿಯೋಗ ನಡೆಯಿತು.



ಮೈಸೂರು ಬಿಜೆಪಿ ವತಿಯಿಂದ ಬಸವೇಶ್ವರ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಲ್ಲಿಸಲಾಯಿತು. ಈ ವೇಳೆ ಬಿಜೆಪಿ ಮುಖಂಡ ಎಸ್. ಜಯಪ್ರಕಾಶ್, ತೇಜಸ್‌ಗೌಡ, ಪೂರ್ಣಚಂದ್ರ ತೇಜಸ್ವಿ, ಸುರೇಶ್, ಶಂಕರ್, ಮಹದೇವ್, ಮಹೇಶ್‌ಗೌಡ, ನಾಗರಾಜು, ಸಂಜಯ್, ವಿಷ್ಣು ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ನಗರಾದ್ಯಂತ ಭಕ್ತಿ ಭಾವದಿಂದ ಬಸವ ಜಯಂತಿ ಆಚರಣೆ

ಮೈಸೂರು, ಮೇ.10(ಜಿಎ)– ಮೈಸೂರು ನಗರ ಸೇರಿದಂತೆ ಜಿಲ್ಲೆಯಾದ್ಯಂತ ಸಾಂಸ್ಕೃತಿಕ ನಾಯಕ ಬಸವಣ್ಣನವರ ಜಯಂತಿಯನ್ನು ವಿವಿಧ ಸಂಘ–ಸಂಸ್ಥೆಗಳು ಭಕ್ತಿ ಭಾವದಿಂದ ಶುಕ್ರವಾರ ಆಚರಿಸಿದವು. ನಗರದ ಪ್ರಮುಖ ವೃತ್ತ, ಆಟೋ ನಿಲ್ದಾಣ ಸೇರಿದಂತೆ ಅನೇಕ ಸ್ಥಳಗಳಲ್ಲಿ ಹಲವು ಸಂಘ–ಸಂಸ್ಥೆಗಳಿಂದ ಬಸವಣ್ಣನವರ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಿ, ಕಾಯಕವೇ ಕೈಲಾಸ ಎಂಬ ವಚನಗಳನ್ನು ಸ್ಮರಿಸಲಾಯಿತು. ನಗರದ ಬಿಜೆಪಿ ಕಚೇರಿಯಲ್ಲಿ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಜಯಂತಿ ಆಚರಿಸಲಾಯಿತು.

ಈ ವೇಳೆ ಮಾತನಾಡಿದ ಬಿಜೆಪಿ ಒಬಿಸಿ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ, ನಾವಿಂದು ಬಸವ ಯುಗದಲ್ಲಿದ್ದೇವೆ. ರಾಮಾಯಣದ ಶ್ರೀರಾಮನೇ ಬಸವಣ್ಣನವರಿಗೆ ಪ್ರೇರಣೆ. ಶ್ರೀರಾಮ ಪ್ರತಿಯೊಂದು ಹಂತದಲ್ಲಿಯೂ ಸಮಾನತೆ, ಸ್ತ್ರೀ ಸಮಾನತೆ, ಭ್ರಾತೃತ್ವ, ಮನಷ್ಯತ್ವಕ್ಕೆ ಆದ್ಯತೆ ನೀಡಿದಂತೆ ಬಸವಣ್ಣವರು ಕಸುಬು ಆಧಾರಿತ ಸಮುದಾಯಗಳನ್ನು ಗೌರವಿಸಿ ಎಲ್ಲರೂ ಒಂದೇ ಎಂದು ಸಾಮಾಜಿಕ ಕ್ರಾಂತಿ ಮಾಡಿದರು. ವೃತ್ತಿಯಿಂದ ಜಾತಿಯೇ ಹೊರತು ಜಾತಿಯಿಂದ ವೃತ್ತಿಯಲ್ಲ. ಮಾನವ ಧರ್ಮವೇ ಶ್ರೇಷ್ಠ ಎಂದು ಪ್ರತಿಪಾದಿಸಿದರು. ಬಸವಣ್ಣನವರ ಆದರ್ಶಗಳನ್ನು ಆನಂತರ ಪಾಲಿಸಿಕೊಂಡು ಬಂದಿದ್ದು ಮೈಸೂರು ರಾಜಮನೆತನ. ಸ್ವಾತಂತ್ರ್ಯ ನಂತರ ಡಿ.ದೇವರಾಜ ಅರಸು, ಯಡಿಯೂರಪ್ಪನವರು ಹಾಗೂ ಪ್ರದಾನಿ ಮೋದಿಯವರು ಬಸವಣ್ಣನವರ ಸ್ವಾವಲಂಬಿ ಕಲ್ಪನೆಯನ್ನು ಅನುಸರಿಸುವ ಮೂಲಕ ಬಸವ ಯುಗವನ್ನು ಮುಂದುವರೆಸಿದ್ದಾರೆ ಎಂದು ಹೇಳಿದರು.

ಈ ವೇಳೆ ಬಿಜೆಪಿ ನಗರ ಅಧ್ಯಕ್ಷ ಎಲ್.ನಾಗೇಂದ್ರ, ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮೈಸೂರು–ಕೊಡಗು ಲೋಕಸಭಾ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ, ಅಲ್ಪಸಂಖ್ಯಾ ಮೋರ್ಚಾ ಅಧ್ಯಕ್ಷ ಅನಿಲ್ ಥಾಮಸ್, ಮುಖಂಡರಾದ ಎನ್.ವಿ.ಫಣೀಶ್, ಬಿ.ಎಂ.ರಘು, ಹೆಚ್.ಜಿ.ಗಿರಿಧರ್, ಕೇಬಲ್ ಮಹೇಶ್, ಮಹೇಶ್, ಕಿರಣ್ ಗೌಡ, ಬಾಲು, ಮಹೇಶ್ ರಾಜ್ ಅರಸ್, ವಕ್ತಾರ ವಸಂತಕುಮಾರ್, ಜೋಗಿ ಮಂಜು, ಮೈ.ಪು.ರಾಜೇಶ್, ರೇಣುಕಾ ರಾಜು, ಮೋನಿಕಾ, ರಾಕೇಶ್ ಗೌಡ, ಶೈಲೇಂದ್ರ ಮತ್ತಿತರರು ಭಾಗವಹಿಸಿದ್ದರು.

ಬಸವ ಜಯಂತಿ ಅಂಗವಾಗಿ ಡಾ. ಯತೀಂದ್ರ ಯುವ ಬ್ರಿಗೇಡ್ ವತಿಯಿಂದ ನಗರದ ಕನಕಗಿರಿಯಲ್ಲಿರುವ ಸುಂಯೆಜ್ ಫಾರಂ ಮುಂಭಾಗ ಗೋಪೂಜೆ ನೆರವೇರಿಸಿ ಮೇವು ವಿತರಿಸಲಾಯಿತು. ಈ ವೇಳೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಜಗಜ್ಯೋತಿ ಬಸವೇಶ್ವರರ ತತ್ವ, ಆದರ್ಶಗಳನ್ನು ಸಮಾಜದಲ್ಲಿ ಎಲ್ಲರೂ ಅಳವಡಿಸಿಕೊಂಡಲ್ಲಿ ಬಸವ ಜಯಂತಿ ಅರ್ಥಪೂರ್ಣವೆನಿಸುತ್ತದೆ. ಬಸವಣ್ಣನವರು ಹಾಕಿಕೊಟ್ಟ ದಾರಿಯಲ್ಲಿ ಮುನ್ನಡೆಯಬೇಕು. ಆಗ ಅವರ ಜೀವನವು ಸಮಾಜಕ್ಕೆ ಆದರ್ಶಪ್ರಾಯ ಎಂದರು. ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಕೆ.ಆರ್.ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಡಾ. ಯತೀಂದ್ರ ಯುವ ಬ್ರಿಗೇಡ್ ಅಧ್ಯಕ್ಷ ಗೌರಿಶಂಕರ, ಶಿವಕುಮಾರ್, ಕಂಸಾಳೆ ರವಿ, ವಿಶ್ವ, ಎಸ್.ಎನ್.ರಾಜೇಶ್, ಸಿದ್ದರಾಮ, ಲೋಕೇಶ್, ಮಂಜು, ಕುಮಾರ್, ಮಂಜುನಾಥ್, ಕೇಬಲ್ ಮಹಾದೇವ್ ಮತ್ತಿತರರಿದ್ದರು.

ಮೈಸೂರಿನ ಗನ್ ಹೌಸ್ ಬಳಿಯ ಬಸವೇಶ್ವರ ವೃತ್ತದಲ್ಲಿರುವ ಬಸವಣ್ಣನವರ ಪ್ರತಿಮೆಗೆ ಮೈಸೂರು ಹೋಟೆಲು ಮಾಲೀಕರ ಸಂಘದಿಂದ ಮಾಲಾರ್ಪಣೆ ಮಾಡಿದರು. ಈ ವೇಳೆ ರಾಜ್ಯ ಹೋಟಲು ಸಂಘದ ಉಪಾಧ್ಯಕ್ಷ ರವಿಶಾಸ್ತ್ರಿ, ಕಾರ್ಯಕಾರಿ ಸಮಿತಿ ಸದಸ್ಯ ಹೇಮಂತಕುಮಾರ್, ಮೈಸೂರು ಸಂಘದ ಅಧ್ಯಕ್ಷ ಸಿ.ನಾರಾಯಣ ಗೌಡ, ಗೋಪಾಲಕೃಷ್ಣ, ಮಹದೇವ ಮತ್ತಿತರರು ಉಪಸ್ಥಿತರಿದ್ದರು.

ಶಾಸಕ ಟಿ.ಎಸ್.ಶ್ರೀವತ್ಸ ಬಸವೇಶ್ವರ ವೃತ್ತದಲ್ಲಿರುವ ಬಸವಣ್ಣನವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಬಸವ ಬಳಗ ಒಕ್ಕೂಟದ ಅಧ್ಯಕ್ಷ ಎಂ.ಪ್ರದೀಪ್ ಕುಮಾರ್. ಕೃಷ್ಣರಾಜ ಕ್ಷೇತ್ರದ ಬಿಜೆಪಿ ಪ್ರಧಾನ ಕಾರ್ಯದರ್ಶಿ ಜಯರಾಮ್, ಜೈ ಶಂಕರ್, ಎನ್. ಪ್ರದೀಪ್ ಕುಮಾರ್, ಆರ್.ಕಿಶೋರ್, ಜಗದೀಶ್, ಧರ್ಮೇಂದ್ರ, ಸಂತೋಷ್, ಕೀರ್ತಿ, ಶ್ರೀಕಂಠ ಉಪಸ್ಥಿತರಿದ್ದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಬಸವೇಶ್ವರ ವೃತ್ತದಲ್ಲಿರುವ ಬಸವಣ್ಣನವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಈ ವೇಳೆ ಮುಖಂಡರಾದ ರವಿಶಂಕರ್, ವಿಜಯ್ ಕುಮಾರ್, ಅಸಂಘಟಿತ ಕಾರ್ಮಿಕರ ಘಟಕದ ಅಧ್ಯಕ್ಷ ವಿನಯ್ ಕುಮಾರ್, ಯುವಕಾಂಗ್ರೆಸ್ ಅಧ್ಯಕ್ಷ ರಾಕೇಶ್, ಗಣೇಶ್, ಡೈರಿ ವೆಂಕಟೇಶ್, ವಿಶ್ವನಾಥ್ (ವಿಶ್ವ), ಫಾರೂಕ್, ಮಧುರಾಜ್, ಕುಮಾರ್ ಇದ್ದರು.



ಮೈಸೂರು ಬಿಜೆಪಿ ಕಚೇರಿಯಲ್ಲಿ ಬಸವ ಜಯಂತಿ ಆಚರಿಸಲಾಯಿತು.



ಮೈಸೂರಿನ ಗನ್ ಹೌಸ್ ಬಳಿಯ ಬಸವೇಶ್ವರ ವೃತ್ತದಲ್ಲಿರುವ ಬಸವಣ್ಣನವರ ಪ್ರತಿಮೆಗೆ ಮೈಸೂರು ಹೋಟೆಲು ಮಾಲೀಕರ ಸಂಘದಿಂದ ಮಾಲಾರ್ಪಣೆ ಮಾಡಲಾಯಿತು.



ಬಸವ ಜಯಂತಿ ಅಂಗವಾಗಿ ಡಾ. ಯತೀಂದ್ರ ಯುವ ಬ್ರಿಗೇಡ್ ವತಿಯಿಂದ ನಗರದ ಕನಕಗಿರಿಯಲ್ಲಿರುವ ಸುಂಯೆಜ್ ಫಾರಂ ಮುಂಭಾಗ ಗೋಪೂಜೆ ನೆರವೇರಿಸಿ ಮೇವು ವಿತರಿಸಲಾಯಿತು.



ಶಾಸಕ ಟಿ.ಎಸ್.ಶ್ರೀವತ್ಸ ಬಸವೇಶ್ವರ ವೃತ್ತದಲ್ಲಿರುವ ಬಸವಣ್ಣನವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಪ್ರದೀಪ್‌ಕುಮಾರ್ ಇನ್ನಿತರರಿದ್ದಾರೆ.

ಬಿಳಿಗಿರಿರಂಗನಬೆಟ್ಟದಲ್ಲಿ ಮೇ 13ರಿಂದ ಜೀವನೋತ್ಸಾಹ ಶಿಬಿರ

ಮೈಸೂರು, ಮೇ 10– ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠ ಇವುಗಳ ಸಂಯುಕ್ತಾಶ್ರಯದಲ್ಲಿ ಇದೇ ಮೇ 13ರಿಂದ 18ರವರೆಗೆ ಬಿಳಿಗಿರಿರಂಗನಬೆಟ್ಟದಲ್ಲಿ ಜೀವನೋತ್ಸಾಹ ಶಿಬಿರವನ್ನುಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಆಶೀರ್ವಾದದೊಂದಿಗೆ ಆಯೋಜಿಸಲಾಗಿದೆ.

ಆರೋಗ್ಯ ಮತ್ತು ಜೀವನಶೈಲಿ, ಪರಿಸರ ಜಾಗೃತಿ, ಕರ್ನಾಟಕದ ಜಾನಪದ ಸಂಸ್ಕೃತಿ, ಜೀವನ ಮತ್ತು ನಗು, ಸಕಾರಾತ್ಮಕ ಪತ್ರಿಕೋದ್ಯಮ, ಸಂಸ್ಕಾರಯುತ ಜೀವನ, ಕೌಟುಂಬಿಕ ಸಾಮರಸ್ಯ, ಭಾರತೀಯ ಸಂಸ್ಕೃತಿ, ಯೋಗ – ಪ್ರಾರ್ಥನೆ, ಅಂತರ್ಜಾಲ – ಜಾಗೃತಿ, ಸಿರಿಧಾನ್ಯಗಳು – ಆರೋಗ್ಯ, ವಚನಗಳಲ್ಲಿ ವೈಜ್ಞಾನಿಕತೆ, ಭಕ್ತಿ ಪರಂಪರೆ – ಈ ವಿಷಯಗಳನ್ನು ಕುರಿತು ಅನುಕ್ರಮವಾಗಿ ಡಾ. ಹೆಚ್. ಬಸವನಗೌಡಪ್ಪ, ಶ್ರೀ ಜಿ. ಮಲ್ಲೇಶ್, ಡಾ. ಜಯಲಕ್ಷ್ಮೀ ಸೀತಾಪುರ, ಎಸ್. ಷಡಕ್ಷರಿ, ವಿಶ್ವೇಶ್ವರ ಭಟ್, ಡಾ. ಶರತ್‌ಚಂದ್ರ ಸ್ವಾಮಿಗಳು, ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, ಸ್ವಾಮಿ ವೀರೇಶಾನಂದಜೀ, ಡಾ. ಎಸ್.ಎನ್. ಓಂಕಾರ್, ಡಾ.ಜಿ.ಬಿ. ಅರವಿಂದ್, ಮಹೇಶ್ ತೆಂಕಹಳ್ಳಿ, ಶಂಕರ ದೇವನೂರು, ಡಾ.ಕೆ.ಅನಂತರಾಮು ಅವರಿಂದ ಉಪನ್ಯಾಸ ಏರ್ಪಡಿಸಲಾಗಿದೆ.

ಮಾನವ ಏಳ್ಗೆಗೆ ಅವಿರತ ಶ್ರಮಿಸಿದ ಬಸವಣ್ಣ

ಸುತ್ತೂರು ಶ್ರೀ ಜಯರಾಜೇಂದ್ರ ಸ್ವಾಮೀಜಿ ಅಭಿಮತ

ಮೈಸೂರು, ಮೇ 10– ಬಸವಣ್ಣನವರು ಮಾನವ ಏಳಿಗೆಗೆ ಶ್ರಮಿಸಿದ ಮಹಾನ್ ಮಾನವತಾವಾದಿಗಳು ಎಂದು ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಮೇ 10 ಶುಕ್ರವಾರ ಅಕ್ಷಯ ತೃತೀಯ ದಂದು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಬಸವ ಜಯಂತಿಯಲ್ಲಿ ಶ್ರೀ ಜಯರಾಜೇಂದ್ರರು ತಿಳಿಸಿದರು.

ಭಾರತ ದೇಶದಲ್ಲಿ ಅನೇಕ ಸಂತರು, ಮಹಾತ್ಮರು, ಶರಣರು, ದಾಸವರಣ್ಯೇರು ಅನೇಕ ಸಮಾಜಮುಖಿ ಕಾರ್ಯಗಳನ್ನು ಮಾಡಿದ್ದಾರೆ. ಜನರನ್ನು ಸರಿಯಾದ ದಾರಿಯಲ್ಲಿ ನಡೆಯುವಂತೆ ಮಾರ್ಗದರ್ಶನ ಮಾಡಿದ್ದಾರೆ. ಅಂತಹವರಲ್ಲಿ ಬಸವಣ್ಣನವರು ಅಗ್ರಗಣ್ಯರು.


ಈ ಭೂಮಿಯ ಮೇಲೆ ಮನುಷ್ಯ ಜನ್ಮ ತಾಳುವುದು ಬಹು ದೊಡ್ಡದು. ಭಗವಂತ ಮನುಷ್ಯನಿಗೆ ಅಪರೂಪದ ಕಲೆಯನ್ನು ನೀಡಿದ್ದಾನೆ, ಅದೇ ಯಾವ ಜೀವಿಗೂ ಇಲ್ಲದ ಮಾತನಾಡುವ ಕಲೆ. ಅದನ್ನು ಬಸವಣ್ಣನವರು ಹೇಗೆ ಬಳಸಬೇಕೆಂಬುದನ್ನು ಅವರ ವಚನದಲ್ಲಿ ಅರ್ಥಗರ್ಭಿತವಾಗಿ ತಿಳಿಸಿದ್ದಾರೆ.

ನುಡಿದರೆ ಮುತ್ತಿನ ಹಾರದಂತಿರಬೇಕು. ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು. ಅಂತ ರಂಗದಲ್ಲಿರುವ ಮಾತೇ ಬಹಿರಂಗದಲ್ಲೂ ಬರಬೇಕು. ನಡೆ ಮತ್ತು ನುಡಿ ಎರಡು ಒಂದೇ ಆಗಿರಬೇಕು. ಯಾರನ್ನೋ ಮೆಚ್ಚಿಸಲು ಮಾತನಾಡದೇ ನಮ್ಮ ಅಂತರಂಗ ಒಪ್ಪಿಕೊಳ್ಳುವ ಮಾತಗಳನ್ನಾಡಬೇಕು ಎಂದಿದ್ದಾರೆ. ಲಕ್ಕರಸನಪಾಳ್ಯ ಶ್ರೀ ಗುರು ಮಲ್ಲೇಶ್ವರ ದಾಸೋಹ ಮಠದ ಹೇಮಂತಕುಮಾರ್, ಸಮಾಜದಲ್ಲಿ ಸಮಾನತೆಯನ್ನು ಬಿತ್ತಿದ ಮಹಾತ್ಮರು ಬಸವಣ್ಣನವರು. ಯಾವುದೇ ಜಾತಿ, ಮತ, ವರ್ಣ, ಲಿಂಗ ಭೇದಗಳಿಲ್ಲದೆ ಮನುಷ್ಯರೆಲ್ಲರೂ ಒಂದೇ ಎಂದು ಸಾರಿದರು. ದೇವರು ಬೇರೆಲ್ಲೂ ಇಲ್ಲ, ನಮ್ಮೊಳಗೆಯೇ ಇದ್ದಾನೆ ಎಂಬುದನ್ನು ಅರುಹಿದ್ದಾರೆ ಎಂದು ತಿಳಿಸಿದರು.

ಭದ್ರಾವತಿ ಶ್ರೀ ಬಿಳಕಿ ಹಿರೇಮಠದ ಶ್ರೀ ಗುರುಪ್ರಸಾದ ದೇವರು 12ನೇ ಶತಮಾನದಲ್ಲಿ ಬಸವಣ್ಣನವರು ಮಾಡಿದ ವಚನ ಕ್ರಾಂತಿ 21ನೇ ಶತಮಾನದ ಜೀವನದ ಎಲ್ಲ ಜಂಜಾಟಗಳಿಗೂ ಪರಿಹಾರವನ್ನು ಒದಗಿಸುತ್ತಿವೆ.

ಬಸವಾದಿ ಶರಣರ ವಚನಗಳು ಸಾರ್ವಕಾಲಿಕವಾದವು. ವ್ಯಕ್ತಿಗಿಂತ ವ್ಯಕ್ತಿತ್ವದ ಪೂಜೆ ಮುಖ್ಯ. ಭಾವಚಿತ್ರವನ್ನು ಪೂಜಿಸುವುದರ ಜೊತೆಗೆ ಅವರ ಚರಿತ್ರೆಯನ್ನು ಪೂಜಿಸಬೇಕು. ಗುರು ಹಿರಿಯರನ್ನು ಗೌರವಿಸಬೇಕು. ಅಂತರಂಗ ಮತ್ತು ಬಹಿರಂಗ ಎರಡು ಒಂದೇ ತೆರನಾಗಿರಬೇಕು ಎಂದು ಹೇಳಿದರು. ಶ್ರೀ ಬಸವೇಶ್ವರರ ಭಾವಚಿತ್ರಕ್ಕೆ ಪೂಜೆ ನೆರವೇರಿಸಿ, ಪುಷ್ಪಾಂಜಲಿ ಸಲ್ಲಿಸ ಲಾಯಿತು. ಶ್ರೀಮತಿ ಕೆ.ಜಿ.ವಿನುತ ಮತ್ತು ಶ್ರೀಮತಿ ಸುಮಂಗಲ ಜಂಗಮಶೆಟ್ಟಿ ಯವರು ವಚನಗಾಯನ ನಡೆಸಿ ಕೊಟ್ಟರು. ಗೋಡೆಕೆರೆ ಶ್ರೀ ಸ್ಥಿರ ಪಟ್ಟಾಧ್ಯಕ್ಷರ ಮಠದ ಶ್ರೀ ಸಿದ್ಧೇಶ ದೇವರು ಸ್ವಾಗತಿಸಿದರು.

ಶ್ರೀ ಕುಮಾರಸ್ವಾಮಿ ವಿರಕ್ತಮಠ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು. ಶ್ರೀಮಠದ ಗುರುಕುಲ ಸಾಧಕರು ಹಾಗೂ ಸೇವಾ ಸಿಬ್ಬಂದಿಗಳು, ಭಕ್ತಾದಿಗಳು ಹಾಗೂ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ರಾಜಯೋಗ ರಿಟ್ರೀಟ್ ಸೆಂಟರ್‌ನಲ್ಲಿ ವ್ಯಕ್ತಿತ್ವ ವಿಕಸನ ಕಾರ್ಯಕ್ರಮ

ಮೈಸೂರು, ಮೇ 10– ಹುಣಸೂರು ರಸ್ತೆಯಲ್ಲಿರುವ ಲಿಂಗದೇವರಕೊಪ್ಪಲಿನಲ್ಲಿರುವ ಅಂತರರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ರಾಜಯೋಗ ರಿಟ್ರೀಟ್ ಸೆಂಟರ್‌ನಲ್ಲಿ ಮೇ 11ರಿಂದ ಜುಲೈ 6 ರವರೆಗೆ 7 ತಂಡಗಳಲ್ಲಿ 2024 ಮೈಸೂರು ಸಬ್ ಜೋನಿನ ವಾರ್ಷಿಕ ವ್ಯಕ್ತಿತ್ವ ವಿಕಸನ ಕಾರ್ಯಕ್ರಮವನ್ನು ಸ್ವಚ್ಛ ಮತ್ತು ಸ್ವಸ್ಥ ಸಮಾಜ ನಿರ್ಮಾಣಕ್ಕಾಗಿ ಹಮ್ಮಿಕೊಳ್ಳಲಾಗಿದೆ ಎಂದು ರಿಟ್ರೀಟ್ ಸೆಂಟರ್‌ನ ಮುಖ್ಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಕುಮಾರಿ ಶಾರದಾಜೀ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ, ಕೊಡಗು, ಕ್ಯಾಲಿಕಟ್, ಕಣ್ಣೂರು, ಕೊಚ್ಚಿನ್, ಜಿಲ್ಲೆಯ ಈಶ್ವರೀಯ ವಿಶ್ವವಿದ್ಯಾಲಯಗಳಲ್ಲಿ ನಿಯಮಿತವಾಗಿ ರಾಜಯೋಗ ಅಭ್ಯಾಸ ಮಾಡುವ ವಿದ್ಯಾರ್ಥಿಗಳು, ಶಿಕ್ಷಕಿಯರು ಮಾತ್ರ ಭಾಗವಹಿಸಬಹುದಾಗಿದೆ. ಈ ಆಧ್ಯಾತ್ಮಿಕ ಸಶಕ್ತೀಕರಣವು, ಆಧ್ಯಾತ್ಮಿಕ ಸಂಪನ್ನತೆ ಮತ್ತು ಸಂಪೂರ್ಣತೆಯ ಜೀವನದ ವಿಷಯದ ಮೇಲೆ ಆಧಾರಿತವಾಗಿದೆ ಎಂದು ತಿಳಿಸಿದ್ದಾರೆ. ಮೌಂಟ್ ಅಬುವಿನಿಂದ ಆಗಮಿಸುವ ರಾಜಯೋಗ ವಿಷಯ ತಜ್ಞರು ಕಾರ್ಯಕ್ರಮವನ್ನು ನಡೆಸಿಕೊಡಲಿದ್ದಾರೆ. ಹೆಚ್ಚಿನ ವಿವರಗಳಿಗೆ 9448368019 ಇಲ್ಲವೆ 9945861666 ನ್ನು ಸಂಪರ್ಕಿಸುವಂತೆ ಕೋರಲಾಗಿದೆ.

ಬರ ನಿರ್ವಹಣೆಗೆ ನೀತಿ ಸಂಹಿತೆಯಿಂದ ವಿನಾಯ್ತಿ ನೀಡಿ; ಚುನಾವಣಾ ಆಯೋಗಕ್ಕೆ ರಾಜ್ಯ ಸರ್ಕಾರ ಮನವಿ

ಕುಡಿಯುವ ನೀರು, ಜಾನುವಾರುಗಳಿಗೆ ಮೇವು ಕಲ್ಪಿಸಲು ಅವಕಾಶ ಮಾಡಿಕೊಡಿ

ಬೆಂಗಳೂರು, ಮೇ 10(ಕೆಎಂಶಿ)–ಬರ ಹಾಗೂ ಕುಡಿಯುವ ನೀರು ನಿರ್ವಹಣೆ ಕುರಿತು ಸಭೆ ನಡೆಸಿ ಪರಿಹಾರ ಕ್ರಮ ಕೈಗೊಳ್ಳಲು ಮಾದರಿ ನೀತಿ ಸಂಹಿತೆಯಿಂದ ವಿನಾಯಿತಿ ನೀಡುವಂತೆ ರಾಜ್ಯ ಸರ್ಕಾರ ಮುಖ್ಯ ಚುನಾವಣಾಧಿಕಾರಿಗಳನ್ನು ಕೋರಿದೆ.

ಕರ್ನಾಟಕದಲ್ಲಿ ಕಳೆದ ಮುಂಗಾರು ಮತ್ತು ಹಿಂಗಾರು ಮಳೆ ವೈಫಲ್ಯದಿಂದ 223 ತಾಲೂಕುಗಳು ಬರ ಪೀಡಿತವಾಗಿದ್ದವು. ಇವುಗಳಲ್ಲಿ ಕುಡಿಯುವ ನೀರು ಮತ್ತು ಮೇವಿಗೆ ಸಮಸ್ಯೆ ಉಂಟಾಗಿದೆ. ಪ್ರಸಕ್ತ ಸಾಲಿನಲ್ಲೂ ನಿರೀಕ್ಷೆಯಂತೆ ಇನ್ನು ಮಳೆ ಬಂದಿಲ್ಲ. ಈ ಕಾರಣದಿಂದ ಸಮಸ್ಯೆ ಇರುವ ಕಡೆ ಪರಿಹಾರ ಕಾರ್ಯ ಕೈಗೊಳ್ಳುವ ಹೊಣೆ ಸರ್ಕಾರದ್ದಾಗಿದೆ.

ರಾಜ್ಯದ 28 ಲೋಕಸಭಾ ಕ್ಷೇತ್ರಗಳಿಗೆ ಎರಡು ಹಂತಗಳಲ್ಲಿ ಚುನಾವಣೆ ಪೂರ್ಣಗೊಂಡಿದೆ, ಆದರೆ, ಜೂನ್ 6ರವರೆಗೂ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುತ್ತದೆ. ನಮ್ಮಲ್ಲಿ ಮತದಾನ ಪೂರ್ಣಗೊಂಡಿರುವುದರಿಂದ ಈ ತುರ್ತು ವಿಷಯಕ್ಕೆ ಮಾತ್ರ ನೀತಿ ಸಂಹಿತೆ ಸಡಿಲಿಸಿ ಪರಿಹಾರ ಕಾರ್ಯಕೈಗೊಳ್ಳಲು ಅವಕಾಶ ಮಾಡಿಕೊಡಿ ಎಂದು ಗ್ರಾಮೀಣ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ರಾಜ್ಯದ ಮುಖ್ಯ ಚುನಾವಣಾಧಿಕಾರಿ ಅವರಿಗೆ ಪತ್ರ ಬರೆದು ಮನವಿ ಮಾಡಿಕೊಂಡಿದ್ದಾರೆ.

ಲೋಕಸಭಾ ಚುನಾವಣಾ ನೀತಿ ಸಂಹಿತೆ ಜಾರಿಗೊಂಡ ನಂತರ ನಾವು ಯಾವುದೇ ಅಭಿವೃದ್ಧಿ ಮತ್ತು ಪರಿಹಾರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿಲ್ಲ. ಜಿಲ್ಲಾಡಳಿತಗಳು ಚುನಾವಣಾ ಪ್ರಕ್ರಿಯೆಯಲ್ಲಿ ಮಗ್ನವಾಗಿದ್ದವು, ಇಂತಹ ಸಂದರ್ಭದಲ್ಲಿ ಕೆಲವೆಡೆ ಸಮಸ್ಯೆಗಳು ಎದುರಾಗಿವೆ. ಆದರೆ, ನಾವು ಮಧ್ಯ ಪ್ರವೇಶ ಮಾಡುವಂತಿಲ್ಲ. ಬರ ಪರಿಹಾರ ನಿರ್ವಹಣೆಗೆ ಹಣದ ಕೊರತೆ ಇಲ್ಲ. ಈಗಾಗಲೇ ಜಿಲ್ಲಾಡಳಿತದ ಬಳಿಯೂ ಸಾಕಷ್ಟು ಹಣವಿದೆ. ಪರಿಹಾರ ಕಾಮಗಾರಿಗಳನ್ನಷ್ಟೇ ಕೈಗೊಳ್ಳಬೇಕು.

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆ ಪ್ರಕಾರ, ಪ್ರಸಕ್ತ ವರ್ಷವೂ ಮುಂಗಾರು ವಿಳಂಬವಾಗುವ ವರದಿ ಇದೆ. ಈಗಾಗಲೇ ರಾಜ್ಯದ ಎಲ್ಲಾ ತಾಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣವಾಗಿದೆ. ಮುಂದಿನ ಎರಡು ತಿಂಗಳವರೆಗೆ ಜನರು ಹಾಗೂ ಜಾನುವಾರುಗಳಿಗೆ ಶುದ್ಧ ಹಾಗೂ ಸಮರ್ಪಕ ಕುಡಿಯುವ ನೀರಿನ ನಿರ್ವಹಣೆ ಅತ್ಯವಶ್ಯವಾಗಿದೆ. ಈ ಹಿನ್ನೆಲೆಯಲ್ಲಿ ಬರ ಹಾಗೂ ಕುಡಿಯುವ ನೀರು ನಿರ್ವಹಣೆ ಕುರಿತು ಸಭೆ ನಡೆಸಲು ಇಲಾಖಾ ಸಚಿವರಿಗೆ ಅನುಮತಿ ನೀಡಬೇಕು. ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳನ್ನು ಜಾರಿಗೊಳಿಸಲು ಅನುಮತಿ ನೀಡಬೇಕೆಂದು ಸರ್ಕಾರ ಮನವಿ ಮಾಡಿದೆ.



ಪ್ರವಾದಲ್ಲಿರುವ ಕಾಂಗ್ರೆಸ್ ಕಾನೂನು ಘಟಕದ ಪದಾಧಿಕಾರಿಗಳು ಬಸವ ಜಯಂತಿ ಪ್ರಯುಕ್ತ ಶಿವಮೊಗ್ಗದ ಬಸವೇಶ್ವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ನಮನ ಸಲ್ಲಿಸಿದರು. ಘಟಕದ ಮೈಸೂರು ಜಿಲ್ಲಾಧ್ಯಕ್ಷ ತಿಮ್ಮಯ್ಯ, ರಾಜ್ಯ ಉಪಾಧ್ಯಕ್ಷ ಪಾಳ್ಯ ಸುರೇಶ್, ಪ್ರಧಾನ ಕಾರ್ಯದರ್ಶಿ ಎ.ಆರ್.ಕಾಂತರಾಜು, ಕಾರ್ಯದರ್ಶಿ ಕೆ.ಗಂಗಾಧರ್, ಜಿಲ್ಲಾ ಪದಾಧಿಕಾರಿಗಳಾದ ನಾಗೇಶ್, ಮನೋನ್ಮಣಿ, ಮೈತ್ರಿ, ಗೀತಾ ಮತ್ತಿತರರು ಚಿತ್ರದಲ್ಲಿದ್ದಾರೆ.

ಮೂರನೇ ಪುಟದಿಂದ

ಮತ್ತೊಂದು ಎಫ್ಐಆರ್

ಸಾಬೀತಾದರೆ ಕನಿಷ್ಠ 10 ವರ್ಷಗಳಿಂದ ಗರಿಷ್ಠ ಜೀವಾವಧಿ ಶಿಕ್ಷೆ), 376(2) (ಕೆ)– ಲೈಂಗಿಕ ಕ್ರಿಯೆಗೆ ಒಪ್ಪಿಗೆ ನೀಡಲು ಸಾಧ್ಯವಾಗದ ಮಹಿಳೆ ಮೇಲೆ ಅತ್ಯಾಚಾರ (ಕನಿಷ್ಠ 10 ವರ್ಷಗಳಿಂದ ಗರಿಷ್ಠ ಜೀವಾವಧಿ ಶಿಕ್ಷೆ), 354(ಎ) ಲೈಂಗಿಕ ದೌರ್ಜನ್ಯ(ಮೂರು ವರ್ಷದವರೆಗೆ ಶಿಕ್ಷೆ), 354(ಬಿ) ಮಹಿಳೆಯನ್ನು ವಿವಸ್ತ್ರಗೊಳಿಸಿ ಬಲಪ್ರಯೋಗ (3ರಿಂದ 7 ವರ್ಷ ಶಿಕ್ಷೆ), 354(ಸಿ) ಮಹಿಳೆಯ ಲೈಂಗಿಕ ಕ್ರಿಯೆಯನ್ನು ಚಿತ್ರೀಕರಿಸುವುದು, ವೀಕ್ಷಿಸುವುದು (3ರಿಂದ 7 ವರ್ಷ ಶಿಕ್ಷೆ), 506–ಬೆದರಿಕೆ ಹಾಕುವುದು. (7 ವರ್ಷದವರೆಗೆ ಶಿಕ್ಷೆ).

ಪ್ರಜ್ವಲ್ ರೇವಣ್ಣ ವಿರುದ್ಧ ಒಂದಕ್ಕಿಂತ ಒಂದು ಕಠಿಣ ಸೆಕ್ಷನ್‌ಗಳಡಿ ಪ್ರಕರಣ ದಾಖಲಾಗಿದ್ದು, ಯಾವುದೇ ಪ್ರಕರಣದಲ್ಲಿ 7 ವರ್ಷಕ್ಕಿಂತ ಹೆಚ್ಚು ಶಿಕ್ಷೆ ನೀಡುವಂತಹ ಅಪರಾಧಗಳ ಆರೋಪಕ್ಕೆ ಒಳಗಾಗಿರುವವರಿಗೆ ಸೆಷನ್ ನ್ಯಾಯಾಲಯದಲ್ಲಿ ಜಾಮೀನು ದೊರೆಯುವುದು ಕಷ್ಟಸಾಧ್ಯ. ಹೈಕೋರ್ಟ್‌ನಲ್ಲೂ ಕೂಡ ಜಾಮೀನು ದೊರೆತೇ ಬಿಡುತ್ತದೆ ಎಂದು ಖಚಿತವಾಗಿ ಹೇಳಲಾಗದು. ಒಂದು ವೇಳೆ ಸುಪ್ರೀಂಕೋರ್ಟ್‌ನಲ್ಲಿ ಜಾಮೀನು ದೊರೆಯಬಹುದು. ಆದರೆ, ಜಾಮೀನು ಅರ್ಜಿ ಮೇಲೆ ವಾದ ಮಂಡಿಸುವ ವಕೀಲರು 'ನಮ್ಮ ಕಕ್ಷಿದಾರರು (ಆರೋಪಿ) ತನಿಖೆಗೆ ಸಹಕರಿಸುತ್ತಾರೆ, ಸಾಕ್ಷ್ಯಗಳನ್ನು ನಾಶಪಡಿಸುವುದಿಲ್ಲ, ತಲೆಮರೆಸಿಕೊಳ್ಳುವುದಿಲ್ಲ' ಎಂಬುದಾಗಿ ನ್ಯಾಯಾಲಯಕ್ಕೆ ವಿಶ್ವಾಸ ಮೂಡಿಸಬೇಕಾಗುತ್ತದೆ. ಆದರೆ, ಪ್ರಜ್ವಲ್ ರೇವಣ್ಣ ತಮ್ಮ ಮೇಲೆ ಪ್ರಕರಣ ದಾಖಲಾಗುತ್ತಿದ್ದಂತೆಯೇ ವಿದೇಶಕ್ಕೆ ಪರಾರಿಯಾಗಿದ್ದು, ಎಸ್ಐಟಿಯ ಯಾವ ನೋಟಿಸ್‌ಗೂ ಸ್ಪಂದಿಸಿಲ್ಲ. ಈ ಕಾರಣವನ್ನು ಮುಂದಿಟ್ಟು ಬಲವಾದ ಆಕ್ಷೇಪಣೆಯನ್ನು ಸರ್ಕಾರಿ ವಕೀಲರು ವ್ಯಕ್ತಪಡಿಸಿದರೆ, ಸುಪ್ರೀಂಕೋರ್ಟ್‌ನಲ್ಲೂ ಅವರಿಗೆ ಜಾಮೀನು ದೊರೆಯುವುದು ಕಷ್ಟಸಾಧ್ಯವಾಗಿದ್ದು, ವಿಚಾರಣೆ ಮುಗಿಯುವವರೆಗೂ ಜೈಲಿನಲ್ಲೇ ಇರಬೇಕಾಗುತ್ತದೆ.

ತಾಯಿಗೂ ಸಂಕಷ್ಟ: ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ಅವರ ತಾಯಿ ಭವಾನಿ ಅವರಿಗೂ ಸಂಕಷ್ಟ ಎದುರಾಗಿದೆ. ಕೆ.ಆರ್. ನಗರ ಠಾಣೆಯಲ್ಲಿ ಹೆಚ್.ಡಿ. ರೇವಣ್ಣ ವಿರುದ್ಧ ದಾಖಲಾಗಿರುವ ಸಂತ್ರಸ್ತೆ ಅಪಹರಣ ಪ್ರಕರಣದ ಎಫ್ಐಆರ್‌ನಲ್ಲಿ ಭವಾನಿಯವರ ಹೆಸರೂ ಕೂಡ ಇರುವುದರಿಂದ ಅವರಿಗೆ ಈಗಾಗಲೇ ಎಸ್ಐಟಿ 2 ನೋಟಿಸ್‌ಗಳನ್ನು ನೀಡಿದ್ದು, ಅವರನ್ನೂ ವಿಚಾರಣೆಗೊಳಪಡಿಸಲಿದೆ.

ಗ್ರೂಪ್ ಅಡ್ಮಿನ್ ಬಂಧನ: ಸಂಸದ ಪ್ರಜ್ವಲ್ ರೇವಣ್ಣ ಅವರ ಪೆನ್‌ಡ್ರೈವ್ ಪುರಾಣ ಹಬ್ಬಿರುವಾಗಲೇ ಮತ್ತೋರ್ವ ಯುವಕ ಸಾಮಾಜಿಕ ಜಾಲತಾಣದಲ್ಲಿ ಅಶ್ಲೀಲ ಫೋಟೋ ಶೇರ್ ಮಾಡಿದ ಪ್ರಕರಣ ಸಂಬಂಧ ಚಿಕ್ಕಮಗಳೂರು ಜಿಲ್ಲೆ ಕಳಸ ತಾಲೂಕಿನ ಕುದುರೆಮುಖ ಪೊಲೀಸ್ ಠಾಣೆ ಪೊಲೀಸರಿಂದ ಬಂಧಿಸಲ್ಪಟ್ಟಿದ್ದಾನೆ.

ಕಳಸ ತಾಲೂಕು ಸಂಸೆ ಸಮೀಪದ ಬಸ್ರಿಕಲ್ ಗ್ರಾಮದ ಪ್ರಜ್ವಲ್ ಎಂಬ ಯುವಕ ಸಾಮಾಜಿಕ ಜಾಲತಾಣವಾದ ಫೇಸ್‌ಬುಕ್, ಟ್ವಿಟ್ಟರ್, ಯೂಟ್ಯೂಬ್, ಇನ್‌ಸ್ಟಾಗ್ರಾಂನಲ್ಲಿ ಯುವತಿಯರ ಅಶ್ಲೀಲ ಫೋಟೋ ಹಾಗೂ ವೀಡಿಯೋಗಳನ್ನು ಶೇರ್ ಮಾಡಿದ್ದ. ಈತ ಇತ್ತೀಚೆಗೆ ರಾಜ್ಯ–ದೇಶದಾದ್ಯಂತ ಸಂಚಲನ ಸೃಷ್ಟಿಸಿರುವ ಸಂಸದ ಪ್ರಜ್ವಲ್ ರೇವಣ್ಣ ಅವರ ಪೆನ್‌ಡ್ರೈವ್ ಕಥೆಯಲ್ಲಿನ ಕೆಲ ಫೋಟೋಗಳನ್ನು ಬಳಸಿಕೊಂಡಿದ್ದಾನೆ ಎಂದು ಮೂಲಗಳು ತಿಳಿಸಿವೆ.

ದೇವರಾಜೇಗೌಡ ಪೊಲೀಸ್ ವಶಕ್ಕೆ

ಹೈಗ್ರೌಂಡ್ ಠಾಣೆಯಲ್ಲಿ ತಮ್ಮ ವಿರುದ್ಧ ಪ್ರಕರಣ ದಾಖಲಾಗುತ್ತಿದ್ದಂತೆಯೇ ನಾಪತ್ತೆಯಾಗಿದ್ದರು. ಅದೇ ವೇಳೆ ಅವರು, ತಾವು ನಾಪತ್ತೆಯಾಗಿಲ್ಲ, ದೇವಸ್ಥಾನಕ್ಕೆ ಬಂದಿದ್ದೇನೆ ಎಂದು ವಿಡಿಯೋ ಸಂದೇಶ ರವಾನಿಸಿದ್ದರು.

ಹೊಳೆನರಸೀಪುರ ಕೇಸ್: ತಮ್ಮ ಆಸ್ತಿ ಮಾರಾಟಕ್ಕೆ ಸಹಾಯ ಮಾಡುವ ನೆಪದಲ್ಲಿ ವಕೀಲ ದೇವರಾಜೇಗೌಡ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ ಎಂದು 36 ವರ್ಷದ ಮಹಿಳೆಯೊಬ್ಬರು ಕಳೆದ ಏಪ್ರಿಲ್ 1ರಂದು ಹೊಳೆನರಸೀಪುರ ಠಾಣೆಯಲ್ಲಿ ದೂರು ದಾಖಲಿಸಿದ್ದರು. ತನ್ನನ್ನು ಹೆದರಿಸಿ, ಬೆದರಿಸಿ ಲೈಂಗಿಕ ದೌರ್ಜನ್ಯ ನಡೆಸಲಾಗಿದೆ. ವಿಡಿಯೋ ಕಾಲ್ ಮಾಡಿ ಖಾಸಗಿ ಅಂಗಾಂಗಗಳನ್ನು ತೋರಿಸುವಂತೆ ಪ್ರಚೋದಿಸುವ ಮೂಲಕ ಮಾನಸಿಕ ಹಿಂಸೆ ನೀಡಲಾಗುತ್ತಿದೆ ಎಂದು ದೂರು ದಾಖಲಿಸಿದ್ದರು ಎನ್ನಲಾಗಿದೆ.

ಪೆನ್‌ಡ್ರೈವ್ ಕೇಸ್: ಪ್ರಜ್ವಲ್ ರೇವಣ್ಣ ಅವರ ಪೆನ್‌ಡ್ರೈವ್ ಅನ್ನು ತಾನು ದೇವರಾಜೇಗೌಡರಿಗೆ ನೀಡಿದ್ದಾಗಿ ಪ್ರಜ್ವಲ್‌ನ ಹಿಂದಿನ ಕಾರು ಚಾಲಕ ಕಾರ್ತಿಕ್ ಹೇಳಿದ್ದಾನೆ. ಈ ಹಿನ್ನೆಲೆಯಲ್ಲಿ ಪೆನ್‌ಡ್ರೈವ್ ಹಂಚಿಕೆ ಆರೋಪಕ್ಕೆ ದೇವರಾಜೇಗೌಡ ಒಳಗಾಗಿದ್ದರು. ಈ ಹಿನ್ನೆಲೆಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಪೆನ್‌ಡ್ರೈವ್ ಅನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಂಚಿಕೆ ಮಾಡಿಸಿದ್ದಾರೆ. ಮಾಜಿ ಸಂಸದ ಎಲ್.ಆರ್. ಶಿವರಾಮೇಗೌಡ ಮೂಲಕ ಈ ಸಂಬಂಧ ಡಿಕೆಶಿ ನನ್ನೊಂದಿಗೆ ಮಾತನಾಡಿದ್ದರು. ತಾನು ಎಲ್ಲಾ ವಿಚಾರಗಳನ್ನೂ ಎಸ್ಐಟಿಗೆ ಆಧಾರ ಸಮೇತ ತಿಳಿಸಿದಾಗ ಎಸ್ಐಟಿಯ ಮಹಿಳಾ ಎಸ್ಪಿ, ತಮ್ಮ ಹೇಳಿಕೆಯಲ್ಲಿ ಡಿಕೆಶಿಯವರ ಹೆಸರನ್ನು ತೆಗೆಯುವಂತೆ ಒತ್ತಡ ಹೇರಿದ್ದರು ಎಂದು ಎಸ್ಐಟಿ ವಿರುದ್ಧ ಆರೋಪಿಸಿದ್ದರು. ಇದೀಗ ದೇವರಾಜೇಗೌಡರನ್ನು ಹೊಳೆನರಸೀಪುರದಲ್ಲಿ ದಾಖಲಾಗಿರುವ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಪೊಲೀಸರು ವಶಕ್ಕೆ ಪಡೆದಿದ್ದಾರೆಯೇ? ಅಥವಾ ಪೆನ್‌ಡ್ರೈವ್ ಹಂಚಿಕೆ ಪ್ರರಣದಲ್ಲಿ ವಶಕ್ಕೆ ಪಡೆದಿದ್ದಾರೆಯೇ ಎಂಬುದು ಇನ್ನು ಖಚಿತವಾಗಿಲ್ಲ.

ಬಾಲಕಿಯ ಬರ್ಬರ ಹತ್ಯೆ!!

ಆಕೆಗೆ ಮದುವೆ ಮಾಡುವುದು ಕಾನೂನು ಬಾಹಿರವಾಗುತ್ತದೆ. ಆದ್ದರಿಂದ ಆಕೆಗೆ 18 ವರ್ಷ ತುಂಬಿದ ನಂತರ ಮದುವೆ ಮಾಡಬೇಕು ಎಂದು ಮೀನಾ ಮತ್ತು ಪ್ರಕಾಶ್ ಮನೆಯವರಿಗೆ ತಿಳುವಳಿಕೆ ನೀಡಿದ್ದಾರೆ. ಅಧಿಕಾರಿಗಳು ಹೇಳಿದಂತೆ ಮೀನಾಗೆ 18 ವರ್ಷ ತುಂಬಿದ ನಂತರವೇ ಮದುವೆ ಮಾಡಲು ಎರಡೂ ಮನೆಯವರು ಒಪ್ಪಿಗೆ ನೀಡಿ ಮುಚ್ಚಳಿಕೆ ಬರೆದುಕೊಟ್ಟಿದ್ದರು.

ತಲೆ ಕತ್ತರಿಸಿ ಕೊಲೆ: ಸಂಜೆ 5 ಗಂಟೆ ಸುಮಾರಿಗೆ ಮೀನಾ ಮನೆಗೆ ಆಗಮಿಸಿದ ಮೊಣ್ಣಂಡ ಪ್ರಕಾಶ್, ತನ್ನ ವಿವಾಹ ಮುಂದೂಡಿರುವುದಕ್ಕೆ ಆಕ್ರೋಶಗೊಂಡು ಮೀನಾಳ ಪೋಷಕರೊಂದಿಗೆ ಗಲಾಟೆ ಮಾಡಿದ್ದಲ್ಲದೇ, ಆಕೆಯ ತಂದೆ–ತಾಯಿ ಮೇಲೆ ಮಾರಕಾಸ್ತ್ರದಿಂದ ಹಲ್ಲೆ ನಡೆಸಿ, ಆಕೆಯನ್ನು ಮನೆಯಿಂದ ಎಳೆದೊಯ್ದು ಸುಮಾರು 150 ಮೀಟರ್ ಅಂತರದಲ್ಲಿ ಮರ ಕಡಿಯುವ ಕತ್ತಿಯಿಂದ ಮೀನಾಳ ತಲೆಯನ್ನು ಕತ್ತರಿಸಿ ರುಂಡದೊಂದಿಗೆ ಪರಾರಿಯಾಗಿದ್ದ. ನೆರೆಹೊರೆಯವರು ಮೀನಾಳ ತಂದೆ ಸುಬ್ರಮಣಿ ಮತ್ತು ತಾಯಿ ಜಾನಕಿ ಅವರನ್ನು ಮಡಿಕೇರಿ ಜಿಲ್ಲಾಸ್ಪತ್ರೆಗೆ ರವಾನಿಸಿದ್ದರು. ಕೊಡಗು ಎಸ್ಪಿ ಕೆ.ರಾಮರಾಜನ್, ಹೆಚ್ಚುವರಿ ಎಸ್ಪಿ ಸುಂದರರಾಜ್, ಸೋಮವಾರಪೇಟೆ ಠಾಣೆ ಪೊಲೀಸರು, ಶ್ವಾನದಳ ಹಾಗೂ ಬೆರಳಚ್ಚು ವಿಭಾಗದ ಸಿಬ್ಬಂದಿ ಸೂರ್ಲಬ್ಬಿಗೆ ತೆರಳಿ ಪರಿಶೀಲನೆ ನಡೆಸಿದರು. ಪ್ರಕಾಶ್ ಮತ್ತೆ ಬಂದು ಮೀನಾ ಕುಟುಂಬದವರ ಮೇಲೆ ಹಲ್ಲೆ ನಡೆಸಬಹುದು ಎಂಬ ಕಾರಣದಿಂದಾಗಿ ಜಿಲ್ಲಾ ಎಸ್ಪಿಯವರು ಮೀನಾಳ ಮನೆ ಬಳಿ 8 ಮಂದಿ ಶಸ್ತ್ರ ಸಜ್ಜಿತ ಪೊಲೀಸರನ್ನು ನಿಯೋಜಿಸಿದ್ದರು. ಮಡಿಕೇರಿ ಜಿಲ್ಲಾಸ್ಪತ್ರೆಗೆ ಜಿಲ್ಲಾ ಪಂಚಾಯಿತಿ ಸಿಇಓ ವರ್ಣಿತ್ ನೇಗಿ ಅವರೊಂದಿಗೆ ಭೇಟಿ ನೀಡಿದ್ದರು. ಜಿಪಂ ಸಿಇಓ ಅವರು ತೀವ್ರವಾಗಿ ಗಾಯಗೊಂಡಿರುವ ಮೀನಾ ತಾಯಿ ಜಾನಕಿ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆಆರ್ ಆಸ್ಪತ್ರೆಗೆ ರವಾನಿಸಲು ವ್ಯವಸ್ಥೆ ಮಾಡಿದರು. ಮತ್ತೊಂದೆಡೆ ಪೊಲೀಸರ ವಿಶೇಷ ತಂಡ ಹಂತಕ ಮೊಣ್ಣಂಡ ಪ್ರಕಾಶ್‌ಗಾಗಿ ಹುಡುಕಾಟ ನಡೆಸಿದೆ.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಜಿಲ್ಲಾ ಎಸ್ಪಿ ಕೆ. ರಾಮರಾಜನ್, ಯಾವ ಕಾರಣಕ್ಕಾಗಿ ಮೀನಾಳನ್ನು ಪ್ರಕಾಶ್ ಕೊಲೆ ಮಾಡಿದ ಎಂಬುದರ ಬಗ್ಗೆ ಆಕೆಯ ಕುಟುಂಬಸ್ಥರಿಗೆ ತಿಳಿದಿಲ್ಲ. ಆರೋಪಿಗೆ ಯಾವುದೇ ಕ್ರಿಮಿನಲ್ ಹಿನ್ನೆಲೆ ಇಲ್ಲ. ಆತನೊಂದಿಗೆ ಮತ್ತೋರ್ವನಿದ್ದ ಹಾಗೂ 4 ಚಕ್ರದ ವಾಹನವಿತ್ತು ಎಂದು ಸ್ಥಳೀಯರು ತಿಳಿಸಿದ್ದು, ಪ್ರಕಾಶ್, ಜೊತೆಗಿದ್ದ ವ್ಯಕ್ತಿ ಹಾಗೂ ವಾಹನ ಪತ್ತೆಗಾಗಿ ಕ್ರಮ ವಹಿಸಲಾಗಿದೆ ಎಂದರು. ಮೀನಾಳ ರುಂಡವನ್ನು ಪತ್ತೆ ಹಚ್ಚಲು ಕಾರ್ಯಾಚರಣೆ ನಡೆಸಲಾಗುತ್ತಿದೆ. ಆತನಿಂದ ಮೀನಾ ಕುಟುಂಬಸ್ಥರಿಗೆ ಅಪಾಯವಾಗದಂತೆ ಅವರ ಮನೆಗೆ 8 ಮಂದಿ ಶಸ್ತ್ರ ಸಜ್ಜಿತ ಪೊಲೀಸರ ಭದ್ರತೆ ಒದಗಿಸಲಾಗಿದೆ. ಬಾಲಕಿಯ ತಂದೆ ಚಿಕಿತ್ಸೆ ಪಡೆಯುತ್ತಿರುವ ಆಸ್ಪತ್ರೆಯಲ್ಲೂ ಪೊಲೀಸ್ ಭದ್ರತೆ ಏರ್ಪಡಿಸಲಾಗಿದೆ ಎಂದರು.

ಜಿಪಂ ಸಿಇಓ ವರ್ಣಿತ್ ನೇಗಿ ಸುದ್ದಿಗಾರರೊಂದಿಗೆ ಮಾತನಾಡಿ, ಸೂರ್ಲಬ್ಬಿ ಗ್ರಾಮದಲ್ಲಿ ಕಳೆದ ವಿದ್ಯಾರ್ಥಿನಿಯ ಹತ್ಯೆಗೂ ಮುನ್ನ ಆಕೆಯ ಮದುವೆಗೆ ನಿಶ್ಚಿತಾರ್ಥವಾಗುತ್ತಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ದೂರು ಬಂದ ಹಿನ್ನೆಲೆಯಲ್ಲಿ ಅಧಿಕಾರಿಗಳು ಗ್ರಾಮಕ್ಕೆ ತೆರಳಿ, ಮೀನಾಗೆ 18 ವರ್ಷ ತುಂಬಿದ ಬಳಿಕವೇ ಮದುವೆ ಕಾರ್ಯ ನಡೆಸುವಂತೆ ತಿಳಿ ಹೇಳಿ ಮುಚ್ಚಳಿಕೆ ಬರೆಸಿಕೊಂಡಿದ್ದಾರೆ. ಈ ಸಂಬಂಧ ಪ್ರಾಥಮಿಕ ಮಾಹಿತಿ ಪಡೆಯಲಾಗಿದೆ. ಪ್ರಕರಣದ ಸಂಪೂರ್ಣ ವರದಿ ನೀಡುವಂತೆ ಸಮಾಜ ಕಲ್ಯಾಣ ಇಲಾಖೆಗೆ ಸೂಚನೆ ನೀಡಲಾಗುತ್ತದೆ ಎಂದರು.

ಅಕ್ಷಯ ತೃತೀಯ ಸಂಭ್ರಮ

ಆಭರಣದ ಅಂಗಡಿಗಳಲ್ಲಿ ಬಂಗಾರ ಖರೀದಿಸಲು ಮುಗಿಬಿದ್ದ ಗ್ರಾಹಕರು

ಮೈಸೂರು, ಮೇ 10(ಆರ್‌ಕೆ)– ಅಕ್ಷಯ ತೃತೀಯ ದಿನವಾದ ಶುಕ್ರವಾರ ಚಿನ್ನಾಭರಣ ಖರೀದಿಸಲು ಗ್ರಾಹಕರು ಮೈಸೂರಿನ ಚಿನ್ನಾಭರಣದ ಅಂಗಡಿಗಳಿಗೆ ಮುಗಿ ಬಿದ್ದರು.

ಈ ದಿನ ಚಿನ್ನ ಖರೀದಿಸಿ ಮನೆಗೆ ತಂದರೆ ಸಂಪತ್ತು ವೃದ್ಧಿಸುತ್ತದೆ ಎಂಬ ನಂಬಿಕೆಯಿಂದ ಈ ಪ್ರಶಸ್ತ ದಿನ ಮೈಸೂರಿನ ಬಿ.ಎನ್. ರಸ್ತೆ, ಅಶೋಕ ರಸ್ತೆ, ಡಿ. ದೇವರಾಜ ಅರಸು ರಸ್ತೆ ಸೇರಿದಂತೆ ಎಲ್ಲೆಡೆ ಆಭರಣ ಅಂಗಡಿಗಳಲ್ಲಿ ಗ್ರಾಹಕರು ಮುಗಿಬಿದ್ದು ಚಿನ್ನ, ಬೆಳ್ಳಿ ಹಾಗೂ ವಜ್ರದ ಆಭರಣಗಳನ್ನು ಖರೀದಿಸಿದರು.

ಕಳೆದ 3 ತಿಂಗಳಿಂದೀಚೆಗೆ ಬಂಗಾರದ ದರ ತೀವ್ರವಾಗಿ ಏರಿದ್ದರೂ ಲೆಕ್ಕಿಸದೆ ಗ್ರಾಹಕರು ಅದರಲ್ಲೂ ಮಹಿಳೆಯರು ನಾ ಮುಂದು, ತಾ ಮುಂದು ಎಂಬಂತೆ ಮುಗಿ ಬಿದ್ದು ಚಿನ್ನಾಭರಣ ಖರೀದಿಸುತ್ತಿದ್ದರಿಂದ ಇಂದು ಬೆಳಗ್ಗೆ 7 ಗಂಟೆಯಿಂದ ರಾತ್ರಿ 9.30 ಗಂಟೆವರೆಗೂ ಜುವೆಲರಿ ಅಂಗಡಿಗಳಲ್ಲಿ ನೂಕು ನುಗ್ಗಲು ಉಂಟಾಗಿತ್ತು.

ನಗರದ ಹೃದಯ ಭಾಗದಲ್ಲಷ್ಟೇ ಅಲ್ಲದೆ, ಅಗ್ರಹಾರ, ಸಿದ್ಧಾರ್ಥ ಬಡಾವಣೆ, ಎನ್‌ಆರ್ ಮೊಹಲ್ಲಾ, ವಿವಿ ಮೊಹಲ್ಲಾದ ಟೆಂಪಲ್ ರಸ್ತೆ, ಕಾಳಿದಾಸ ರಸ್ತೆ, ಹೆಬ್ಬಾಳಿನ ಸೂರ್ಯ ಬೇಕರಿ ಸರ್ಕಲ್ ಬಳಿ, ಸರಸ್ವತಿಪುರಂ, ಕುವೆಂಪುನಗರ, ಶಾರದಾ ದೇವಿನಗರ, ವಿವೇಕಾನಂದ ಸರ್ಕಲ್, ಟಿಕೆ ಲೇಔಟ್, ಮೇಟಗಳ್ಳಿ, ಹೆಬ್ಬಾಳು ಮುಖ್ಯ ರಸ್ತೆ, ಜೆ.ಪಿ.ನಗರ, ದಟ್ಟಗಳ್ಳಿ ಬಡಾವಣೆಗಳ ಜುವೆಲರಿ ಅಂಗಡಿಗಳಲ್ಲೂ ಅಸಂಖ್ಯಾತ ಸಂಖ್ಯೆಯಲ್ಲಿ ಗ್ರಾಹಕರು ಜಮಾಯಿಸಿದ್ದುದು ಕಂಡುಬಂದಿತು.

ಆಭರಣ ವ್ಯಾಪಾರಿಗಳು ವಿಶೇಷ ಆಫರ್‌ಗಳು, ರಿಯಾಯಿತಿಗಳನ್ನು ಪ್ರಕಟಿಸಿದ್ದರಿಂದ ಜನರು ಆಕರ್ಷಿತರಾಗಿ ಕುಟುಂಬ ಸಮೇತ ಅಂಗಡಿಗಳಿಗೆ ತೆರಳಿ ತಮಗಿಷ್ಟವಾದ ಸರ, ನೆಕ್ಲೆಸ್, ಓಲೆ, ಮೂಗುತಿ, ಉಂಗುರ, ಬಳೆ, ಬ್ರೇಸ್‌ಲೆಟ್, ಪೆಂಡೆಂಟ್‌ಗಳಂತಹ ಆಭರಣಗಳನ್ನು ಖರೀದಿಸಿ ಮನೆಗೆ ಕೊಂಡೊಯ್ದು ದೇವರ ಮನೆಯಲ್ಲಿರಿಸಿ ಪೂಜೆ ಸಲ್ಲಿಸಿ ನಂತರ ಧರಿಸಿಕೊಂಡು ಸಂಭ್ರಮಿಸಿದರು.

ಅಕ್ಷಯ ತೃತೀಯ ಹಬ್ಬದ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಜುವೆಲರಿ ಅಂಗಡಿಗಳಲ್ಲಿ ಭದ್ರತಾ ಸಿಬ್ಬಂದಿ, ಸಿಸಿ ಕ್ಯಾಮರಾ ಕಣ್ಗಾವಲಿನಂತಹ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗಿತ್ತಲ್ಲದೇ, ಆಯಾ ಠಾಣಾ ಪೊಲೀಸರು ಗಸ್ತು ತಿರುಗಿ ಯಾವುದೇ ಅಹಿತಕರ ಘಟನೆಗಳಾಗದಂತೆ ಎಚ್ಚರ ವಹಿಸಿದ್ದರು.

ಕರ್ನಾಟಕ ಸ್ಟೇಟ್ ಜುವೆಲರ್ಸ್ ಫೆಡರೇಷನ್ ಪ್ರಕಾರ ಇಂದು (ಮೇ 10) ಚಿನ್ನದ ದರ ಜಿಎಸ್‌ಟಿ ಹೊರತುಪಡಿಸಿ 22 ಕ್ಯಾರಟ್ 1 ಗ್ರಾಂಗೆ 6,700 ಮತ್ತು 24 ಕ್ಯಾರಟ್ ಗ್ರಾಂಗೆ 7,263 ನಿಗದಿಯಾಗಿತ್ತು.



ಜೋಸ್ ಅಲುಕ್ಕಾಸ್(ಬಿ.ಎನ್.ರಸ್ತೆ)



ಭೀಮಾ ಜುವೆಲರ್ಸ್ (ಬಿ.ಎನ್.ರಸ್ತೆ)



ತೊಳಸಿ ಜುವೆಲ್ಸ್ (ಅಶೋಕ ರಸ್ತೆ)



ಭೀಮಾ ಅಂಡ್ ಬ್ರದರ್ಸ್ (ದೇವರಾಜ ಅರಸ್ ರಸ್ತೆ)



ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ (ಬಿ.ಎನ್.ರಸ್ತೆ)



ಶ್ರೀ ಕುಮರನ್ ಜುವೆಲರ್ಸ್ (ಬಿ.ಎನ್.ರಸ್ತೆ)



ಜೋಯಾಲುಕ್ಕಾಸ್ (ಬಿ.ಎನ್.ರಸ್ತೆ)



ತನಿಷ್ಕ (ಮಿಯಾ, ದೇವರಾಜ್ ಅರಸ್ ರಸ್ತೆ)



ಕಲ್ಯಾಣ್ ಜುವೆಲರ್ಸ್ (ಬಿ.ಎನ್.ರಸ್ತೆ)



ತನಿಷ್ಕ (ಕಾರ್ಟ್‌ಲೇನ್) (ದೇವರಾಜ್ ಅರಸ್ ರಸ್ತೆ)



ಮೈಸೂರು ವಕೀಲರ ಸಂಘದ ವತಿಯಿಂದ ಬಸವ ಜಯಂತಿ ಆಚರಿಸಲಾಯಿತು. ಸಂಘದ ಅಧ್ಯಕ್ಷ ಎಸ್.ಲೋಕೇಶ್, ಕಾರ್ಯದರ್ಶಿ ಸುಧೀರ್, ಉಪಾಧ್ಯಕ್ಷ ಚಂದ್ರಶೇಖರ್ ಹಾಗೂ ಪದಾಧಿಕಾರಿಗಳು ಭಾಗವಹಿಸಿದ್ದರು.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಆಚರಿಸಲಾದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಚಾಮುಂಡೇಶ್ವರಿ ಮಂಡಲದ ಅಧ್ಯಕ್ಷ ಪೈಟಿ.ರವಿ ಲಕ್ಷ್ಮೀಪುರ, ಅಲ್ಪಸಂಖ್ಯಾತ ಮೋರ್ಚಾ ರಾಜ್ಯಾಧ್ಯಕ್ಷ ಡಾ.ಅನಿಲ್ ಥಾಮಸ್, ನಿಕಟಪೂರ್ವ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್, ಜಿಲ್ಲಾ ಕಾರ್ಯದರ್ಶಿ ಎಂ.ಪಿ.ಮಂಜುನಾಥ್, ಮಾಜಿ ಜಿಲ್ಲಾಧ್ಯಕ್ಷರಾದ ಎಸ್.ಡಿ.ಮಹೇಂದ್ರ, ಮಂಡಲ ಪ್ರಧಾನ ಕಾರ್ಯದರ್ಶಿ ಶಿವಕುಮಾರ್, ನಗರ ಮಂಡಲ ಪ್ರಧಾನ ಕಾರ್ಯದರ್ಶಿ ಸೋಮಶೇಖರ್, ಮಾಜಿ ಅಧ್ಯಕ್ಷರಾದ ರಾಜ್ ಕುಮಾರ್, ಪರಶುರಾಮಪ್ಪ, ಕೂರ್ಗಳ್ಳಿ ರೇವಣ್ಣ, ಭದ್ರೇಗೌಡನ ಕೊಪ್ಪಲು ಗೋಪಾಲ ಗೌಡ, ಕಾರ್ಯಾಲಯ ಕಾರ್ಯದರ್ಶಿ ಹಿನಕಲ್ ಪಾಪಣ್ಣ ಮತ್ತಿತರರು ಭಾಗವಹಿಸಿದ್ದರು.

ಕೆಟ್ಟು ನಿಂತಿದ್ದ ಶವಾಗಾರದ ಕೋಲ್ಡ್ ಸ್ಟೋರೇಜ್‌ಗಳ ದುರಸ್ತಿ



ಮೈಸೂರು, ಮೇ 10(ಆರ್‌ಕೆ)– ಕೆಟ್ಟು ನಿಂತಿದ್ದ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಎಂಎಂಸಿ ಅಂಡ್ ಆರ್‌ಐ) ಶವಾಗಾರದ ಕೋಲ್ಡ್ ಸ್ಟೋರೇಜ್‌ಗಳ ದುರಸ್ತಿ ಕಾರ್ಯ ಆರಂಭವಾಗಿದೆ.

ಈ ಕುರಿತು ಮೇ 9ರಂದು 'ಮೈಸೂರು ಮಿತ್ರ'ನಲ್ಲಿ ವರದಿ ಪ್ರಕಟವಾಗುತ್ತಿದ್ದಂತೆಯೇ ಎಚ್ಚೆತ್ತ ಸಂಸ್ಥೆಯ ಡೀನ್ ಅಂಡ್ ಡೈರೆಕ್ಟರ್ ಡಾ. ಕೆ.ಎಸ್. ದಾಕ್ಷಾಯಿಣಿ, ತಜ್ಞರು ಹಾಗೂ ಮೆಡಿಕಲ್ ಇಂಜಿನಿಯರ್‌ಗಳನ್ನು ಕರೆಸಿ ರಿಪೇರಿಗೆ ನಿಯೋಜಿಸಿದ್ದಾರೆ. ಮೂರರ ಪೈಕಿ ಇಂದು 'ಕೋಲ್ಡ್ ಸ್ಟೋರೇಜ್ ಯಂತ್ರದ ರಿಪೇರಿ ಕಾರ್ಯ ಮುಗಿದಿದ್ದು, ನಾಳೆ (ಮೇ 11)ಯಿಂದ ಅದು ಕಾರ್ಯ ನಿರ್ವಹಿಸಲಿದೆ. ಉಳಿದ 2 ಯಂತ್ರಗಳನ್ನೂ ನಾಳೆ (ಮೇ 11) ರಿಪೇರಿ ಮಾಡಲಿದ್ದು ಅವು ಏಪ್ರಿಲ್ 12ರಿಂದ ಕಾರ್ಯನಿರ್ವಹಿಸಲಿವೆ ಎಂದು ಶವಾಗಾರದ ಮೇಲ್ವಿಚಾರಕರು ತಿಳಿಸಿದ್ದಾರೆ.

2024ರ ಜನವರಿ ಮಾಹೆಯಿಂದ ಕೆಟ್ಟು ನಿಂತಿದ್ದ ಯಂತ್ರಗಳನ್ನು ರಿಪೇರಿ ಮಾಡಿಸುವಂತೆ ಎಷ್ಟೇ ಮನವಿ ಮಾಡಿದರೂ ಪ್ರಯೋಜನವಾಗಿರಲಿಲ್ಲ. ಮೃತದೇಹಗಳು ಕೊಳೆತು ದುರ್ವಾಸನೆ ಬೀರುತ್ತಿದ್ದು, ಮರಣೋತ್ತರ ಪರೀಕ್ಷಾ ಪ್ರಕ್ರಿಯೆಗೆ ತೀವ್ರ ತೊಂದರೆಯಾಗುತ್ತಿತ್ತು. ಮಾಧ್ಯಮಗಳಲ್ಲಿ ಸುದ್ದಿ ಬಿತ್ತರವಾಗುತ್ತಿದ್ದಂತೆಯೇ ಮುಖ್ಯಸ್ಥರು ಕಾರ್ಯಪ್ರವೃತ್ತರಾಗಿ ಕ್ರಮ ಕೈಗೊಂಡಿದ್ದಾರೆ ಎಂದರು.

ಬ್ರಾಹ್ಮಣ ಯುವ ವೇದಿಕೆಯಿಂದ ಪರಶುರಾಮ ಜಯಂತಿ ಆಚರಣೆ



ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ವತಿಯಿಂದ ಚಾಮರಾಜಪುರಂನಲ್ಲಿರುವ ಬ್ರಾಹ್ಮಣ ಯುವ ವೇದಿಕೆ ಕಛೇರಿಯಲ್ಲಿ ಶುಕ್ರವಾರ ಪರಶುರಾಮ ಜಯಂತಿಯನ್ನು ಆಚರಿಸಲಾಯಿತು.

ಮೈಸೂರು, ಮೇ 10(ಜಿಎ)–ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ವತಿಯಿಂದ ಚಾಮರಾಜಪುರಂನಲ್ಲಿರುವ ಬ್ರಾಹ್ಮಣ ಯುವ ವೇದಿಕೆ ಕಛೇರಿಯಲ್ಲಿ ಶುಕ್ರವಾರ ಪರಶುರಾಮ ಜಯಂತಿಯನ್ನು ಆಚರಿಸಲಾಯಿತು.

ಮೈಸೂರು ಬ್ರಾಹ್ಮಣ ಸಂಘದ ಅಧ್ಯಕ್ಷ ಡಿಟಿ. ಪ್ರಕಾಶ್, ಪರಶುರಾಮರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಮಾತನಾಡಿ, ನಮ್ಮ ಹಿಂದೂ ಪಂಚಾಂಗದ ಪ್ರಕಾರವಾಗಿ ವೈಶಾಖ ಮಾಸದ ಶುಕ್ಲ ಪಕ್ಷದ ತೃತೀಯ ದಿನವನ್ನು ಪರಶುರಾಮ ಜಯಂತಿ ಎಂದು ಆಚರಿಸಲಾಗುತ್ತದೆ. ಪರಶುರಾಮರು ಭಗವದ್ ವಿಷ್ಣುವಿನ ಆರನೇ ಅವತಾರ ಎಂಬ ಪ್ರತೀತಿಯಿದೆ. ಉತ್ತರಭಾರತದಲ್ಲಿ ಪರಶುರಾಮರಿಗೆ ಕೋಟ್ಯಾಂತರ ಭಕ್ತ ಸಮೂಹವಿದ್ದು, ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನ ಆಯೋಜಿಸುತ್ತಾರೆ. ಪಿತೃವಾಕ್ಯ ಪರಿಪಾಲಕ ಎಂದು ಪರಶುರಾಮರನ್ನು ಕರೆಯಲ್ಪಡಲಾಗುತ್ತದೆ. ಪರಶುರಾಮರು ವಿಷ್ಣುವಿನ ಆರನೆಯ ಅವತಾರ ಸಪ್ತರ್ಷಿ ಜಮದಗ್ನಿಯ ಪುತ್ರನಾದ ಪರಶುರಾಮರು ತ್ರೇತಾಯುಗದ ಕೊನೆಯಲ್ಲಿ ಅವತಾರ ತಾಳಿದರು ಎಂದು ಪರಶುರಾಮನ ಬಗ್ಗೆ ವಿವರಿಸಿದರು.

ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆಯ ಸಂಘಟನಾ ಕಾರ್ಯದರ್ಶಿ ಅಜಯ್ ಶಾಸ್ತ್ರಿ, ಕಡಕೋಳ ಜಗದೀಶ್, ಹೊಯ್ಸಳ ಕರ್ನಾಟಕ ಸಂಘದ ನಿರ್ದೇಶಕ ವಿಜಯ್ ಕುಮಾರ್, ಪ್ರಶಾಂತ್, ವೆಂಕಟರಾಮ್, ಜೈ ಶ್ರೀ ರಾಮ್ ಯುವ ಬ್ರಿಗೇಡ್ ಅಧ್ಯಕ್ಷ ಮಹೇಶ್ ಕುಮಾರ್, ಸಂದೇಶ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಲಾಲ್ ಬಹದ್ದೂರ್‌ಶಾಸ್ತ್ರಿನಗರ ಹಾಗೂ ಶಾಂತವೇರಿ ಗೋಪಾಲಗೌಡನಗರದ ಡಾ.ಬಿ.ಆರ್.ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಂಘ ವತಿಯಿಂದ ಬಸವ ಜಯಂತಿಯನ್ನು ಆಚರಿಸಲಾಯಿತು. ಅಧ್ಯಕ್ಷ ಬಿ.ಸಿ.ಮಹದೇವಯ್ಯ, ಉಪಾಧ್ಯಕ್ಷ ಎಂ.ಎಸ್.ಗಂಗಾಧರ್, ಕಾರ್ಯದರ್ಶಿ ಡಿ.ಎಂ.ಅಂಬರೀಶ್, ಖಜಾಂಚಿ ಎಂ.ಮಂಜುನಾಥ ಹಾಗೂ ನಿರ್ದೇಶಕರು ಭಾಗವಹಿಸಿದ್ದರು.

ಭೂ ಪರಿವರ್ತಿಸದಂತೆ ಒತ್ತಾಯಿಸಿ ಸಿಎನ್‌ಸಿ ಧರಣಿ

ಕಾವೇರಿ ನದಿ ಪಾತ್ರದ ಭೂ ಪ್ರದೇಶ ನಾಶಪಡಿಸಿದರೆ ಜಲಮೂಲಗಳಿಗೆ ಧಕ್ಕೆ

ಮಡಿಕೇರಿ, ಮೇ 10– ಸಿದ್ದಾಪುರ ವ್ಯಾಪ್ತಿಯ 2400 ಎಕರೆ ಕಾಫಿ ತೋಟ ಸೇರಿದಂತೆ ಕೊಡಗು ಜಿಲ್ಲೆಯ ಕಾವೇರಿ ಜಲಾನಯನ ಪ್ರದೇಶದ ಕೃಷಿ ಜಮೀನುಗಳನ್ನು ಭೂ ಪರಿವರ್ತಿಸಬಾರದು ಎಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಶುಕ್ರವಾರ ಧರಣಿ ನಡೆಸಲಾಯಿತು.

ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ನೇತೃತ್ವದಲ್ಲಿ ಧರಣಿ ನಡೆಸಿದ ಪ್ರಮುಖರು, ಸರ್ಕಾರ ಭೂ ಪರಿವರ್ತನೆಗೆ ಅವಕಾಶ ನೀಡಬಾರದು. ವಾಣಿಜ್ಯೋದ್ಯಮ ಉದ್ದೇಶಕ್ಕೆ ಭೂ ಪರಿವರ್ತನೆಯನ್ನು ಸಂಪೂರ್ಣವಾಗಿ ತಡೆಯಬೇಕು. ಎಲ್ಲಾ ಕಾನೂನುಗಳನ್ನು ಗಾಳಿಗೆ ತೂರಿ ಭೂ ಪರಿವರ್ತನಾ ಕೃತ್ಯದಲ್ಲಿ ಭಾಗಿಯಾಗಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.



ಕಾವೇರಿ ಜಲಾನಯನ ಪ್ರದೇಶದ ಜಮೀನುಗಳನ್ನು ಭೂ ಪರಿವರ್ತಿಸಬಾರದು ಎಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ಡಿಸಿ ಕಚೇರಿ ಎದುರು ಧರಣಿ ನಡೆಸಲಾಯಿತು.

ಎನ್.ಯು.ನಾಚಪ್ಪ ಮಾತನಾಡಿ, ಕೊಡಗಿನ ಕಾಫಿ ತೋಟಗಳನ್ನು ಭೂ ಪರಿವರ್ತಿಸುವ ಮೂಲಕ ಭೂಮಾಫಿಯಾ, ರೆಸಾರ್ಟ್ ದೊರೆಗಳು, ರಿಯಲ್ ಎಸ್ಟೇಟ್ ಧಣಿಗಳು, ಅನಿವಾಸಿ ಭಾರತೀಯ ಉದ್ಯಮಿಗಳು, ಬಹುರಾಷ್ಟ್ರೀಯ ಕಂಪನಿಗಳು ಮತ್ತು ಕಾರ್ಪೊರೇಟ್ ವಲಯಗಳಿಗೆ ವಿಲ್ಲಾ, ಬೃಹತ್ ಬಂಗಲೆ ಹಾಗೂ ಟೌನ್‌ಶಿಪ್‌ಗಳನ್ನು ನಿರ್ಮಿಸಲು ಸರ್ಕಾರ ಅವಕಾಶ ನೀಡಲು ಮುಂದಾಗಿದೆ ಕಾವೇರಿ ನದಿ ಪಾತ್ರದ ಭೂ ಪ್ರದೇಶವನ್ನು ನಾಶಪಡಿಸಿದಲ್ಲಿ ಅದು ಭೌಗೋಳಿಕ ಅಸಮತೋಲನಕ್ಕೆ ಕಾರಣವಾಗಲಿದೆ. ದಕ್ಷಿಣ ಭಾರತದ ಜೀವನ ರೇಖೆಯಾದ ಕಾವೇರಿ ಜಲಮೂಲಗಳಿಗೆ ಧಕ್ಕೆಯಾಗಲಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರೆಸಾರ್ಟ್ ದೊರೆಯಿಂದ ಸಿದ್ದಾಪುರದಲ್ಲಿ 2400 ಎಕರೆ, ತಡಿಯಂಡಮೊಳ್ ತಪ್ಪಲಿನ ವಿಶ್ವ ಪಾರಂಪರಿಕ ತಾಣದಲ್ಲಿ 300 ಎಕರೆ ಕಾಫಿ ತೋಟವನ್ನು ವಿಲ್ಲಾಗಳಾಗಿ ಪರಿವರ್ತಿಸಲು ಹವಣಿಸುತ್ತಿರುವ ಶಿಕ್ಷಣೋದ್ಯಮಿ ಹಾಗೂ ಮಕ್ಕಂದೂರಿನಲ್ಲಿ ಹೊರ ರಾಜ್ಯದ ಉದ್ಯಮಿ ಅನುಮತಿ ರಹಿತವಾಗಿ ನಿರ್ಮಿಸುತ್ತಿರುವ ರೆಸಾರ್ಟ್ ಸೇರಿದಂತೆ ಕಾವೇರಿ ಜಲಾನಯನ ಪ್ರದೇಶದಲ್ಲಿನ ತೋಟಗಳನ್ನು ಪರಿವರ್ತಿಸಿ ಟೌನ್‌ಶಿಪ್ ಮತ್ತು ಮನೆಗಳನ್ನು ನಿರ್ಮಿಸುತ್ತಿರುವ ಹೊರಗಿನ ಕಾರ್ಪೊರೇಟ್ ಸಂಸ್ಥೆಗಳು ಕೊಡವ ಪ್ರದೇಶದಾದ್ಯಂತ ಜಮೀನುಗಳನ್ನು ಖರೀದಿಸುತ್ತಿವೆ. ಜೊತೆಗೆ ಜಲಾನಯನ ಪ್ರದೇಶ ಮತ್ತು ತೊರೆಗಳನ್ನು ಬೇರೆಡೆಗೆ ತಿರುಗಿಸಿಕೊಳ್ಳಲಾಗುತ್ತಿದೆ ಎಂದು ಆರೋಪಿಸಿದರು.

ಬಳಿಕ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು. ಧರಣಿಯಲ್ಲಿ ಬೊಪ್ಪಂಡ ಬೊಳ್ಳಮ್ಮ ನಾಣಯ್ಯ, ಪಟ್ಟಮಾಡ ಲಲಿತಾ ಗಣಪತಿ, ಚೋಳಪಂಡ ಜ್ಯೋತಿ ನಾಣಯ್ಯ, ಅಜ್ಜಿನಿಕಂಡ ಇನಿತಾ ಮಾಚಯ್ಯ, ಕಲಿಯಂಡ ಪ್ರಕಾಶ್, ಬಾಚರಣಿಯಂಡ ಚಿಪ್ಪಣ್ಣ, ಅಳಮಂಡ ಜೈ, ಕಿರಿಯಮಾಡ ಶೆರಿನ್, ಪುಲ್ಲೇರ ಕಾಳಪ್ಪ, ಚಂಬಂಡ ಜನತ್, ಕರ್ನಲ್ ಚೆಪ್ಪುಡಿರ ಮುತ್ತಣ್ಣ, ಬೇಪಡಿಯಂಡ ಬಿದ್ದಪ್ಪ, ಅರೆಯಡ ಗಿರೀಶ್, ಮೂಕೊಂಡ ದಿಲೀಪ್, ಐಲಪಂಡ ಮಿಟ್ಟು ಬಡುವಂಡ ವಿಜಯ್, ಚೇನಂಡ ಸುರೇಶ್, ಚೇನಂದ ಮಧು, ಮಂದಪಂಡ ಯತೀಶ್, ವಕೀಲ ಹೇಮಚಂದ್ರ ಮತ್ತಿತರರು ಪಾಲ್ಗೊಂಡಿದ್ದರು.

ಮಡಿಕೇರಿ ಜಿಲ್ಲೆಯ ವಿವಿಧೆಡೆ ಉತ್ತಮ ಮಳೆ


ಮಡಿಕೇರಿಯ ಗೆಸ್ಟ್‌ಹೌಸ್ ರಸ್ತೆ ಬದಿ ನಿಲ್ಲಿಸಿದ್ದ ಕಾರಿನ ಮೇಲೆ ಮರ ಬಿದ್ದಿರುವುದು.

ಮಡಿಕೇರಿ, ಮೇ 10–ಕೊಡಗು ಜಿಲ್ಲೆಯ ವಿವಿಧ ಭಾಗಗಳಲ್ಲಿ ಗಾಳಿ ಸಹಿತ ಉತ್ತಮ ಮಳೆಯಾಗಿದೆ.

ಮಡಿಕೇರಿ, ಮಕ್ಕಂದೂರು, ಗಾಳಿಬೀಡು, ವಣಚಲು, ಕಡಮಕಲ್ಲು ಸೇರಿದಂತೆ ಹಾಕತ್ತೂರು, ಮೂರ್ನಾಡು ಭಾಗಗಳಲ್ಲೂ ಉತ್ತಮ ಮಳೆ ಸುರಿದಿದೆ. ಕಳೆದೆರೆಡು ದಿನಗಳಿಂದ ಈ ವ್ಯಾಪ್ತಿಯಲ್ಲಿ ದಟ್ಟ ಮೋಡ ಕವಿದ ವಾತಾವರಣವಿದ್ದರೂ, ನಿರೀಕ್ಷಿತ ಪ್ರಮಾಣದ ಮಳೆಯಾಗಿರಲಿಲ್ಲ.

ಗುರುವಾರ ಸಂಜೆ ಗುಡುಗು ಮಿಂಚು ಸಹಿತ ಅರ್ಧ ಗಂಟೆಗೂ ಹೆಚ್ಚು ಕಾಲ ಮಳೆಯಾಗಿದ್ದು, ಇದರಿಂದ ಸಣ್ಣಪುಟ್ಟ ಹಾನಿಯಾಯಿತು. ಮಡಿಕೇರಿ ಸುದರ್ಶನ ವೃತ್ತದಿಂದ ಗೆಸ್ಟ್‌ಹೌಸ್‌ಗೆ ತೆರಳುವ ಮಾರ್ಗದಲ್ಲಿ ರಸ್ತೆ ಬದಿ ನಿಲ್ಲಿಸಿದ್ದ ಕಾರಿನ ಮೇಲೆ ಮರ ಬಿದ್ದು, ಜಖಂಗೊಂಡಿದೆ.

ನಾಪೋಕ್ಲು ವರದಿ: ನಾಪೋಕ್ಲುವಿನಲ್ಲಿ ಗುರುವಾರ ಭಾರಿ ಮಳೆಯಾಗಿದ್ದು, ಪಟ್ಟಣದಿಂದ ವಿರಾಜಪೇಟೆ, ಭಾಗಮಂಡಲ ಹಾಗೂ ಬೇತು ಗ್ರಾಮಕ್ಕೆ ತೆರಳುವ ಮುಖ್ಯ ರಸ್ತೆಗಳಲ್ಲಿ ಮಳೆ ನೀರು ನಿಂತು ವಾಹನ ಚಾಲಕರು ಹಾಗೂ ಪಾದಚಾರಿಗಳ ಸಂಚಾರಕ್ಕೆ ತೊಂದರೆಯಾಗಿತ್ತು.

ಚೆಕ್‌ಬೌನ್ಸ್: ಉದ್ಯಮಿಗೆ 6 ತಿಂಗಳು ಜೈಲು

ವಿರಾಜಪೇಟೆ, ಮೇ 10– ಚೆಕ್‌ಬೌನ್ಸ್ ಪ್ರಕರಣ ಸಂಬಂಧ ಉದ್ಯಮಿಗೆ ವಿರಾಜಪೇಟೆ ನ್ಯಾಯಾಲಯ 6 ತಿಂಗಳು ಜೈಲು ಶಿಕ್ಷೆ ವಿಧಿಸಿ, 7 ಲಕ್ಷ ರೂ. ಅನ್ನು ದೂರುದಾರರಿಗೆ ನೀಡುವಂತೆ ಆದೇಶಿಸಿದೆ.

ವಿರಾಜಪೇಟೆ ಬಳಿಯ ಆಂಬಟ್ಟಿ ಗ್ರಾಮದ ಎನ್.ಸಿ.ವಿಜಯ ಕುಮಾರ್ ಶಿಕ್ಷೆಗೆ ಗುರಿಯಾದ ಉದ್ಯಮಿ. ಈತ ಸಮಿಪದ ಕುಕ್ಲೂರು ನಿವಾಸಿ ಟಿ.ಆರ್.ಹರ್ಷ ಅವರಿಂದ 2016ರಲ್ಲಿ ಸಾಲ ಪಡೆದು ಇಂಡಿಯನ್ ಬ್ಯಾಂಕ್‌ನ ವಿರಾಜಪೇಟೆ ಶಾಖೆ ಚೆಕ್ ನೀಡಿದ್ದರು.

ನಂತರ ಟಿ.ಆರ್. ಹರ್ಷ ಸಾಲದ ಹಣ ಪಡೆಯಲು ಈ ಚೆಕ್ ಅನ್ನು ಬ್ಯಾಂಕ್‌ಗೆ ನೀಡಿದ್ದರು. ಆದರೆ, ಚೆಕ್‌ಬೌನ್ಸ್ ಆಗಿದೆ.

ಬಳಿಕ ಟಿ.ಆರ್.ಹರ್ಷ, ಎನ್.ಸಿ.ವಿಜಯ ಕುಮಾರ್ ವಿರುದ್ಧ 5.50 ಲಕ್ಷ ರೂ. ವಸೂಲಾತಿಗಾಗಿ ವಿರಾಜಪೇಟೆ ನ್ಯಾಯಾಲಯದಲ್ಲಿ ಚೆಕ್‌ಬೌನ್ಸ್ ಪ್ರಕರಣ ಸಂಬಂಧ ದಾಖಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಸಂತೋಷ್ ಕೊಠಾರಿ, ವಿಜಯ ಕುಮಾರ್‌ಗೆ 6 ತಿಂಗಳು ಜೈಲು ಶಿಕ್ಷೆ ವಿಧಿಸಿ, 7 ಲಕ್ಷ ರೂ. ಅನ್ನು ದೂರುದಾರರಿಗೆ ನೀಡುವಂತೆ ತೀರ್ಪು ನೀಡಿದ್ದಾರೆ. ಟಿ.ಆರ್. ಹರ್ಷ ಪರ ವಕೀಲ ಡಿ.ಸಿ.ಧ್ರುವಕುಮಾರ್ ವಾದ ಮಂಡಿಸಿದರು.

ಅನಾರೋಗ್ಯದಿಂದ ಬಳಲುತ್ತಿದ್ದ ವ್ಯಕ್ತಿ ಆತ್ಮಹತ್ಯೆ

ನಾಪೋಕ್ಲು, ಮೇ 10– ಅನಾರೋಗ್ಯದಿಂದ ಬಳಲುತ್ತಿದ್ದ ವ್ಯಕ್ತಿಯೋರ್ವ ಮಸೀದಿಯೊಳಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಎಮ್ಮೆಮಾಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪಡಿಯಾಣಿ ಗ್ರಾಮದಲ್ಲಿ ಶುಕ್ರವಾರ ನಡೆದಿದೆ.

ಪಡಿಯಾಣಿ ಬೈರಂಡಾಣೆ ಗ್ರಾಮದ ನಿವಾಸಿ ಬಿ.ಯು.ಶಾದುಲಿ(55) ಆತ್ಮಹತ್ಯೆ ಮಾಡಿಕೊಂಡಿದ್ದು, ಕೂಲಿ ಕೆಲಸ ಮಾಡಿಕೊಂಡಿದ್ದ ಈತ ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಶುಕ್ರವಾರ ಬೆಳಗ್ಗೆ ಮನೆಯಿಂದ ಹೊರ ಹೋದ ಶಾದುಲಿ ತನ್ನ ಮನೆ ಸಮೀಪದಲ್ಲಿರುವ ಬೈರಂಡಾಣೆ ಮಸೀದಿಯ ಮೇಲ್ಭಾಗದ ಕೋಣೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನಾಪೋಕ್ಲು ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ತಾವಳಗೇರಿಯಲ್ಲಿ ಹುಲಿ ದಾಳಿಗೆ ಹಸು ಬಲಿ

ಮಡಿಕೇರಿ: ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿದ್ದ ಹಸುವಿನ ಮೇಲೆ ಹುಲಿ ದಾಳಿ ನಡೆಸಿ ಕೊಂದು ಹಾಕಿದ ಘಟನೆ ಪೊನ್ನಂಪೇಟೆ ತಾಲೂಕಿನ ಶ್ರೀಮಂಗಲ ಹೋಬಳಿಯ ತಾವಳಗೇರಿ ಗ್ರಾಮದಲ್ಲಿ ನಡೆದಿದೆ.

ತಾವಳಗೇರಿ ಗ್ರಾಮದ ಮುಕ್ಕಾಟಿರ ವಿನಯ್ ಅವರಿಗೆ ಸೇರಿದ 50 ರಿಂದ 60 ಸಾವಿರ ರೂ. ಬೆಲೆ ಬಾಳುವ ತೆನೆ ಹಸು ಹುಲಿ ದಾಳಿಗೆ ಬಲಿಯಾಗಿದೆ. ಪೊನ್ನಂಪೇಟೆ ಅರಣ್ಯಾಧಿಕಾರಿಗಳು ಸ್ಥಳ ಪರಿಶೀಲಿಸಿ, ಹಸು ಬಲಿ ಪಡೆದ ಜಾಗದಲ್ಲಿ ಕ್ಯಾಮರಾ ಅಳವಡಿಸಿ ಹಾಗೂ ಬೋನು ಇರಿಸಿ ಹುಲಿ ಸೆರೆಗೆ ಕಾರ್ಯಾಚರಣೆ ನಡೆಸಲು ಮುಂದಾಗಿದ್ದಾರೆ.

ಈ ವೇಳೆ ಎಸಿಎಫ್ ಗೋಪಾಲ್, ವಲಯ ಅರಣ್ಯಾಧಿಕಾರಿ ಬಿ.ಎಂ.ಶಂಕರ್, ಉಪ ವಲಯ ಅರಣ್ಯಾಧಿಕಾರಿಗಳಾದ ದಿವಾಕರ್, ಗಣೇಶ್, ಗಸ್ತು ಅರಣ್ಯ ಪಾಲಕ ಚೇತನ್ ಕುಮಾರ್, ಆರ್‌ಆರ್‌ಟಿ ಸಿಬ್ಬಂದಿ ಹಾಗೂ ಗ್ರಾಮಸ್ಥರಾದ ಕೊಟ್ರಮಾಡ ವಿಜು ಸೋಮಯ್ಯ, ಮುಕ್ಕಾಟಿರ ಬೆನ್ನ, ಸತೀಶ್, ರಂಜಿ, ಶುಭಾನಂದ, ಕಳ್ಳೇಂಗಡ ದಿನೇಶ್, ಕೈಬುಲೀರ ಮಂಜು ಮತ್ತಿತರರು ಹಾಜರಿದ್ದರು

ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ರೈತನ ಮೇಲೆ ಚಿರತೆ ದಾಳಿ

ಚಿನಕುರಳಿ, ಮೇ 10– ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ರೈತನ ಮೇಲೆ ಚಿರತೆ ದಾಳಿ ನಡೆಸಿ ಪರಾರಿಯಾಗಿರುವ ಘಟನೆ ಕಾಳೇಗೌಡನಕೊಪ್ಪಲು ಗ್ರಾಮದಲ್ಲಿ ಶುಕ್ರವಾರ ಬೆಳಗ್ಗೆ ನಡೆದಿದೆ.



ಕಾಳೇಗೌಡನಕೊಪ್ಪಲು ಗ್ರಾಮದ ನಿವಾಸಿ ಮರಪ್ಪ ಚಿರತೆ ದಾಳಿಯಿಂದ ಗಾಯಗೊಂಡವರಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ರೈತ ಮರಪ್ಪ ತಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಚಿರತೆ ಮರಪ್ಪನ ಮೇಲೆ ದಾಳಿ ನಡೆಸಿದೆ. ಈ ವೇಳೆ ಆತ ಜೋರಾಗಿ ಕಿರುಚಿಕೊಂಡ ಹಿನ್ನೆಲೆಯಲ್ಲಿ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕ ಓಡಿ ಬಂದಿದ್ದಾನೆ. ಅಷ್ಟರಲ್ಲಿ ಚಿರತೆ ಪರಾರಿಯಾಗಿದ್ದು ರೈತ ಮರಪ್ಪನಿಗೆ ಚಿಕಿತ್ಸೆ ಕೊಡಿಸಲಾಗಿದೆ.

ತಾಲೂಕಿನ ಲಿಂಗಾಪುರ, ದೊಡ್ಡಬೋಗನಹಳ್ಳಿ, ಕಾಳೇಗೌಡನ ಕೊಪ್ಪಲು ಇಳ್ಳೇನಹಳ್ಳಿ, ಕನಗನಹಳ್ಳಿ, ಮೊರಸಹಳ್ಳಿ ಗ್ರಾಮದ ಸುತ್ತಮುತ್ತಲಿನ ಪ್ರದೇಶದಲ್ಲಿ ಚಿರತೆ ಹಾವಳಿ ಹೆಚ್ಚಾಗಿದೆ. ಕನಗನಹಳ್ಳಿ ಗ್ರಾಮದಲ್ಲಿ ಬೇಕರಿ ಬಳಿ ನಿಂತಿದ್ದ ನಾಯಿಯನ್ನು ಚಿರತೆ ಹೊತ್ತೊಯ್ದಿರುವ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಅಲ್ಲದೆ ಯುಗಾದಿ ಹಬ್ಬದಂದು ಕೋಳಿ ಹಿಡಿಯಲು ಬಂದು ಚಿರತೆ ಮನೆಗೆ ನುಗ್ಗಿದ್ದು ಜನರಲ್ಲಿ ಆತಂಕ ಸೃಷ್ಟಿಸಿದೆ.

ಲಿಂಗಾಪುರ, ದೊಡ್ಡಬೋಗನಹಳ್ಳಿ ಗ್ರಾಮದ ಸಮೀಪ ಇರುವ ಕರೀಮಂಟಿಯಲ್ಲಿ ಚಿರತೆ ವಾಸವಾಗಿದ್ದು ಅದರ ಹಾವಳಿ ಹೆಚ್ಚಾಗಿದೆ, ವಿಷಯ ತಿಳಿದ ಅರಣ್ಯಾಧಿಕಾರಿಗಳು ಚಿರತೆ ಸೆರೆಗೆ ಬೆಳಗ್ಗೆಯಿಂದ ಬಲೆ ಬೀಸಿದ್ದಾರೆ.

ಮಳೆಗೆ ಹಾರಿದ ಮೇಲ್ಛಾವಣಿ


ಚಿನಕುರಳಿ ಸಮೀಪದ ಇಳ್ಳೇನಹಳ್ಳಿ ಗ್ರಾಮದ ಚಂದ್ರೇಗೌಡ ಎಂಬುವರಿಗೆ ಸೇರಿದ ಮನೆಯ ಮೇಲ್ಛಾವಣಿ ಗುರುವಾರ ರಾತ್ರಿ ಸುರಿದ ಬಿರುಗಾಳಿ ಸಹಿತ ಮಳೆಯಿಂದಾಗಿ ಸಂಪೂರ್ಣವಾಗಿ ಗಾಳಿಗೆ ಹಾರಿಹೋಗಿದೆ. ಈ ಸಂಬಂಧ ಗ್ರಾಮ ಲೆಕ್ಕಾಧಿಕಾರಿ ಕುಮಾರ್ ಸ್ಥಳಕ್ಕೆ ಭೇಟಿಕೊಟ್ಟು ಪರಿಶೀಲಿಸಿದ್ದಾರೆ.

ಬಸವಣ್ಣರ ಆಧ್ಯಾತ್ಮಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು

ಬಸವಣ್ಣ, ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಣೆ

ಮಂಡ್ಯ, ಮೇ 10–ಬಸವಣ್ಣನವರು ಜ್ಞಾನ ಭಂಡಾರವಿದ್ದಂತೆ. ಅವರ ಚಿಂತನೆ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಪ್ರತಿಯೊಬ್ಬರು ಅಳವಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಕರೆ ನೀಡಿದ್ದಾರೆ.

ಶುಕ್ರವಾರ ನಗರದ ಜಿಲ್ಲಾ ಪಂಚಾಯತ್‌ನ ಕಾವೇರಿ ಸಭಾಂಗಣದಲ್ಲಿ ನಡೆದ ಬಸವಣ್ಣ ಮತ್ತು ಹೇಮರೆಡ್ಡಿ ಮಲ್ಲಮ್ಮ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿ ಮನೆಯಲ್ಲಿ ಮಕ್ಕಳಿಗೆ ಬಸವಣ್ಣನವರ ವಚನಗಳನ್ನು ತಿಳಿಸಿ, ವಚನಗಳ ಮೌಲ್ಯಗಳನ್ನು ಮಕ್ಕಳ ಜೀವನದಲ್ಲಿ ರೂಢಿಸಬೇಕು ಎಂದರು.

ಜಗಜ್ಯೋತಿ ಬಸವಣ್ಣನವರ ಆಧ್ಯಾತ್ಮಿಕ ತತ್ವ ಆದರ್ಶಗಳ ಬಗ್ಗೆ ಪ್ರತಿಯೊಬ್ಬರು ಅರಿತುಕೊಳ್ಳಬೇಕು, ಅವರ ಬಗ್ಗೆ ತಿಳಿಯಲು ಕೇವಲ ತರಗತಿಗಳಲ್ಲಿ ಆಯ್ಕೆ ಮಾಡಿರುವ ಪಾಠಗಳಲ್ಲಿ ಒಂದು ಎರಡು ಪುಟಗಳಲ್ಲಿ ತಿಳಿಯಲು ಸಾಧ್ಯವಿಲ್ಲ. ಕಾರಣ ಅವರೊಬ್ಬ ಜ್ಞಾನ ಭಂಡಾರವಿದ್ದಂತೆ ಎಂದರು.


ಬಸವಣ್ಣ, ಹೇಮರೆಡ್ಡಿ ಮಲ್ಲಮ್ಮ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುತ್ತಿರುವ ಗಣ್ಯರು

ದೇವಾಲಯಕ್ಕೆ ಹೋಗಿ ಕೈ ಮುಗಿದು ಕೊಂಡು ಬಂದರೆ ಸಾಲದು. ನಾವು ಮಾಡುವಂತಹ ಕೆಲಸ ಕಾರ್ಯದಲ್ಲಿ ದೇವರನ್ನು ಕಾಣಬೇಕು. ಬಸವಣ್ಣನವರ ನುಡಿಯಂತೆ ದೇಹವೇ ದೇಗುಲ, ಶಿರವೇ ಕಳಸ ಎಂಬ ನುಡಿಯನ್ನು ಪಾಲಿಸಬೇಕು, ಮಾನವೀಯತೆಗಿಂತ ದೊಡ್ಡದ್ದು ಯಾವುದು ಇಲ್ಲ ಎಂಬ ಸಂದೇಶವನ್ನು ಜಗತ್ತಿಗೆ ನೀಡಿದವರು ಬಸವಣ್ಣನವರು. ಸಾಂಸ್ಕೃತಿಕ ಹರಿಕಾರರಾದ ಬಸವಣ್ಣನವರ ವಚನಗಳು ಕರ್ನಾಟಕಕ್ಕೆ ಮಾತ್ರ ಸೀಮಿತವಾಗದೇ ಅವರು ನೀಡಿದ ವಚನಗಳ ಪುಸ್ತಕಗಳನ್ನು ಜಗತ್ತಿನಾದ್ಯಂತ ನೋಡಬಹುದು. ಕಾಯಕವೇ ಕೈಲಾಸ ಎಂಬ ತತ್ವವನ್ನು ಎಲ್ಲರೂ ಅಳವಡಿಸಿ ಕೊಳ್ಳಬೇಕು ಎಂದು ತಿಳಿಸಿದರು.

ಬಸವಣ್ಣನವರ ಅನುಭವ ಮಂಟಪದಲ್ಲಿ ಲಕ್ಷಾಂತರ ಜನರು ಸೇರಿ ವಿಚಾರ ವಿನಿಮಯ ಮಾಡಿಕೊಳ್ಳುತ್ತಿದ್ದರು ಹಾಗೂ ಅನ್ನ ದಾಸೋಹ ಸಹ ನಡೆಸಲಾಗುತ್ತಿತ್ತು. ಜ್ಞಾನ ಮತ್ತು ಅನ್ನ ದಾಸೋಹ ನಡೆಸುವುದರ ಜೊತೆಗೆ ಜನರಿಗೆ ಅರ್ಥವಾಗುವ ಸರಳವಾಗಿ ವಚನಗಳ ಮೂಲಕ ಜೀವನದ ಸಂದೇಶಗಳನ್ನು ನೀಡಿದರು. ಅವರು ನೀಡಿರುವ ವಚನಗಳು ಇಂದಿಗೂ ಪ್ರಸ್ತುತ ಎಂದರು.

ಮಹಾ ಶರಣೆ ಹೇಮರೆಡ್ಡಿ ಮಲ್ಲಮ್ಮ ಅವರು ಸಾಂಪ್ರದಾಯಿಕ ಕುಟುಂಬದಲ್ಲಿ ಜನಿಸಿ ಮದುವೆ ಆದ ನಂತರ ತನ್ನ ಸಂಸಾರದಲ್ಲಿ ಅಥವಾ ಸುತ್ತಮುತ್ತ ಪರಿಸರದಲ್ಲಿ ಕಂಡಂತಹ ತೊಡಕುಗಳನ್ನು, ಸಮಸ್ಯೆಗಳನ್ನು ಆಧ್ಯಾತ್ಮಿಕ ನೆಲಗಟ್ಟಿಯಲ್ಲೆ ಮನ ಪರಿವರ್ತನೆ ಮಾಡುತ್ತಿದ್ದರು, ಸ್ವತಃ ಆಕೆಯ ಕುಟುಂಬದಲ್ಲಿ ಇದ್ದಂತಹ ಮೈದುನನ ಮನ ಪರಿವರ್ತನೆ ಮಾಡಿದರು ಎಂದು ಹೇಳಿದರು.

ಸಂತ ಶಿಶುನಾಳ ಷರೀಫರ ಶಿಷ್ಯೆ ಆಗಿದ್ದರು, ತನ್ನ ಗುರುಗಳ ಕೈಯಲ್ಲಿ ಹೊಗಳಿಸಿಕೊಂಡಂತಹ ಶಿಷ್ಯೆ ಹೇಮರೆಡ್ಡಿ ಮಲ್ಲಮ್ಮ ಅವರು. ವಿವಾಹಿತ ಜೀವನವನ್ನು ಹೊಂದಿದ್ದರೂ ಕೂಡ ಯಾವುದಕ್ಕೂ ಹಿಂಜರಿಯದೇ ಆಧ್ಯಾತ್ಮಿಕ ಜೀವನದ ಕಡೆ ಹೆಚ್ಚಾಗಿ ಒಲವು ನೀಡಿದರು ಎಂದು ತಿಳಿಸಿದರು.

ಎಡಿಸಿ ಎಚ್.ಎಲ್.ನಾಗರಾಜ್, ಜಿಪಂ ಉಪಕಾರ್ಯದರ್ಶಿ ಬಾಬು, ಮುಖಂಡರಾದ ಎಂ.ಗುರುಪ್ರಸಾದ್, ಅಮ್ಜದ್ ಪಾಷಾ, ಮಹಂತಪ್ಪ ಇತರರಿದ್ದರು.

ಪರಿಷತ್ ಚುನಾವಣೆ: ಜೆಡಿಎಸ್ ಟಿಕೆಟ್ ಸಿಗುವ ವಿಶ್ವಾಸವಿದೆ

ಮಂಡ್ಯ, ಮೇ 10– ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ವಿಧಾನಪರಿಷತ್ತಿಗೆ ಸ್ಪರ್ಧೆ ಬಯಸಿ ಜೆಡಿಎಸ್ ಟಿಕೆಟ್ ನಿರೀಕ್ಷಿಸುತ್ತಿದ್ದೇನೆ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ವಿಶ್ವಾಸ ವ್ಯಕ್ತಪಡಿಸಿದರು.

ಶುಕ್ರವಾರ ನಗರದ ಕರ್ನಾಟಕ ಸಂಘದ ಕೆವಿಎಸ್ ಭವನದಲ್ಲಿ ವಿಧಾನಪರಿಷತ್‌ನ ದಕ್ಷಿಣ ಶಿಕ್ಷಕರ ಕ್ಷೇತ್ರ ಮಂಡ್ಯ ವ್ಯಾಪ್ತಿಯ ಚುನಾವಣಾ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಜೂ.3ರಂದು ವಿಧಾನಪರಿಷತ್ತಿನ 6 ಸದಸ್ಯ ಸ್ಥಾನಗಳಿಗೆ ಮತದಾನ ಘೋಷಣೆಯಾಗಿದೆ. ದಕ್ಷಿಣ ಶಿಕ್ಷಕರ ಕ್ಷೇತ್ರಕ್ಕೆ ಶಿಕ್ಷಕರೇ ಸ್ಪರ್ಧೆ ಮಾಡಿ, ಗೆಲ್ಲಿಸಿಕೊಂಡು ಶಿಕ್ಷಕರ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಸಂಕಲ್ಪ ಶಿಕ್ಷಕರದ್ದಾಗಿದೆ. ಈ ನಿಟ್ಟಿನಲ್ಲಿ ಪ್ರಾಚಾರ್ಯರೂ, ಶಿಕ್ಷಕರು ಆದ ನಾವು ಈ ಬಾರಿ ಶಿಕ್ಷಕರ ಕ್ಷೇತ್ರಕ್ಕೆ ಸ್ಪರ್ಧೆ ಮಾಡಲು ಒತ್ತಾಯವಿದ್ದ ಮೇರೆಗೆ ಸ್ಪರ್ಧೆ ಮಾಡುತ್ತಿದ್ದೇನೆ ಎಂದು ನುಡಿದರು.

ರಾಜ್ಯದಲ್ಲಿ ಜೆಡಿಎಸ್ ಮತ್ತು ಬಿಜೆಪಿ ಮೈತ್ರಿ ಇರುವುದರಿಂದ ವಿಧಾನ ಪರಿಷತ್ತಿನ ಚುನಾವಣೆಗೂ ಮೈತ್ರಿ ಬಲ ಹೆಚ್ಚಲಿದೆ. ಈ ಹಿನ್ನೆಲೆಯಲ್ಲಿ ದಕ್ಷಿಣ ಶಿಕ್ಷಕರ ಕ್ಷೇತ್ರವು ಜೆಡಿಎಸ್‌ಗೆ ಲಭ್ಯವಾಗಬಹುದು. ಲಭ್ಯವಾದರೆ ಜೆಡಿಎಸ್ ಟಿಕೆಟ್ ನಮಗೆ ಸಿಗುವ ಸಾಧ್ಯತೆ ಹೆಚ್ಚಿದೆ ಎಂಬ ವಿಶ್ವಾಸವಿದೆ ಎಂದು ತಿಳಿಸಿದರು.

ಈಗಾಗಲೇ ನಾನು ಕಳೆದ 13 ತಿಂಗಳಿಂದಲೇ 4 ಜಿಲ್ಲೆಗಳಲ್ಲಿ ಸತತ ಮೂರು ಸುತ್ತು ಪ್ರತಿ ತಾಲೂಕಿನ ಶಿಕ್ಷಕ ಮತದಾರರನ್ನು ಸಂಪರ್ಕ ಮಾಡಿದ್ದೇನೆ. ಎಲ್ಲರೂ ಭರವಸೆ ನೀಡಿದ್ದು, ನಾವು ಬದಲಾವಣೆಯನ್ನು ಬಯಸುತ್ತೇವೆ. ಈ ಬಾರಿ ನಿಮಗೆ ಅವಕಾಶ ಮಾಡಿಕೊಡುತ್ತೇವೆ. ನಮ್ಮ ಪ್ರತಿನಿಧಿ ಒಬ್ಬ ಶಿಕ್ಷಕನೇ ಇರಬೇಕು ಎನ್ನುವುದು ನಮ್ಮ ಬಯಕೆಯಾಗಿದೆ ಎಂದು ಮತದಾರರು ಭರವಸೆ ನೀಡಿದ್ದಾರೆ ಎಂದರು. ಸದನದಲ್ಲಿ ನಾನು ಮತನಾಡುವಾಗ ಪದವೀಧರರ ಸಮಸ್ಯೆಗಳಿಗಿಂತ ಶಿಕ್ಷಕರ ಸಮಸ್ಯೆಗಳ ಕುರಿತು ಹೆಚ್ಚು ಚರ್ಚೆ ನಡೆಸಿದ್ದೇನೆ, ಸಮಸ್ಯೆಗಳ ಪರಿಹಾರಕ್ಕೆ ಮುಂದಾಗಿದ್ದೇನೆ. ಹಳೇ ಪಿಂಚಣಿ ವ್ಯವಸ್ಥೆ ಜಾರಿಯಾಗಬೇಕಿದೆ. ಜಾರಿ ಮಾಡಿಸುವ ಸವಾಲು ನಮ್ಮ ಮುಂದಿದೆ ಎಂದು ನುಡಿದರು.

ಕಿಕ್ಕೇರಿ ಗ್ರಾಪಂಗೆ ಬಾಲಕೃಷ್ಣ ಅಧ್ಯಕ್ಷ

ಕಿಕ್ಕೇರಿ: ಗ್ರಾಮದ ಗ್ರಾಪಂ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಎಸ್.ಕೆ. ಬಾಲಕೃಷ್ಣ ಅವಿರೋಧವಾಗಿ ಆಯ್ಕೆಯಾದರು. ಈ ಹಿಂದೆ ಬಿಜೆಪಿ ಹಾಗೂ ಜೆಡಿಎಸ್ ಬೆಂಬಲಿತ ಸದಸ್ಯರು ಒಡಂಬಡಿಕೆ ಮಾಡಿಕೊಂಡು ಎರಡನೆ ಅವಧಿಗೆ ಬಿಜೆಪಿ ಬೆಂಬಲಿತ ಕೆ.ಆರ್. ರಾಜೇಶ್ ಅವಿರೋಧವಾಗಿ ಆಯ್ಕೆಯಾಗಿದ್ದರು. ಅಧ್ಯಕ್ಷ ಸ್ಥಾನ ಒಡಂಬಡಿಕೆ ಸೂತ್ರದಂತೆ ಕೆ.ಆರ್.ರಾಜೇಶ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ ಸಲುವಾಗಿ ಚುನಾವಣೆ ನಡೆಯಿತು.

16 ಸದಸ್ಯರ ಗ್ರಾಪಂ.ನಲ್ಲಿ ಜೆಡಿಎಸ್‌ನ ಎಸ್.ಕೆ. ಬಾಲಕೃಷ್ಣ ಹಾಗೂ ಕಾಂಗ್ರೆಸ್ ಬೆಂಬಲಿತ ಕೆ.ಎನ್. ಪುಟ್ಟೇಗೌಡ ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದರು. ಕೆ.ಎನ್. ಪುಟ್ಟೇಗೌಡ ನಾಮಪತ್ರ ಹಿಂಪಡೆದ ಕಾರಣ ಅವಿರೋಧವಾಗಿ ಎಸ್.ಕೆ. ಬಾಲಕೃಷ್ಣ ಆಯ್ಕೆಯನ್ನು ಚುನಾವಣಾಧಿಕಾರಿ ಸಿಡಿಪಿಒ ಅರುಣ್‌ಕುಮಾರ್ ಘೋಷಣೆ ಮಾಡಿದರು. ಪಿಡಿಒ ಚಲುವರಾಜು ಚುನಾವಣೆ ಕರ್ತವ್ಯದಲ್ಲಿ ಪಾಲ್ಗೊಂಡಿದ್ದರು.

ಉಪಾಧ್ಯಕ್ಷೆ ಸರಸ್ವತಿ, ಸದಸ್ಯರಾದ ಕೆ.ಆರ್. ರಾಜೇಶ್, ಕೆ.ಆರ್. ಕೃಷ್ಣ ಕೆ.ಎನ್. ಪುಟ್ಟೇಗೌಡ, ಕೆ.ಬಿ. ಚಂದ್ರಶೇಖರ್, ಯೋಗೇಶ್, ಕೆ.ಜಿ. ಪುಟ್ಟರಾಜು, ತೇಜಸ್ವಿಕುಮಾರ್, ಸುನೀತಾ, ಜಯಲಕ್ಷ್ಮೀ, ಪದ್ಮಾವತಿ, ತಾಯಮ್ಮ ಜ್ಯೋತಿ, ಸರಸ್ವತಿ, ರೇಣುಕಮ್ಮ ಭಾಗವಹಿಸಿದ್ದರು.

ಸಮಸಮಾಜ ನಿರ್ಮಾಣಕ್ಕೆ ಬಸವಣ್ಣರ ಕೊಡುಗೆ ಅಪಾರ

ಬಸವ ಜಯಂತಿ ಆಚರಣೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು ಸ್ಮರಣೆ

ಚಾಮರಾಜನಗರ, ಮೇ 10–ಸಮ ಸಮಾಜ ನಿರ್ಮಾಣಕ್ಕಾಗಿ ಬಸವಣ್ಣನವರ ಆದರ್ಶ ತತ್ವ ಸಿದ್ಧಾಂತಗಳನ್ನು ಪ್ರತಿಯೊಬ್ಬರು ಜೀವನದ ಉದ್ದಕ್ಕೂ ಅಳವಡಿಸಿಕೊಳ್ಳಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಿದ್ದ ಜಗಜ್ಯೋತಿ ಬಸವೇಶ್ವರ ಹಾಗೂ ಶಿವ ಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಮಾನತೆಯ ಸಮಾಜ ಸೃಷ್ಟಿಗೆ ಬಸವಣ್ಣನವರ ಕೊಡುಗೆ ಅಪಾರ. ಬಸವಣ್ಣನವರ ಸರಳ ಹಾಗೂ ಆದರ್ಶ ಜೀವನ ಎಲ್ಲರಿಗೂ ಮಾದರಿಯಾಗಿದೆ. ಸಮಾಜವನ್ನು ತಿದ್ದಿದ ಬಸವಣ್ಣನವರ ವಚನಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ತಿಳಿಸಿದರು.


ಚಾ.ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಜಯಂತಿ ಕಾರ್ಯಕ್ರಮದಲ್ಲಿ ಬಸವೇಶ್ವರ ಹಾಗೂ ಹೇಮರೆಡ್ಡಿ ಮಲ್ಲಮ್ಮ ಅವರ ಭಾವಚಿತ್ರಕ್ಕೆ ಎಡಿಸಿ ಗೀತಾ ಹುಡೇದ, ಎಸ್ಪಿ ಪದ್ಮಿನಿ ಸಾಹು ನಮನ ಸಲ್ಲಿಸಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಮಾತನಾಡಿ, ಸಮಸಮಾಜ ನಿರ್ಮಾಣದ ಕನಸು ಕಂಡು ಅದನ್ನು ನನಸು ಮಾಡಿದ ಬಸವಣ್ಣನವರು ಇಡೀ ವಿಶ್ವಕ್ಕೆ ಸಮಾನತೆಯ ಬೆಳಕು ನೀಡಿದರು. 12ನೇ ಶತಮಾನದಲ್ಲೇ ಸಾಮಾಜಿಕ ಅಸಮಾನತೆ, ಮೌಢ್ಯತೆ, ಅಸ್ಪೃಶ್ಯತೆ, ಕಂದಾಚಾರಗಳನ್ನು ತೊಡೆದು ಹಾಕಲು ಅವಿರತವಾಗಿ ಶ್ರಮಿಸಿದ ಬಸವಣ್ಣನವರು ದೌರ್ಜನ್ಯ, ಅಪಮಾನಗಳನ್ನು ಅನುಭವಿಸಿದ್ದ ಜನರಿಗೆ ದಾರಿದೀಪವಾದರು. ಸಮಾನತೆಯ ಮೂಲಕ ಜ್ಞಾನದ ದೀಪ ಹಚ್ಚಿದರು ಎಂದರು.

ಬಸವಣ್ಣನವರು ಯಾವುದೇ ಆಸೆ, ಆಮಿಷಗಳಿಗೆ ಒಳಗಾಗದೇ ಸರಳ ಜೀವನವನ್ನು ಅನುಸರಿಸಿದರು. ಪ್ರತಿಯೊಬ್ಬರಿಗೂ ಕಾಯಕದ ಮಹತ್ವದ ಬಗ್ಗೆ ಅರಿವು ಮೂಡಿಸಿದರು. ಅನುಭವ ಮಂಟಪದಲ್ಲಿ ಪುರುಷರಿಗೆ ಸರಿಸಮಾನವಾಗಿ ವಚನಗಳನ್ನು ರಚಿಸಲು ಮಹಿಳೆಯರಿಗೂ ಅವಕಾಶ ಮಾಡಿಕೊಟ್ಟರು. ಸರ್ವಕಾಲಕ್ಕೂ ಪ್ರಚಲಿತವಾಗುವಂತಹ ವಚನಗಳನ್ನು ರಚಿಸಿದ ಬಸವಣ್ಣನವರ ತ್ರಿವಿಧ ದಾಸೋಹಿ ತತ್ವ ಇಂದಿಗೂ ಮಾದರಿಯಾಗಿದೆ ಎಂದು ಸ್ಮರಿಸಿದರು.

ಮುಖಂಡರಾದ ಕಾಳನಹುಂಡಿ ಗುರುಸ್ವಾಮಿ, ಬಸವಣ್ಣ ಹಾಗೂ ಅವರ ವಚನಗಳ ಪ್ರಾಮುಖ್ಯತೆ ಕುರಿತು ತಿಳಿಸಿದರು. ಸಮಾಜದ ಮುಖಂಡರಾದ ಮೂಡ್ಲುಪುರ ನಂದೀಶ್, ಮರಿಸ್ವಾಮಿ, ನಾಗೇಂದ್ರ, ಪ್ರವೀಣ್, ಬಿ.ಕೆ.ರವಿಕುಮಾರ್, ಆಲೂರು ಮಲ್ಲು, ಆಲೂರು ನಾಗೇಂದ್ರ, ಸಿ.ಎಂ. ಕೃಷ್ಣಮೂರ್ತಿ, ರತ್ನಮ್ಮ ಬಸವರಾಜು ಇತರರು ಕಾರ್ಯಕ್ರಮದಲ್ಲಿ ಇದ್ದರು.

ಸಂಸತ್ ಭವನ ಬಸವಣ್ಣನವರ ಪರಿಕಲ್ಪನೆ


ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಸವೇಶ್ವರರ ಭಾವಚಿತ್ರಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಪುಷ್ಪ ನಮನ ಸಲ್ಲಿಸಿದರು.

ಚಾಮರಾಜನಗರ, ಮೇ 10–ಸಮಾನತೆಯ ಹರಿಕಾರ ಬಸವಣ್ಣನವರು 12ನೇ ಶತಮಾನದಲ್ಲೇ ಜಾತಿ ಪದ್ಧತಿ ಹಾಗೂ ಮೌಢ್ಯ, ಕಂದಾಚಾರಗಳ ವಿರುದ್ಧ ಹೋರಾಟ ನಡೆಸಿದ ಮಹಾಪುರುಷರು ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಬಣ್ಣಿಸಿದರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ಇಂದಿನ ಸಂಸತ್ ಭವನ ಹಾಗೂ ವಿಧಾನಸೌಧ ಅಂದು ಬಸವಣ್ಣ ಹಾಕಿಕೊಟ್ಟ ಪರಿಕಲ್ಪನೆಯಾಗಿದೆ. ಅನುಭವ ಮಂಟಪವನ್ನು ಸ್ಥಾಪಿಸಿ, ಎಲ್ಲಾ ವರ್ಗಗಳಿಗೆ ಅವಕಾಶ ಕಲ್ಪಿಸಿಕೊಡುವ ಮೂಲಕ ಸಮ ಸಮಾಜ ನಿರ್ಮಾಣಕ್ಕೆ ಶ್ರಮಿಸಿದರು ಎಂದರು.

ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿ, ಬಸವಣ್ಣನವರು ಸ್ತ್ರೀ ಸಮಾನತೆ ಮತ್ತು ಮೌಢ್ಯದ ವಿರುದ್ಧ ಜಾಗೃತಿ ಮೂಡಿಸಿದ ಬಸವಾದಿ ಶರಣರು ತಮ್ಮ ವಚನಗಳ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಶ್ರಮಿಸಿದ್ದರು. ಸರಳವಾಗಿ ಎಲ್ಲರಿಗೂ ಅರ್ಥವಾಗಿ ಮಾದರಿಯಲ್ಲಿ ವಚನಗಳನ್ನು ರಚಿಸಿ ಜನರಲ್ಲಿ ಧರ್ಮ ಜಾಗೃತಿ ಮೂಡಿಸಿದರು. ಅವರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸುವುದು ನಮ್ಮೆಲ್ಲರ ಪುಣ್ಯ ಎಂದು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಪ್ರಧಾನ ಕಾರ್ಯದರ್ಶಿಗಳಾದ ಚಿಕ್ಕಮಹದೇವ್, ಆರ್.ಮಹದೇವ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಮದ್ ಅಸ್ಗರ್, ಅರಕಲವಾಡಿ ಗುರುಸ್ವಾಮಿ, ಎಪಿಎಂಸಿ ಅಧ್ಯಕ್ಷ ಸೋಮೇಶ್, ನಿರ್ದೇಶಕ ಆಲೂರು ಪ್ರದೀಪ್, ಮುಖಂಡರಾದ ಅಯ್ಯನಪುರ ಶಿವಕುಮಾರ್, ನಾಗವಳ್ಳಿ ನಾಗಯ್ಯ, ಸೈಯದ್ ರಫಿ, ಶಿವಮೂರ್ತಿ, ಕಾಗಲವಾಡಿ ಚಂದ್ರು, ಚಾಮುಲ್ ನಿರ್ದೇಶಕ ರೇವಣ್ಣ, ಜಿಲ್ಲಾ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಅಫ್ಜಲ್ ಷರೀಫ್, ಸುಹೇಲ್ ಆಲಿಖಾನ್, ಸೇವಾದಳದ ಅಧ್ಯಕ್ಷ ಹೊಂಗನೂರು ಜಯರಾಜ್, ರವಿಗೌಡ, ಹೆಬ್ಬಸೂರು ರಂಗಸ್ವಾಮಿ, ವೀರಭದ್ರಸ್ವಾಮಿ, ಚಂಗುಮಣಿ, ಮಹದೇವಸ್ವಾಮಿ, ಪಿ.ಶೇಖರ್, ರೂಪೇಶ್, ಸಿ.ಕೆ.ರವಿಕುಮಾರ್, ಕುಮಾರ್, ಪೃಥ್ವಿ ಇದ್ದರು.

ಇಂಡಿಗನತ್ತ ಗ್ರಾಮಸ್ಥರೊಂದಿಗೆ ರೈತ ಸಂಘ ಸಭೆ

ಚಾಮರಾಜನಗರ: ಏ.26ರಂದು ನಡೆದ ಲೋಕಸಭಾ ಚುನಾವಣೆ ಮತದಾನದ ವೇಳೆ ಮಹದೇಶ್ವರಬೆಟ್ಟದ ಇಂಡಿಗನತ್ತ ಗ್ರಾಮದಲ್ಲಿ ನಡೆದ ಘರ್ಷಣೆ ಹಿನ್ನೆಲೆಯಲ್ಲಿ ಗ್ರಾಮಸ್ಥರೊಂದಿಗೆ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಮುಖಂಡರು ಸಭೆ ನಡೆಸಿದರು.

ಹೊನ್ನೂರು ಪ್ರಕಾಶ್ ಅಧ್ಯಕ್ಷತೆಯಲ್ಲಿ ನಡೆದ ಗ್ರಾಮಸ್ಥರು ಹಾಗೂ ರೈತ ಸಂಘದ ಸದಸ್ಯರ ಸಭೆಯಲ್ಲಿ ಮತದಾನದ ದಿನ ನಡೆದ ಘರ್ಷಣೆ, ಕಾನೂನು ಹೋರಾಟ, ಗ್ರಾಮದಲ್ಲಿ ಶಾಂತಿ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಘರ್ಷಣೆ ಪ್ರಕರಣದಲ್ಲಿ ತಲೆಮರೆಸಿಕೊಂಡಿರುವ ಆರೋಪಿಗಳು ಪೊಲೀಸರ ಮುಂದೆ ಹಾಜರಾಗುವಂತೆ ಮನವರಿಗೆ ಮಾಡುವುದು, ಗ್ರಾಮಕ್ಕೆ ಮೂಲಸೌಕರ್ಯ ಕಲ್ಪಿಸುವ ಸಂಬಂಧ ಜಿಲ್ಲಾಡಳಿತ ಮತ್ತು ಚುನಾಯಿತ ಜನಪ್ರತಿನಿಧಿಗಳೊಂದಿಗೆ ಚರ್ಚಿಸುವ ಸಂಬಂಧ ತೀರ್ಮಾನಿಸಲಾಯಿತು. ಮತಗಟ್ಟೆ ಧ್ವಂಸ, ಹಲ್ಲೆ ಪ್ರಕರಣದಿಂದ ಇಂಡಿಗನತ್ತ ಹಾಗೂ ಮೆಂದಾರೆ ಗ್ರಾಮಸ್ಥರ ನಡುವೆ ಉಂಟಾಗಿರುವ ವೈಮನಸ್ಸನ್ನು ಸರಿಪಡಿಸುವುದು, ಪ್ರಕರಣ ವಾಪಸ್ ಪಡೆಯಲು ಸರ್ಕಾರಕ್ಕೆ ಮನವಿ ಮಾಡಲು ಚರ್ಚಿಸಲಾಯಿತು.

ತೆಲಂಗಾಣದ ಬಿಜೆಪಿ ವೀಕ್ಷಕರಾಗಿ ನಿಜಗುಣರಾಜು ನಿಯೋಜನೆ


ತೆಲಂಗಾಣದಲ್ಲಿ ಬಿಜೆಪಿ ಅಭ್ಯರ್ಥಿಗಳ ಪರ ನಿಜಗುಣರಾಜು ಪ್ರಚಾರ ನಡೆಸಿದರು.

ಚಾಮರಾಜನಗರ, ಮೇ 10–ಲೋಕಸಭಾ ಚುನಾವಣೆ ಪ್ರಚಾರ ದಕ್ಷಿಣ ರಾಜ್ಯಗಳಲ್ಲಿ ಭರ್ಜರಿಯಾಗಿ ನಡೆಯುತ್ತಿದ್ದು, ಬಿಜೆಪಿ ಕೇಂದ್ರ ಚುನಾವಣಾ ಸಮಿತಿ ಕಾಡಾ ಮಾಜಿ ಅಧ್ಯಕ್ಷ ಜಿ.ನಿಜಗುಣರಾಜು ಅವರನ್ನು ತೆಲಂಗಾಣದ ಚುನಾವಣೆ ವೀಕ್ಷಕರನ್ನಾಗಿ ನೇಮಕ ಮಾಡಿದೆ.

ಹೀಗಾಗಿ ನಿಜಗುಣರಾಜು 10 ದಿನಗಳಿಂದ ತೆಲಂಗಾಣದ ಹೈದರಾಬಾದ್ ಮತ್ತು ಸಿಂಕದರಾಬಾದ್ ಲೋಕಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳ ಪರ ಪ್ರಚಾರ ಮಾಡುತ್ತಿದ್ದಾರೆ. ಪಟ್ಟಣ ಹಾಗೂ ಹಳ್ಳಿಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಸಾಧನೆ ಕುರಿತು ಜನರಿಗೆ ತಿಳಿಸುವ ಜೊತೆಗೆ ಪಕ್ಷದ ಅಭ್ಯರ್ಥಿ ಮಾಧವಿ ಲತಾ ಪರವಾಗಿ ಕ್ಯಾಂಪೇನ್ ಮಾಡಿದ್ದಾರೆ.

ಪ್ರಚಾರ ಸಭೆಯಲ್ಲಿ ಕೇಂದ್ರದ ಸಚಿವ ಕಿಸಾನ್ ರೆಡ್ಡಿ ಮತ್ತಿತರರು ಇದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಹೊಸ ಮನೆಗಳು ಬಾಡಿಗೆ/ಭೋಗ್ಯಕ್ಕಿದೆ
ಸ್ಪೀಚ್ & ಹಿಯರಿಂಗ್ ಪಕ್ಕ, ಬೋಗಾದಿ ರಸ್ತೆ, 2 BHK, 3 BHK
9945049415
9844163411

WANTED
M.S.W Male / Female - 1 Post
M.A. Psyhology
Male / Female -1 post
B.Sc, B.Com., B.A.,
Male/Female-1 Post
GNM (Nurse)
Male /Female - 1 Post
Cook Female - 2 Post
9535528648
9844764614

HOUSE FOR SALE
20X30 3 FLOOR Building 87 Lakhs Slightly Negotiable S/F Site E/D Near Marimallappa Compound Vijayangar 4th Stage 2nd Phase Mysore
8073723223

SITE FOR SALE
30x40, 30x50, MUDA Approved Layout, Very good Location, Near H.D. Kote Ring Road junction. Call:
9483358399
6381779015

ತಕ್ಷಣ ಬೇಕಾಗಿದ್ದಾರೆ
WANTED
Sri Sapthagiri Builder & Developers
1) Marketing Executive-2 Nos
2) Tele Callers - 2 Nos
3) Driver - 2 Nos ಸಂಪರ್ಕಿಸಿ:
Contact: 9606977963
9591828444/9731667555

ಶ್ರೀ ಗೌರಿಶಂಕರ ಟ್ರಾವೆಲ್ಸ್
5-6-2024 (11 ದಿನ): ಅಯೋಧ್ಯೆ, ನೇಪಾಳ್, ಕಠ್ಮಂಡು, ಪೋಕ್ರ, ಮುಕ್ತಿನಾಥ್, ಲುಂಬಿನಿ, ಮನೋಕಾಮನ, ಕಾಶಿ, ಇತ್ಯಾದಿ.
24-7-2024 (4 ದಿನ): ಭೀಮಾ ಶಂಕರ, ಶಿರಡಿ, ಘೃಷ್ಣೇಶ್ವರ, ಎಲ್ಲೋರ, ತ್ರ್ಯಂಬಕೇಶ್ವರ ಇತ್ಯಾದಿ.
21-8-24 (3 ದಿನ): ಇಂದೋರ್, ಉಜ್ಜಯಿನಿ, ಓಂಕಾರೇಶ್ವರ
(ವಿಮಾನ, ಬಸ್, ಊಟ, ರೂಂ)
Mob: 9620002114

SITE FOR SALE
34X60, 189 SQMETER N/E CORNER CHAMUNDESHWARI RAILY LAYOUT Opp. Vikrant Tyres Direct Owner Only
9448916053

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8880558064

ಬೇಕಾಗಿದ್ದಾರೆ
SSLC/PUC ಆಗಿರುವ ಮಹಿಳೆಯರು ರಿಸೆಪ್ಷನಿಸ್ಟ್, ಟೆಲಿಕಾಲರ್ ಕೌನ್ಸಿಲರ್ ಹುದ್ದೆಗೆ ಬೇಕಾಗಿದ್ದಾರೆ. ಉಚಿತ ಊಟ ವಸತಿಯೊಂದಿಗೆ ಸಂಬಳ ಕೊಡಲಾಗುವುದು ಆಶ್ರಮದಲ್ಲಿ ಉಳಿದುಕೊಂಡು ಕೆಲಸ ಮಾಡುವವರಿಗೆ ಮೊದಲು ಆದ್ಯತೆ ಸಂಪರ್ಕಿಸಿ
6366631403
6366631307

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸಂಪರ್ಕಿಸಿ:
ಶ್ರೀ ವಿನಾಯಕ ಟ್ರೇಡರ್ಸ್
ಹೆಬ್ಬಾಳ್, ಮೈಸೂರು–570016
ಸ್ಥಳೀಯರಿಗೆ ಮೊದಲ ಆದ್ಯತೆ
8880883339
9901212321

30x40 ಪೂರ್ವದಿಕ್ಕಿನ DTCP 'A' ಖಾತೆ ಸೊಸೈಟಿ ಸೈಟ್ ಮಾರಾಟಕ್ಕಿದೆ
14 ಲಕ್ಷದ 80 ಸಾವಿರಗಳು ನಂಜುಂಡೇಶ್ವರ ನಗರ TVS ಫ್ಯಾಕ್ಟರಿ ಹತ್ತಿರ ಮೈಸೂರು
9972557534

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರನ್ನು, ಪಾರ್ಶ್ವವಾಯು ಪೀಡಿತರು, ಹಾಗೂ ಕೈಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿ ಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ, ವಸತಿ, ವೈದ್ಯಕೀಯ ಸೌಲಭ್ಯದೊಂದಿಗೆ ಇಚ್ಛೆವುಳ್ಳವರು ಸಂಪರ್ಕಿಸಿ
9110455297 | 9591557126

SITE FOR SALE
40X60, WEST FACE NEAR JSS LAYOUT 2ND STAGE T N PURA MAIN ROAD
9845799488

34X50 SITE FOR SALE
SITE NO.423, NORTH/F RAMABAI NAGAR RAILWAY LAYOUT NEAR J.P.NAGAR RING ROAD
PRICE : 4500 PER SQ.FT
8884133677

ಸೈಟ್ ಮಾರಾಟಕ್ಕೆ
(MUDA Approved)
30x50 West face ಸರ್ಕಾರಿ ನೌಕರರ ಕ್ಷೇಮಾಭಿವೃದ್ಧಿ ಸಂಘದ ಬಡಾವಣೆ, ವಿಜಯನಗರ 4ನೇ ಹಂತದ ನಂತರ, Rastrothana ಸ್ಕೂಲ್ ನಿಂದ ಕೇವಲ 400 ಮೀಟರ್.
Mob: 9986174154

FOR RENT
1100 sqft ಮೊದಲ ಮಹಡಿ ಬಾಡಿಗೆಗೆ ಇರುತ್ತದೆ. ಶಾರದಾದೇವಿನಗರ ಆರ್ಕಿಡ್ ಶಾಲೆ ಹತ್ತಿರ, ಮೈಸೂರು
9844775166

JANATHA TRUST
FREE BEAUTICIAN CLASS BASIC TO ADVANCED. NAIDUNAGAR, MYSORE
9380705968

ಸುವರ್ಣ ಯಾತ್ರ
1) ನೇಪಾಳ ಪಶುಪತಿನಾಥ ಆಯೋಧ್ಯ, ಮುಕ್ತಿನಾಥ, ಮನೋಕಮನ, ಕಠ್ಮಂಡು ಪೋಕ್ರ ಪ್ರವಾಸ 29–05–2024 – 9 ದಿನಗಳು
2) ಚಾರ್‌ಧಾಮ್ ಯಾತ್ರ, ಕೇದಾರ್‌ನಾಥ್, ಬದ್ರಿನಾಥ್, ಗಂಗೋತ್ರಿ, ಯಮುನೋತ್ರಿ, ಹರಿದ್ವಾರ್, ದೆಹಲಿ 13 ದಿನಗಳು – 7–6–24.
3) ಕಾಶಿ ವಿಶ್ವನಾಥ, ಬಾಬಾ ವೈದ್ಯನಾಥ್ ಪ್ರವಾಸ 7 ದಿನಗಳು – 24–5–24.
6360146483, 8660233673

Star Solar

Renewable Energy
JUST 19,499/- 200 Ltr
Easy EMI
7/15 Years Guarenty
Limited Period Offer
Old system Exchange offer available
Manufacturing : Belawadi Industrial Sub, Mysore
9945616293 / 9449966293

Site for Sale
40x60 - S/F site is for sale at "C" Block, Srinagar, Mysore.
Mob: 9448342593

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಬೇಕಾಗಿದ್ದಾರೆ
ಕಾಲೇಜ್ ಹಾಸ್ಟೇಲ್‌ನಲ್ಲಿ ಅಡುಗೆ ಮಾಡಲು (ಪುರುಷ) ಅಡುಗೆ ತಯಾರಕರು ಬೇಕಾಗಿದ್ದಾರೆ
ವಿಕ್ರಂ ಕಾಲೇಜ್ ಆಫ್ ನರ್ಸಿಂಗ್ ಗೋಕುಲಂ, ಮೈಸೂರು
8310846772, 9535096161

REPUTED HOTEL IN MYSURU REQUIRES FOLLOWING STAFF
F.O MANAGER-1
RECEPTIONIST - 1
HOTEL CASHIER -1
ACCOUNTANT -1
ROOM BOYS -3
8861360214

ಸೈಟ್ ಮಾರಾಟಕ್ಕಿದೆ
30x36 (1080 Sqft) N/F
ದ್ವಾರಕನಗರ ಶ್ರೀರಾಂಪುರ ರಿಂಗ್ ರಸ್ತೆ ಹತ್ತಿರ ಬೆಲೆ 46 ಲಕ್ಷ (ನೆಗೋಷಿಬಲ್)
9986331438

ಅಡುಗೆಯವರು ಬೇಕಾಗಿದ್ದಾರೆ
ಬೆಳಿಗ್ಗೆ ಸಮಯದಲ್ಲಿ ಮನೆಯಲ್ಲಿ ಅಡುಗೆ ಮಾಡಲು ಲಿಂಗಾಯತ ಮಹಿಳೆ ಬೇಕಾಗಿದ್ದಾರೆ. 4ನೇ ಹಂತ, ವಿಜಯನಗರ, ಬಸವರಾಜು ಸರ್ಕಲ್ ಹತ್ತಿರ, ಮೈಸೂರು
8310846772
8861953709

ಮನೆ ಮಾರಾಟಕ್ಕಿದೆ
ಜೆಪಿ ನಗರ ಪಕ್ಕದಲ್ಲಿರುವ ಮಾನಂದವಾಡಿ ಮುಖ್ಯ ರಸ್ತೆಗೆ ತಾಗಿಕೊಂಡಿರುವ ಪ್ರಕೃತಿ ಬಡಾವಣೆಯಲ್ಲಿ ಸುಸಜ್ಜಿತವಾದ 20x30 ಡ್ಯೂಪ್ಲೆಕ್ಸ್ ಹೊಸ ಮನೆ ಮಾರಾಟಕ್ಕಿದೆ. ನೇರ ಮಾಲೀಕರನ್ನು ಸಂಪರ್ಕಿಸಲು ಕರೆ ಮಾಡಿ.
7019188932

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8861401315

ಸುಗ್ಗಿ ರಿಯಲ್ ಎಸ್ಟೇಟ್
40x60 W/F
40 feet road,
ಜೆ.ಪಿ.ನಗರ Old,
ಆರ್.ಟಿ.ನಗರ, ಮೈಸೂರು
40x60 W/F
9945148025

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 7204494854

ಸಿಪಾಯಿ ಪ್ರಾಪರ್ಟೀಸ್, ಇಲವಾಲ
1) ಬ್ರಹ್ಮಾನಂದ ಸಾಗರ Muda Approved ಲೇಔಟ್ 30x50 N/W ಕಾರ್ನರ್ 30x40 East Fhases ಸೈಟ್
2) ಆಚಾರ್ಯ ವಿದ್ಯಾಕುಲ ಹಿಂಭಾಗ NJ Hospital ಹತ್ತಿರ ಭೂಮಿಕಾ ಗಾರ್ಡನ್ ಸಿಟಿಯಲ್ಲಿ 30x40 East Phase ಸೈಟ್ 40x60 East Phase ಸೈಟ್ ಮಾರಾಟಕ್ಕಿವೆ.
ಸಂಪರ್ಕಿಸಿ: ನಂಜುಂಡಸ್ವಾಮಿ ಹೆಚ್.ಎಸ್ (ಮಾಜಿ ಸೈನಿಕರು)
9483862050, 9353650903

ಮನೆ ಮಾರಾಟಕ್ಕಿದೆ
KBH ನಿಸರ್ಗ ಬಡಾವಣೆ ಇಲವಾಲ 3ನೇ ಬ್ಲಾಕ್‌ನಲ್ಲಿ MIG 25935/50ರಲ್ಲಿ 2 ರೂಂ ಹಾಲ್ ಫುಲ್ ಫರ್ನಿಸಿಂಗ್ ಮನೆ
7259352426
8951195562

DTCP SITES FOR SALE
DTCP Sites With RERA Near Jayapura, H.D. Kote Road, Mysore.
9590491194, 9606783264

Required for Pvt. Ltd. Company
1) Accountant: Degree / Diploma Holder Having experience of 1-Year / Fresher For the Accountant Job Salary:1,80,000 to 2,20,000 P.A.
2) Manager: ITI / Diploma Holder (Male) Salary: 1,20,000 to 1,80,000 P.A.
Kuvempunagara, Mysore
Phone: 8184000444
Email: maruthitubewells@gmail.com
Apply on or before 12/05/2024

DTCP Sites for Sale
Amruthaa Nagar, Off Jayapura, HD Kote Main Road
30x40, 30x50 & Odd sites
RERA No. PRM/KA/RERA/1268/378/PR/200219/003298
7829331999, 6364382399

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

V-GUARD

10 ವರ್ಷಗಳ ವ್ಯಾರಂಟಿ
Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ತಕ್ಷಣ ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಕ್ಯಾಷಿಯರ್ & ಹೆಲ್ಪರ್ ಹುಡುಗರು & ಹುಡುಗಿಯರು ಬೇಕಾಗಿದ್ದಾರೆ. ಮತ್ತು ಮ್ಯಾನೇಜರ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
6364748485

SALE MUDA KHATA SITE
East Facing Corner Site 8.7 Mtrs x 12 mtrs Jnanabharathi Layout Dadada Halli, State Highway Raod Behind AIrport, Direct Owner Price : 35 Lacs
9342123373

ಸಾಲ / LOANS
* House / Site Purchase
* Construction Loan
* House / Site Mortgage
Loans for MUDA, Corporation & Revenue Property.
77605-98705

WANTED
SALES EXECUTIVE wanted girls (SSLC - PUC) Vishweshwaranagar, Mysore (Sterling theatre). *Contact:*
Mob: 8095149172

HOUSE FOR SALE
20x30, two floor (G+0.5) new house, Vijayanagar 4th Stage, 2nd Phase. Price: Rs. 57 Lakhs.
Mob: 9738787333

HOUSE FOR SALE
20x40 Duplex house for sale in Koppalur near JP Nagar Ring Road 20x30 site for sale in Bogadi 2nd Stage. Contact:
Mob: 9880344263

20x30 ಡ್ಯೂಪ್ಲೆಕ್ಸ್ ಹೊಸ ಮನೆ 3 ಬೆಡ್ ರೂಂ, 2 ಇಟಾಲಿಯನ್ ಕಿಚನ್ ರೂಂ, ಆಲ್ ಟೀಕ್‌ವುಡ್, ಗ್ರಾನೈಟ್, ವಾಸ್ತು ಪ್ರಕಾರವಾಗಿರುವ ಮನೆ ವಿಜಯನಗರ 4ನೇ ಹಂತ, 2ನೇ ಘಟ್ಟ, ಮರಿಮಲ್ಲಪ್ಪ ಸ್ಕೂಲ್ ಹತ್ತಿರ.
9342289895, 9342593154

JNANAJYOTI VIDYALAYA
(High School) Beerihundi, Mysore (TQ) Wanted Teachers for HM ENGLISH, HINDI, CBZ, NST or Montessori Teachers Contact
9845390377
8197057626

COMMERCIAL SITE FOR SALE
1822 SQFT TILAK NAGAR MAIN ROAD MYSORE
9141068565

SITE FOR SALE
20x30, MUDA allotted sites for sale Vijayanagar 4th Stage. Price: Rs. 49 Lakhs (negotiable). Contact:
Mob: 9738787333

ಹೆಲ್ತ್ ಕೇರ್ ತರಬೇತಿ
SSLC / PUC ಆದವರಿಗೆ ಡಿಪ್ಲೊಮೋ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸೆಂಟ್ ಮೇರೀಸ್ ಆಸ್ಪತ್ರೆ, ಸಿಲ್ಕ್ ಫ್ಯಾಕ್ಟರಿ ಸರ್ಕಲ್, NIE ಕಾಲೇಜ್ ಪಕ್ಕ, ಮೈಸೂರು.
Mob: 9916908454

Commercial Rent / Lease
Available vacant land for rent / lease 280 ft x 100 ft = 28000 sft corner commercial site on 60 ft double road, adjacent to Hebbal Ring Road, Hebbal, Mysore, suitable for Garden restaurant, function hall, show rooms, service centre etc. whole or part area is also considered. Contact: Kushal
9663141767, 9482959493

FOR SALE
Starts From 10 Lakhs
1. 20x30, 30x40, 30x50 Near Defence Apartments, HD Kote Road
2. 30x50 Near Varuna Lake
3. 2&3 BHK Flats at Ramkrishna Nagar
4. 30x40 House, Kuvempu Ngr Depo
5. 40x72, 35x45 House Vidyaranyapuram
6. 20x30 House Giridarshini Layout
7. 100x100 Farm House @ KRS Back Water Attach 20L
PRAKRUTHI PROPERTIES
95386 90359, 90359 90359

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬಾಡಿಗೆಗೆ
ಶ್ರೀರಾಂಪುರ 2ನೇ ಹಂತ ನಾಯ್ಡು ಸ್ಟೋರ್ ಹತ್ತಿರ 5ನೇ ಕ್ರಾಸ್
20x30 2BHK
9880962578

ಬಾಡಿಗೆಗೆ
PG ಅಥವಾ ಯಾವುದೇ ಸಾಫ್ಟ್‌ವೇರ್ ಇನ್ನಿತರ ಆಫೀಸ್‌ಗಳಿಗೆ 1ನೇ ಹಾಗೂ 2ನೇ ಮಹಡಿಯಲ್ಲಿ 3000 SFft ಸ್ಥಳಾವಕಾಶ ಕುವೆಂಪುನಗರ ನೃಪತುಂಗ ರಸ್ತೆ # 666, ಮನೋಜ್ ಕಾಂಪ್ಲೆಕ್ಸ್, ಎಂ.ಬ್ಲಾಕ್‌ನಲ್ಲಿ ಲಭ್ಯವಿದೆ.
9448075383
9844242155

ವಿವಾಹ ಭಾಗ್ಯ
MRJ ಮ್ಯಾಟ್ರಿಮೋನಿ
ಎಲ್ಲಾ ಜಾತಿಯ ವಧು / ವರರಿಗಾಗಿ ಸಂಪರ್ಕಿಸಿ:
1) ಮೊದಲನೆ ಮದುವೆ
2) ಎರಡನೆ ಮದುವೆ
3) ವಿಧವೆ / ವಿದುರರು
FREE REGISTRATION
8904890413

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡಿ ಪ್ರತಿ ತಿಂಗಳಿಗೆ ರೂ. 15,000 ಸಂಪಾದಿಸಿ.
Mob: 9731891409

ಅರ್ಚಕರು ಬೇಕಾಗಿದ್ದಾರೆ
ಮೈಸೂರಿನ ಗೋಕುಲಂ 1ನೇ ಹಂತದಲ್ಲಿರುವ ಶ್ರೀ ಶನೇಶ್ವರಸ್ವಾಮಿ ದೇವಸ್ಥಾನದಲ್ಲಿ ಪೂಜಾ ವಿಧಿಗಳನ್ನು ಸಲ್ಲಿಸಲು 5 ರಿಂದ 6 ವರ್ಷಗಳ ಅನುಭವವಿರುವ ಅಯ್ಯಂಗಾರ್ ಅಥವಾ ಬ್ರಾಹ್ಮಣ ಅರ್ಚಕರು 50 ವರ್ಷ ಮೇಲ್ಪಟ್ಟ ಅವಿವಾಹಿತರು ತಿಂಗಳಿಗೆ ಸಂಬಳ 6500/– ರೂ. ಸಂಪರ್ಕಿಸುವ ಸಮಯ ಬೆಳಿಗ್ಗೆ 8 ರಿಂದ 11 ಗಂಟೆ, ಸಂಜೆ 6 ರಿಂದ 8 ಗಂಟೆ

SK CONSTRUCTION
ಹೊಸ ಮನೆ ಕಟ್ಟಬೇಕೆ ಚಿಂತೇ ಬೇಡ ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Engineer Plan, 3D Elevation ಸಹಿತ ನಾವೇ ಲೋನ್ ಮಾಡಿ ನಿಮ್ಮ ಕನಸಿನ ಮನೆ ಕಟ್ಟಿ ಕೊಡುತ್ತೇವೆ.
9620528490

100% NEEM WOOD PLYWOOD & DOORS
@ FACTORY DEPOT RATES
Neem Bond Platinum™ 10yrs WARRANTY
CALL 99012 91267 98454 26862

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ/ನಾಯಕ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ:
(II Marriages ALso)
9343175000

ಮನೆ ಬಾಡಿಗೆಗೆ ಇದೆ
ರಾಜಶೇಖರ ಆಸ್ಪತ್ರೆ ಹಿಂಭಾಗ ಮನೆ ನಂ.172, ರಾಗಿಮಿಲ್ 2ನೇ ಅಡ್ಡ ರಸ್ತೆ, ಮೊದಲನೇ ಮಹಡಿ, 3 ಬೆಡ್ ರೂಂ ಹಾಲ್, ಅಡುಗೆ ಮನೆ, ಊಟದ ಹಾಲ್, ದೇವರ ಮನೆ, ಸ್ನಾನದ ಮನೆ, ಸೋಲಾರ್, ಗೀಸರ್, ನೀರಿನ ಸೌಕರ್ಯ ಉತ್ತರ ಬಾಗಿಲು
7975023201
7815812948

SBIT TRAVELS
Group Departures with Best Deals - 2024
BHUTAN 6N7D | 57,800 May- 25th | June: 25th | July 5th 25th
AUSTRALIA 10N11D | 3,26,000 JUNE 12th
SINGAPORE & MALAYSIA 6N7D | 1,27,000/- May- 22rd
Mob: 9342524127 | 9742524127
(Saraswathipuram, Mysuru)

40X60 SITE FOR SALE
SITE NO.12365 NEAR RING ROAD VIJAYANAGARA 4TH STAGE
PRICE : 1.50 CRORE
SOUTH FACING OPP. PARK
7899214181

SITE FOR SALE
30X40 East facing Silver Springs Layout Bogadi road Martikayathanahalli
9035379769

ಕಳೆದಿದೆ
ಮೈಸೂರು ತಾ. ವರುಣ ಹೋ. ಚಿಕ್ಕಹಳ್ಳಿ ಗ್ರಾಮಕ್ಕೆ ಸೇರಿರುವ ಖಾತಾ ಜಂಜರ ನಂ. 801 ಅಸೆಸ್ಮೆಂಟ್ ನಂ.669 ನಿವೇಶನ ಸಂಖ್ಯೆ 296ರ ಸ್ವತ್ತಿನ ಅಸಲು ಪತ್ರವು ಕಳೆದು ಹೋಗಿರುತ್ತದೆ ಯಾರಿಗಾದರೂ ಸಿಕ್ಕಿದಲ್ಲಿ ಈ ನಂಬರಿಗೆ ಕರೆ ಮಾಡಿ
9880980271

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದ ಟಿವಿಎಸ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು ವಯೋಮಿತಿ : 45 ವರ್ಷದ ಒಳಗೆ ESI & PF ಊಟ ತಿಂಡಿ ವಸತಿ ಸೌಲಭ್ಯವಿರುತ್ತದೆ.
9620777819
9620667819

ಬೇಕಾಗಿದ್ದಾರೆ
ಅನುಭವವುಳ್ಳ Male and Female ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. Two wheeler must contact number
9901080314

SITE FOR SALE 30X40
KHB, NISARGA LAYOUT ILWALA 3RD BLOCK NORTH FACING CONTACT
7619328883

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ತಾಂಡ್ಯ ಇಂಡಸ್ಟ್ರಿಯಲ್ ಏರಿಯಾದ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು ಸಂಬಳ : 20000+W/o
9620667819
9880727819

MUDA SITE FOR SALE
30X50 SOUTH FACE NEAR RAINBOW SCHOOL BOGADI-GADDIGE ROAD, MYSURU
8151977115

HOUSE FOR SALE
30X40 WEST FACING NEW HOUSE FOR SALE, 3 BHK FULLY FURNISHED WITH BOREWELL, KUBERANANDA SAGARA, YELWALA , MYSORE
9513330007

ವಧು–ವರರ ಅನ್ವೇಷಣೆ
ನಮ್ಮಲ್ಲಿ ಎಲ್ಲಾ ಜಾತಿಯ ವಧು–ವರರು, ವಿಚ್ಛೇದಿತರು ವಿಧುರರು–ವಿಧವೆಯರು ಸಂಪರ್ಕಿಸಿ
8105747339

ಬೇಕಾಗಿದ್ದಾರೆ
ಗೌಡ್ರು ಪೋರ್ಕ್ ಹೋಟೆಲ್ ಹಿನಕಲ್ ಮೈಸೂರು ಇಲ್ಲಿ ಕೆಲಸ ಮಾಡಲು ಸಪ್ಲೈಯರ್ ಕಂ ಕ್ಲೀನರ್ ಬೇಕಾಗಿದ್ದಾರೆ.
9886181222

ನಿವೇಶನ ಮಾರಾಟಕ್ಕೆ ಇದೆ
ಉದ್ದ ಅಗಲ 40x60 ಪಶ್ಚಿಮ ದಿಕ್ಕಿಗೆ 80 ಅಡಿ ಮುಖ್ಯ ರಸ್ತೆ MUDA ಹರಾಜಿನ ಕಾರ್ನರ್ ನಿವೇಶನ ವಸಂತನಗರ ಬನ್ನೂರು ಮುಖ್ಯ ರಸ್ತೆ, ಚದರ ಅಡಿಗೆ 7000/– ನೆಗೋಷಿಬಲ್ ಇದೆ
8861139197

ಅನುಬಂಧ ಮ್ಯಾರೇಜಸ್
ವಧು–ವರರನ್ನು ಹುಡುಕಲು ಸಹಾಯ ಬೇಕೆ? ನಮಗೆ ಕರೆ ಮಾಡಿ
6361740552
ನಮ್ಮ ಸಂಸ್ಥೆಗೆ ಕೆಲಸ ಮಾಡಲು ವಿದ್ಯಾವಂತ ಯುವತಿಯರು ಬೇಕಾಗಿದ್ದಾರೆ ಆಕರ್ಷಕ ಸಂಬಳ

ಹೊಸ ಮನೆ ಹಾಗೂ ನಿವೇಶನ ಮಾರಾಟಕ್ಕಿದೆ
30x40 Ground & First Floor, North Face, ಐಶ್ವರ್ಯ ಬಡಾವಣೆ (SS Layout, J.P.Nagar)
40x60 Site West Face ಹೆರಿಟೇಜ್ ನಗರ, ಮೈಸೂರು
9448271349

ಮನೆ ಮಾರಾಟಕ್ಕಿದೆ ಸೈಟುಗಳು ಮಾರಾಟಕ್ಕಿವೆ ಮೂಡಾ ಅಪ್ರೂವ್ಡ್
ಶ್ರೀನಗರ ಹಿಂಭಾಗ ಮತ್ತು ಶ್ರೀರಾಂಪುರ ರಿಂಗ್ ರೋಡ್, ಮೈಸೂರು
8050345574

ಮುಡಾ ಅಪ್ರೂವ್ಡ್ ಸೈಟ್ ಮಾರಾಟಕ್ಕಿದೆ
ಬ್ರಾಹ್ಮಿನ್ಸ್ ಲೇಔಟ್ A ಬ್ಲಾಕ್ 60 ಅಡಿ ರಸ್ತೆ, (ಪೂ.ಪ. 46 ಅಡಿ, ದ.ಉ 127 ಅಡಿ) 2 ವಿಸ್ತೀರ್ಣ 2900, ಸ್ಕ್ವೇರ್ ಫೀಟ್, ಚದರ ಅಡಿಗೆ 1950
8618644886
9880280299

ಬೇಕಾಗಿದ್ದಾರೆ
ಮೈಸೂರಿನಲ್ಲಿರುವ ಪ್ರತಿಷ್ಠಿತ ಆಸ್ಪತ್ರೆಯ ಕ್ಯಾಂಟೀನ್ ಮತ್ತು ಹೊರಟರಿಯಲ್ಲಿ ಕೆಲಸ ಮಾಡಲು, ಇಂಗ್ಲೀಷ್ ಮತ್ತು ಕನ್ನಡ ಓದಲು, ಬರೆಯಲು SSLC/PUC ಪಾಸ್ ಫೇಲ್ ಆದ ಹುಡುಗರು ಮತ್ತು ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ. ಗ್ರೈಂಡರ್ ಕೆಲಸದವರು ಮತ್ತು ದೋಸೆ ಭಟ್ಟರು ಬೇಕಾಗಿರುತ್ತಾರೆ. Assistant Manager, Supervisors, Desk Cordinators, Stewards, Washing, Cooking and House Keeping ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
ಪಿ.ಎಫ್ ಮತ್ತು ಇ.ಎಸ್.ಐ ಹಾಗೂ ಊಟ ತಿಂಡಿ ಸೌಲಭ್ಯವಿರುತ್ತದೆ. ವಯಸ್ಸು 18 ತುಂಬಿರಬೇಕು. ಪ್ರತಿ ಶನಿವಾರ Interview ಇರುತ್ತದೆ. ಹೋಟೆಲ್ ಮ್ಯಾನೇಜ್‌ಮೆಂಟ್ ಮಾಡಿರುವವರಿಗೆ ಆವಕಾಶ
ವಿಳಾಸ: ಮೈಸೂರು
9845517927, 9740491192

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯದ ಪೆನ್‌ಡ್ರೈವ್ ಬಿಡುಗಡೆ, ಹಂಚಿಕೆಯಲ್ಲಿ

ಸರ್ಕಾರವಾಗಲೀ, ನಾನಾಗಲೀ, ಡಿ.ಕೆ.ಶಿವಕುಮಾರ್ ಭಾಗಿಯಾಗಿಲ್ಲ

- ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ
- ಈ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವ ಅಗತ್ಯವಿಲ್ಲ; ನಮ್ಮ ಪೊಲೀಸರು ಸಮರ್ಥರಿದ್ದಾರೆ
- ಏನೂ ಪಾತ್ರವಿಲ್ಲ ಎಂದ ಮೇಲೆ ನಿರೀಕ್ಷಣಾ ಜಾಮೀನು ಮೊರೆ ಹೋಗಿದ್ದೇಕೆ?



ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರಕರ್ತರೊಂದಿಗೆ ಮಾತನಾಡಿದರು.

ಮೈಸೂರು, ಮೇ 10(ಎಂಟಿವೈ)– ಸಂಸದ ಪ್ರಜ್ವಲ್ ರೇವಣ್ಣ ಭಾಗಿಯಾಗಿರುವ ಲೈಂಗಿಕ ಹಗರಣದ ವಿಡಿಯೋಗಳಿರುವ ಪೆನ್‌ಡ್ರೈವ್ ಹಂಚಿಕೆ ಪ್ರಕರಣದಲ್ಲಿ ರಾಜ್ಯ ಸರ್ಕಾರವಾಗಲೀ ಇಲ್ಲವೇ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾಗಿಯಾಗಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ಲೋಕಸಭಾ ಚುನಾವಣೆ ಬಳಿಕ ವಿಶ್ರಾಂತಿಗಾಗಿ ಕಳೆದ ಮೂರು ದಿನ ತಮಿಳುನಾಡಿನ ಊಟಿಯಲ್ಲಿ ತಂಗಿದ್ದ ಸಿಎಂ ಸಿದ್ದರಾಮಯ್ಯ ಶುಕ್ರವಾರ ಹೆಲಿಕಾಪ್ಟರ್‌ನಲ್ಲಿ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಿದರು. ಅಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಹಾಸನದ ಸಂಸದ ಪ್ರಜ್ವಲ್ ರೇವಣ್ಣ ಭಾಗಿಯಾಗಿರುವ ಲೈಂಗಿಕ ಹಗರಣದ ವಿಡಿಯೋ ಮತ್ತು ಫೋಟೋಗಳಿರುವ ಪೆನ್‌ಡ್ರೈವ್ ಬಿಡುಗಡೆ, ಹಂಚಿಕೆ ಪ್ರಕರಣದಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುತ್ತಿದೆ ಎಂದು ಜೆಡಿಎಸ್ ಮಾಡುತ್ತಿರುವ ಆರೋಪದಲ್ಲಿ ಯಾವುದೇ ಹುರುಳಿಲ್ಲ. ಈ ಪ್ರಕರಣದಲ್ಲಿ ಸರ್ಕಾರವಾಗಲೀ, ನಾನಾಗಲೀ, ಡಿ.ಕೆ.ಶಿವಕುಮಾರ್ ಆಗಲೀ ಭಾಗಿಯಾಗಿಲ್ಲ. ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮಾಡಿರುವ ಆರೋಪ ಸತ್ಯಕ್ಕೆ ದೂರವಾಗಿದೆ ಎಂದು ಕಿಡಿಕಾರಿದರು.

ಕರ್ನಾಟಕದ ಪೊಲೀಸರ ಮೇಲೆ ನಂಬಿಕೆ ಇದೆ: ಪ್ರಜ್ವಲ್ ರೇವಣ್ಣ ಪ್ರಕರಣದ ತನಿಖೆಗೆ ಎಸ್‌ಐಟಿಯನ್ನು ರಚಿಸಲಾಗಿದೆ. ನಮಗೆ ಕರ್ನಾಟಕದ ಪೊಲೀಸರ ಮೇಲೆ ಅಪಾರವಾದ ನಂಬಿಕೆಯಿದೆ. ಪ್ರಜ್ವಲ್ ರೇವಣ್ಣ ಪ್ರಕರಣವನ್ನು ಸಿಬಿಐಗೆ ವಹಿಸುವ ಅಗತ್ಯವಿಲ್ಲ. ನಮ್ಮವರೇ ಕಾನೂನು ರೀತ್ಯ ತನಿಖೆ ನಡೆಸಲಿದ್ದಾರೆ. ಪ್ರಕರಣದ ಸತ್ಯಾಸತ್ಯತೆಯನ್ನು ಬಯಲು ಮಾಡುವ ಶಕ್ತಿ ರಾಜ್ಯ ಪೊಲೀಸರಿಗೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಿಬಿಐ ಮೇಲೆ ಪ್ರೀತಿ ಹುಟ್ಟಿದೆ: ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದಲ್ಲಿ ಜೆಡಿಎಸ್ ನಾಯಕರು ಪ್ರಜ್ವಲ್ ರೇವಣ್ಣ ಪ್ರಕರಣವನ್ನು ಸಿಬಿಐಗೆ ವಹಿಸುವಂತೆ ರಾಜ್ಯಪಾಲರಿಗೆ ಮನವಿ ಸಲ್ಲಿಸಿರುವುದಕ್ಕೆ ಪ್ರತಿಕ್ರಿಯಿಸಿದ ಸಿಎಂ ಸಿದ್ದರಾಮಯ್ಯ, ಜೆಡಿಎಸ್ ನಾಯಕರಿಗೆ ಕರ್ನಾಟಕ ಪೊಲೀಸರ ಮೇಲೆ ನಂಬಿಕೆ ಇಲ್ವಾ?. ಈ ಹಿಂದೆ ಬಿಜೆಪಿಯವರು ಸಿಬಿಐ ಸಂಸ್ಥೆಯನ್ನು ಕರಪ್ಷನ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್ ಎಂದಿದ್ದರು. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಚೋರ್ ಬಚಾವೋ ಸಂಸ್ಥೆ ಎಂದು ಹೇಳಿದ್ದರು. ಈಗ ಸಿಬಿಐ ಮೇಲೆ ಪ್ರೀತಿ ಬಂತಾ?. ನನಗೆ ಸಿಬಿಐ ಮೇಲೆ ವಿಶ್ವಾಸವಿದೆ. ಆದರೆ, ನಮ್ಮ ಪೊಲೀಸರ ಬಗ್ಗೆಯೂ ನಂಬಿಕೆ ಇದೆ. ಅದಕ್ಕಾಗಿ ವಿಶೇಷ ತನಿಖಾ ತಂಡ ರಚನೆ ಮಾಡಿದ್ದೇವೆ ಎಂದು ತಿಳಿಸಿದರು.

ಬಿಜೆಪಿ ಕಾಲದಲ್ಲಿ ಒಂದು ಪ್ರಕರಣವನ್ನೂ ಸಿಬಿಐಗೆ ನೀಡಿಲ್ಲ: ರಾಜ್ಯದಲ್ಲಿ ಬಿಜೆಪಿಯವರು ಜನರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. 2013ರಿಂದ 2018ರವರೆಗೆ ನಾನು ಮುಖ್ಯಮಂತ್ರಿಯಾಗಿದ್ದಾಗ ಹಲವು ಪ್ರಕರಣವನ್ನು ಸಿಬಿಐಗೆ ವಹಿಸಿದ್ದೆ. ಆದರೆ, ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ಒಂದೇ ಒಂದು ಪ್ರಕರಣವನ್ನು ಸಿಬಿಐಗೆ ವಹಿಸಲಿಲ್ಲ. ನಮ್ಮ ಅವಧಿಯಲ್ಲಿ ಡಿ.ಕೆ.ರವಿ ಪ್ರಕರಣ, ಲಾಟರಿ ಪ್ರಕರಣ, ಸಚಿವ ಕೆ.ಜೆ.ಜಾರ್ಜ್ ಮೇಲಿನ ಆರೋಪ ಪ್ರಕರಣ, ಪರೇಶ್ ಮೇಸ್ತ ಪ್ರಕರಣಗಳನ್ನು ಸಿಬಿಐಗೆ ವಹಿಸಲಾಯಿತು. ಈ ಪ್ರಕರಣಗಳಲ್ಲಿ ಯಾರಿಗಾದರೂ ಶಿಕ್ಷೆಯಾಗಿದೆಯೇ ಎಂದು ಪ್ರಶ್ನಿಸಿದರು.

ಹಸ್ತಕ್ಷೇಪ ಮಾಡುವ ಜಾಯಮಾನ ನನ್ನದಲ್ಲ: ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ಹಗರಣ ಕುರಿತಂತೆ ಎಸ್‌ಐಟಿ ಮಾಡುವ ತನಿಖೆಯಲ್ಲಿ ಯಾವುದೇ ಕಾರಣಕ್ಕೂ ಹಸ್ತಕ್ಷೇಪ ಮಾಡುವುದಿಲ್ಲ. ನಾನು ಮುಖ್ಯಮಂತ್ರಿ ಆಗುವ ಮುನ್ನವೂ ಯಾವುದೇ ಒಂದು ಪ್ರಕರಣದಲ್ಲೂ ಕಾನೂನು ಉಲ್ಲಂಘಿಸಿ ಕ್ರಮ ಕೈಗೊಳ್ಳುವಂತೆ ಪೊಲೀಸರ ಮೇಲೆ ಒತ್ತಡ ಹೇರಿಲ್ಲ. ಮುಂದೆಯೂ ಒತ್ತಡ ಹಾಕುವುದಿಲ್ಲ. ಈಗ ಪೆನ್‌ಡ್ರೈವ್ ಪ್ರಕರಣದಲ್ಲೂ ಹಸ್ತಕ್ಷೇಪ ಮಾಡುವುದಿಲ್ಲ. ನನಗೆ ಎಸ್‌ಐಟಿ ಮೇಲೆ ವಿಶ್ವಾಸವಿದೆ. ಕಾನೂನು ರೀತ್ಯಾ ಅದು ಕಾರ್ಯ ನಿರ್ವಹಿಸುತ್ತದೆ ಎಂದರು.

ಅಂತಾರಾಷ್ಟ್ರೀಯ ಮಟ್ಟದ ವಿಚಾರಣೆ ಹೇಗೆ ಸಾಧ್ಯ: ಪೆನ್‌ಡ್ರೈವ್ ಪ್ರಕರಣದಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ತನಿಖೆ ಮಾಡಲು ಸಿಬಿಐನಿಂದ ಮಾತ್ರ ಸಾಧ್ಯ ಎಂಬ ಜೆಡಿಎಸ್ ನಾಯಕರ ಹೇಳಿಕೆಗೆ ಪ್ರತಿಕ್ರಿಯಿಸಿದ ಸಿಎಂ, ಈ ಪ್ರಕರಣದಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ತನಿಖೆ ಮಾಡಲು ಏನಿದೆ. ಕೇವಲ ಊಹಾಪೋಹ ಮಾತನಾಡಬಾರದು. ಎಲ್ಲಾ ಅಪರಾಧ ಪ್ರಕರಣಗಳ ತನಿಖೆ ಯಾರು ಮಾಡುತ್ತಾರೆ? ನಮ್ಮ ಪೊಲೀಸರಲ್ಲವೇ? ಅವರದ್ದೇ ವಿಶೇಷ ತನಿಖಾದಳ ರಚಿಸಿರುವುದಲ್ಲವೇ? ನಮ್ಮ ಪೊಲೀಸರನ್ನು ನಂಬಬೇಕಲ್ಲವೆ ಎಂದು ಪ್ರಶ್ನಿಸಿದರು.

ಸುಳ್ಳು ಪ್ರಕರಣವಾದರೆ ನಿರೀಕ್ಷಣಾ ಜಾಮೀನಿಗೆ ಯಾಕೆ ಅರ್ಜಿ ಸಲ್ಲಿಸಿದರು: ಮಾಜಿ ಸಚಿವ ಹೆಚ್.ಡಿ.ರೇವಣ್ಣ ಬಂಧನ ಪ್ರಕರಣದಲ್ಲೂ ರಾಜ್ಯ ಸರ್ಕಾರದ ಪಾತ್ರವಿಲ್ಲ. ರಾಜಕೀಯ ಉದ್ದೇಶದಿಂದ ಬಂಧಿಸಲಾಗಿದೆ ಎನ್ನುವುದು ತಪ್ಪು. ಅವರ ಮೇಲಿನ ಆರೋಪದಲ್ಲಿ ಹುರುಳೇ ಇಲ್ಲದಿದ್ದರೆ ನಿರೀಕ್ಷಣಾ ಜಾಮೀನು ಕೋರಿದ್ದೇಕೆ? ಅದು ಯಾಕೆ ತಿರಸ್ಕೃತವಾಯಿತು ಎಂದು ಪ್ರಶ್ನಿಸಿದರು.

ಎಸ್‌ಎಸ್‌ಎಲ್‌ಸಿಯಲ್ಲಿ ರಾಜ್ಯದಲ್ಲೇ ಪ್ರಥಮ ಸ್ಥಾನ ಗಳಿಸಿದ ಅಂಕಿತಾ ಬಸಪ್ಪ ಕೊನ್ನೂರಗೆ ಅಭಿನಂದಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ



ಮೈಸೂರು, ಮೇ 10(ಎಂಟಿವೈ)– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 625 ಅಂಕ ಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿರುವ ಬಾಗಲಕೋಟೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿನಿ ಅಂಕಿತಾ ಬಸಪ್ಪ ಕೊನ್ನೂರ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿನಂದಿಸಿದ್ದು, ಸರ್ಕಾರಿ ವಸತಿ ಶಾಲೆಗಳ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ರ್‍ಯಾಂಕ್ ಪಡೆದು ತೇರ್ಗಡೆಯಾಗುವಂತಾಗಬೇಕು ಎಂದು ಆಶಿಸಿದರು.


ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಎಸ್‌ಎಸ್‌ಎಲ್‌ಸಿಯಲ್ಲಿ ಮೈಸೂರು ಜಿಲ್ಲೆ ಮೊದಲ 5 ಸ್ಥಾನದೊಳಗೆ ಬರುವಂತೆ ಮಕ್ಕಳನ್ನು ಸಜ್ಜುಗೊಳಿಸುವಂತೆ ಸೂಚನೆ ನೀಡಿದ್ದೆ. ಈ ಬಾರಿ ಜಿಲ್ಲೆಯ ಫಲಿತಾಂಶ ಸುಧಾರಣೆ ಕಂಡಿದ್ದು, 7ನೇ ಸ್ಥಾನ ಲಭಿಸಿದೆ. ಮುಂದಿನ ವರ್ಷ ಫಲಿತಾಂಶ ಇನ್ನಷ್ಟು ಸುಧಾರಣೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸುತ್ತೇನೆ ಎಂದರು.

ಈ ಬಾರಿ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಬಾಗಲಕೋಟೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿನಿ ಅಂಕಿತಾ ಬಸಪ್ಪ ಕೊನ್ನೂರ 625ಕ್ಕೆ 625 ಅಂಕ ಪಡೆಯುವ ಮೂಲಕ ರಾಜ್ಯಕ್ಕೆ ಮೊದಲ ಸ್ಥಾನದಲ್ಲಿ ತೇರ್ಗಡೆಯಾಗಿರುವುದು ಸಂತೋಷ ತಂದಿದೆ. ಗ್ರಾಮೀಣ ಪ್ರದೇಶದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ರಾಜ್ಯದಲ್ಲಿ ಮೊರಾರ್ಜಿ ದೇಸಾಯಿ ಶಾಲೆಗಳನ್ನು ಸ್ಥಾಪಿಸಲಾಗಿದೆ. 1994ರಲ್ಲಿ ನಾನು ಹಣಕಾಸು ಸಚಿವನಾಗಿದ್ದಾಗ ಮೊರಾರ್ಜಿ ದೇಸಾಯಿ ವಸತಿ ಶಾಲೆ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗಿತ್ತು. ಆ ಸಂದರ್ಭದಲ್ಲಿ ದಲಿತ ಸಂಘರ್ಷ ಸಮಿತಿ (ಡಿಎಸ್‌ಎಸ್) ಮುಖಂಡರು, ಕಾರ್ಯಕರ್ತರು 'ನಮಗೆ ಹೆಂಡದ ಅಂಗಡಿ ಬೇಡ, ಸಾರಾಯಿ ಅಂಗಡಿ ಬೇಡ ವಸತಿ ಶಾಲೆ ಬೇಕು' ಎಂಬ ಘೋಷಣೆಯೊಂದಿಗೆ ಹೋರಾಟ ಮಾಡುತ್ತಿದ್ದರು. ನಾನು ಡಿಎಸ್‌ಎಸ್ ನೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಕಾರಣ, ಜೊತೆಗೆ ನಾನು ಗ್ರಾಮೀಣ ಪ್ರದೇಶದಿಂದ ಬಂದವನಾದ್ದರಿಂದ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶ ದಿಂದ ಮೊರಾರ್ಜಿ ವಸತಿ ಶಾಲೆಗಳನ್ನು ಸ್ಥಾಪಿಸಲಾಯಿತು. ಇಂದು ಹೋಬಳಿಗೆ ಒಂದರಂತೆ ರಾಜ್ಯದಲ್ಲಿ 900ಕ್ಕೂ ಹೆಚ್ಚು ಮೊರಾರ್ಜಿ ದೇಸಾಯಿ ವಸತಿ ಶಾಲೆ ಸ್ಥಾಪಿಸಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಕೆ.ಹರೀಶ್ ಗೌಡ, ಗಣೇಶ್ ಪ್ರಸಾದ್, ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ, ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಡಾ.ಪುಷ್ಪ ಅಮರ ನಾಥ್, ಮುಡಾ ಅಧ್ಯಕ್ಷ ಕೆ.ಮರೀಗೌಡ, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ ಕುಮಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.


ಹಿರಿಯ ಲೇಖಕ ಡಾ.ಡಿ.ಎಸ್.ಜಯಪ್ಪಗೌಡ ಅವರಿಗೆ ಮೈಸೂರಿನ ನಿವಾಸದಲ್ಲಿ ಬೆಂಗಳೂರಿನ ಕನ್ನಡ ಗೆಳೆಯರ ಬಳಗದ ವತಿಯಿಂದ 'ಡಾ.ಎಂ.ಚಿದಾನಂದಮೂರ್ತಿ ಕನ್ನಡ ಸಂಸ್ಕೃತಿ ಪ್ರಶಸ್ತಿ'ಯನ್ನು ಖ್ಯಾತ ಹಿರಿಯ ಕಾದಂಬರಿಕಾರರಾದ ಡಾ.ಎಸ್.ಎಲ್. ಭೈರಪ್ಪನವರು ಪ್ರದಾನ ಮಾಡಿದರು. ಹಿರಿಯ ಸಂಶೋಧಕರಾದ ಡಾ.ಆರ್ ಶೇಷಶಾಸ್ತ್ರಿ, ಸ.ರಾ.ಸುದರ್ಶನ, ಕ್ಯಾತನಹಳ್ಳಿ ರಾಮಣ್ಣ, ಬೆಂಗಳೂರಿನ ರಾ.ನಂ.ಚಂದ್ರಶೇಖರ, ರವಿಕುಮಾರ್, ಮಾ.ಚಂದ್ರಶೇಖರ, ಉಪೇಂದ್ರ ಡಾ.ಸ್ಮಿತಾ ರೆಡ್ಡಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಡಾ.ಸಂತೋಷ್ ಹಾನಗಲ್ಲ, ಶ್ರೀಮತಿ ಜಯಪ್ಪಗೌಡ ಮತ್ತಿತರರು ಉಪಸ್ಥಿತರಿದ್ದರು.


ಬಸವ ಜಯಂತಿ ಪ್ರಯುಕ್ತ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮೈಸೂರಿನಲ್ಲಿ ಶ್ರೀ ಬಸವೇಶ್ವರರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಎಸ್.ಸಿ.ಬಸವರಾಜು, ನಗರಪಾಲಿಕೆ ಮಾಜಿ ಸದಸ್ಯ ಲೋಕೇಶ್ ಪಿಯಾ, ಕಾಟೂರ್ ದೇವರಾಜು, ಎಸ್.ಆರ್.ರವಿ, ಸ್ಮರಣ್, ಮಹಾದೇವ್, ಕೃಷ್ಣ ಇಲವಾಲ, ವಸಂತ್, ಶೇಖರ್ ಮತ್ತಿತರರು ಉಪಸ್ಥಿತರಿದ್ದರು.


ವಿಶ್ವಗುರು ವಿಶ್ವಜ್ಯೋತಿ ಬಸವಣ್ಣನವರ ಜಯಂತಿಯ ಪ್ರಯುಕ್ತ ಅವರ ಪ್ರತಿಮೆಗೆ ಮೈಸೂರು ಭಾರತೀಯ ಜನತಾ ಪಾರ್ಟಿಯ ವತಿಯಿಂದ ನಗರಧ್ಯಕ್ಷ ಹಾಗೂ ಮಾಜಿ ಶಾಸಕ ಎಲ್. ನಾಗೇಂದ್ರ ಅವರು ಮಾಲಾರ್ಪಣೆಯೊಂದಿಗೆ ಪುಷ್ಪಾರ್ಚನೆ ಮಾಡಿದರು. ಈ ವೇಳೆ ಜಿಲ್ಲಾಧ್ಯಕ್ಷ ಎಲ್.ಆರ್. ಮಹಾದೇವಸ್ವಾಮಿ, ಮಾಜಿ ಉಪ ಮಹಾಪೌರರು ಹಾಗೂ ನಗರ ಎಸ್‌ಸಿ ಮೋರ್ಚಾ ಅಧ್ಯಕ್ಷ ವಿಶೈಲೇಂದ್ರ ಪ್ರಧಾನ ಕಾರ್ಯದರ್ಶಿ ಕೇಬಲ್ ಮಹೇಶ್, ಪಾಲಿಕೆ ಮಾಜಿ ಸದಸ್ಯರು ಬಿ.ವಿ.ಮಂಜುನಾಥ್, ಹಿರಿಯ ಮುಖಂಡರಾದ ಸಿದ್ದಪ್ಪ, ಕಾರ್ತಿಕ್, ಶಿವರಾಜ್ ಇತರರು ಹಾಜರಿದ್ದರು.

ಮೈಸೂರಲ್ಲಿ 'ಕುಂಟೆಬಿಲ್ಲೆ' ಚಿತ್ರಕ್ಕೆ ಮುಹೂರ್ತ

ಜಿ.ಬಿ.ಸರಗೂರು ಸಿದ್ದೇಗೌಡ ಐದನೇ ಚಿತ್ರವಿದು



ಮೈಸೂರು, ಮೇ 10(ಎಸ್‌ಬಿಡಿ)– ಜೀವಿತ ಕ್ರಿಯೇಷನ್ಸ್ ನಿರ್ಮಾಣದ ಐದನೇ ಚಿತ್ರ 'ಕುಂಟೆಬಿಲ್ಲೆ' ಸಿನಿಮಾದ ಮುಹೂರ್ತ ಸಮಾರಂಭ ಮೈಸೂರಿನ ಕೆ.ಜಿ.ಕೊಪ್ಪಲಿನ ಶ್ರೀ ಆದಿಶಕ್ತಿ ಬಂದಂತಮ್ಮ ಕಾಳಮ್ಮ ದೇವಸ್ಥಾನದಲ್ಲಿ ಶುಕ್ರವಾರ ನೆರವೇರಿತು.

ರಾಜವಂಶಸ್ಥರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಕ್ಲಾಪ್ ಮಾಡಿ ಚಿತ್ರಕ್ಕೆ ಶುಭ ಹಾರೈಸಿದರು. ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಅವರು ಕ್ಯಾಮರಾ ಸ್ವಿಚ್ ಆನ್ ಮಾಡಿ, ಚಿತ್ರೀಕರಣಕ್ಕೆ ಚಾಲನೆ ನೀಡಿದರು.

ಈ ವೇಳೆ ಚಿತ್ರದ ನಿರ್ದೇಶಕ ಸಿದ್ದೇಗೌಡ ಜಿಬಿಎಸ್, ನಿರ್ಮಾಪಕರಾದ ಎಸ್.ಬಿ.ಶಿವ ಮತ್ತು ಜಿ.ಕುಮಾರ್ ಗೌಡ, ಹೊಸ ನಾಯಕ ನಟ ಯದು, ನಾಯಕಿ ಮೇಘಶ್ರೀ, ಹಿರಿಯ ನಟ ಶಂಕರ್ ಅಶ್ವಥ್, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಬಿಜೆಪಿ ಮುಖಂಡ ಕವೀಶ್ ಗೌಡ, ನಗರ ಪಾಲಿಕೆ ಮಾಜಿ ಸದಸ್ಯರು, ಕಲಾವಿದರು ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು. ಈ ಚಿತ್ರಕ್ಕೆ ಕಥೆ ಹಾಗೂ ಸಂಭಾಷಣೆ ಜನಪ್ರಿಯ ಸಿನಿಲೇಖಕ ಬಿ.ಎ.ಮಧು ಅವರದ್ದಾಗಿದ್ದು, ಹರಿಕಾವ್ಯ ಅವರ ಸಂಗೀತವಿದೆ. ವಸ್ತ್ರಾಲಂಕಾರ ಮಹೇಶ್ ಹೆಬ್ಬಾಳು, ಛಾಯಾಗ್ರಹಣ ಮಂಜು, ನಿರ್ಮಾಣ ನಿರ್ವಹಣೆ ಟಿ.ಜನಾರ್ಧನ್ ವಹಿಸಿದ್ದಾರೆ ಎಂದು ನಿರ್ದೇಶಕ ಸಿದ್ದೇಗೌಡ ತಿಳಿಸಿದ್ದಾರೆ.

ಮುಂಬೈ ಸೈಬರ್ ಪೊಲೀಸರ ಹೆಸರಲ್ಲಿ ಮೈಸೂರು ವ್ಯಕ್ತಿಗೆ 15 ಲಕ್ಷ ವಂಚನೆ



ಮೈಸೂರು, ಮೇ 10(ಎಸ್‌ಬಿಡಿ)– ಮುಂಬೈ ಸೈಬರ್ ಪೊಲೀಸರ ಸೋಗಿನಲ್ಲಿ ಮೈಸೂರಿನ ವ್ಯಕ್ತಿಯೊಬ್ಬರಿಗೆ 15 ಲಕ್ಷ ರೂ. ವಂಚಿಸಿರುವ ಬಗ್ಗೆ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಜೆ.ಪಿ.ನಗರದ ನಿವಾಸಿ ಅನ್ಮೋಲ್‌ಗೆ ಮಾದಕ ವಸ್ತು ಕಳ್ಳ ಸಾಗಾಣೆಗೆ ತಮ್ಮ ಆಧಾರ್ ಸಂಖ್ಯೆಯನ್ನು ಲಿಂಕ್ ಮಾಡಲಾಗಿದೆ ಎಂದು ಬೆದರಿಸಿ, ವಂಚಿಸಲಾಗಿದೆ.

ಅನಾಮದೇಯನೊಬ್ಬ ಮೇ 6ರಂದು ಅನ್ಮೋಲ್‌ಗೆ ಕರೆ ಮಾಡಿ, ಫೆಡ್‌ಎಕ್ಸ್ ಜಾಗತಿಕ ಟ್ರಾನ್ಸ್‌ಪೋರ್ಟ್ ಮೂಲಕ ಮುಂಬೈನಿಂದ ತೈವಾನ್‌ಗೆ ಮಾದಕ ವಸ್ತುಗಳ ಕಳ್ಳ ಸಾಗಾಣೆಯಾಗಿದ್ದು, ಈ ಕೃತ್ಯಕ್ಕೆ ನಿಮ್ಮ ಆಧಾರ್ ಸಂಖ್ಯೆಯನ್ನು ಲಿಂಕ್ ಮಾಡಲಾಗಿದೆ ಎಂದು ಬೆದರಿಸಿದ್ದಾರೆ. ನಂತರ ನರೇಶ್ ಗುಪ್ತ ಹೆಸರಿನಲ್ಲಿ ಮುಂಬೈ ಪೊಲೀಸ್ ಅಧಿಕಾರಿ ಎಂದು ಕರೆ ಮಾಡಿದ ಮತ್ತೊರ್ವ ವ್ಯಕ್ತಿ ಆರೋಪದ ಬಗ್ಗೆ ವಿಚಾರಣೆ ಮಾಡಿದ ಬಳಿಕ ಈ ಬಗ್ಗೆ ಮುಂಬೈ ಸೈಬರ್ ಕ್ರೈಂ ಬ್ರ್ಯಾಂಚ್‌ನಲ್ಲಿ ದೂರು ದಾಖಲಿಸುವಂತೆ ತಿಳಿಸಿದ.

ಆಗ ಅನ್ಮೋಲ್ ತಾವು ಮೈಸೂರಿನಲ್ಲಿ ಇರುವುದಾಗಿ ತಿಳಿಸಿದ್ದರಿಂದ ಸ್ಕೈಪ್ ಸಾಫ್ಟ್‌ವೇರ್ ಮೂಲಕ ಸಂಪರ್ಕಿಸುವಂತೆ ತಿಳಿಸಿದ್ದ. ಹಾಗೆಯೇ ಸ್ಕೈಪ್ ಮೂಲಕ ವಿಡಿಯೋ ಕರೆ ಮಾಡಿದಾಗ ಪರಿಶೀಲನೆ ನೆಪದಲ್ಲಿ ಅನ್ಮೋಲ್ ಅವರ ಆಧಾರ್ ಸಂಖ್ಯೆ ಹಾಗೂ ಬ್ಯಾಂಕ್ ಖಾತೆ ವಿವರವನ್ನು ಪಡೆದಿದ್ದ. ಅಲ್ಲದೆ ಒಂದೆರಡು ದಿನ ಯಾವುದಾದರೂ ಹೋಟೆಲ್‌ನಲ್ಲಿ ಉಳಿದುಕೊಳ್ಳುವಂತೆ ಸೂಚಿಸಿದ್ದ.

ಮುಂಬೈ ಪೊಲೀಸರೇ ಕರೆ ಮಾಡಿರಬಹುದು ಎಂದು ಭಾವಿಸಿ, ತನಿಖೆಗೆ ಸಹಕರಿಸಬೇಕೆಂಬ ಉದ್ದೇಶದಿಂದ ಅನ್ಮೋಲ್, ಸಮೀಪದ ಹೋಟೆಲ್‌ವೊಂದರಲ್ಲಿ ಎರಡು ದಿನ ವಾಸ್ತವ್ಯ ಹೂಡಿದ್ದರು. ಆ ವೇಳೆ ಮತ್ತೊಮ್ಮೆ ಕರೆ ಮಾಡಿ, ನಿಮ್ಮ ಖಾತೆಯಲ್ಲಿರುವ ಹಣದ ವಸ್ತುಸ್ಥಿತಿಯನ್ನು ಪರಿಶೀಲಿಸಬೇಕೆಂದು ಹೇಳಿ ಹಂತ ಹಂತವಾಗಿ 15 ಲಕ್ಷ ರೂ. ಹಣವನ್ನು ಬೇರೊಂದು ಖಾತೆಗೆ ವರ್ಗಾವಣೆ ಮಾಡಿಸಿಕೊಂಡಿದ್ದರು. ನಂತರ ಇದು ಮೋಸದ ಜಾಲ ಎಂದು ಸ್ಪಷ್ಟವಾಗಿದ್ದರಿಂದ ಅನ್ಮೋಲ್ ಮೈಸೂರಿನ ಸೆನ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಪೊಲೀಸರಿಗೆ ಮಾಹಿತಿ ನೀಡಿ: ಸಿಮ್, ಮೊಬೈಲ್ ಇನ್ನಿತರ ವಸ್ತುಗಳನ್ನು ಖರೀದಿಸುವಾಗ ಹಾಗೂ ಬೇರೆ ಸಂದರ್ಭಗಳಲ್ಲೂ ಆಧಾರ್ ಸಂಖ್ಯೆ ಅಥವಾ ನಕಲು ಪ್ರತಿಯನ್ನು ನೀಡಿರುತ್ತೇವೆ. ಯಾವುದೋ ರೀತಿಯಲ್ಲಿ ದುಷ್ಕರ್ಮಿಗಳಿಗೂ ಆಧಾರ್ ಸಂಖ್ಯೆ ಸಿಗುವ ಸಾಧ್ಯತೆ ಇರುತ್ತದೆ. ಈ ಕಾರಣದಿಂದಲೇ ಅನ್ಮೋಲ್ ಅವರೂ ಕರೆ ಮಾಡಿದವರನ್ನು ನೈಜ ಪೊಲೀಸರೆಂದು ನಂಬಿರಬಹುದು. ಆದರೆ ಇಂತಹ ಸಂದರ್ಭದಲ್ಲಿ ಏಕಾಏಕಿ ಹಣ ಕಳುಹಿಸಿ, ಮೋಸ ಹೋಗದೆ ಸಮೀಪದ ಪೊಲೀಸ್ ಠಾಣೆ ಅಥವಾ ಸೆನ್ ಪೊಲೀಸ್ ಠಾಣೆಗೆ ಮಾಹಿತಿ ನೀಡಿದರೆ, ಅವರು ಪರಿಶೀಲನೆ ನಡೆಸುವುದರಿಂದ ವಂಚನೆಯಿಂದ ಪಾರಾಗಬಹುದು.


ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗದ ವತಿಯಿಂದ ಬಸವಣ್ಣ ಜಯಂತಿಯ ಅಂಗವಾಗಿ ಬಸವಣ್ಣನವರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಲಾಯಿತು. ಈ ವೇಳೆ ನಗರ ಅಧ್ಯಕ್ಷ ಎನ್.ಆರ್. ನಾಗೇಶ್, ರಾಜು ಉಪ್ಪಾರ್, ಎಂ.ಎಲ್.ಗೋಪಾಲ್, ಲಕ್ಷ್ಮೀನಾರಾಯಣ, ವೆಂಕಟರಾಜು, ಮಂಗಳ, ಕುಮುದಾ, ಶಾಂತಕುಮಾರಿ, ಮಹೇಶ್ ಮಡಿವಾಳ, ಮಹೇಂದ್ರ ಕಾಗಿನೆಲೆ, ಕಿರಣ್ ಕುಮಾರ್ ವಿಶ್ವಕರ್ಮ, ರಿಷಿ ವಿಶ್ವಕರ್ಮ, ಡಿ.ಪಿ.ಕೆ. ಪರಮೇಶ್, ಡಾ.ವಿಜಯಕುಮಾರ್, ದಿನೇಶ್, ನಾರಾಯಣ್ ಇನ್ನಿತರರು ಪಾಲ್ಗೊಂಡಿದ್ದರು.


ಜಯಪುರ ಪೊಲೀಸ್ ಠಾಣೆಯಲ್ಲಿ ಬಸವ ಜಯಂತಿ ಆಚರಿಸಲಾಯಿತು. ಕ್ರೈಂ ವಿಭಾಗದ ಪಿಎಸ್‌ಐ ಜಯರಾಮು ಮತ್ತು ಸಿಬ್ಬಂದಿ ಹಾಜರಿದ್ದರು.

ಮಕ್ಕಳು ಕಾರ್ಟೂನ್ ನೋಡುವುದಕ್ಕೆ ಅಡ್ಡಿ ಬೇಡ

- ಹಿರಿಯ ಸಾಹಿತಿ ಡಾ.ರಾಜಪ್ಪ ದಳವಾಯಿ ಪೋಷಕರಿಗೆ ಕಿವಿಮಾತು
- ಮಕ್ಕಳಲ್ಲಿ ಕ್ರಿಯಾತ್ಮಕತೆ ಬೆಳೆಯುವುದೇ ಇಂತಹ ಕಲಾತ್ಮಕತೆಯಿಂದ


ಮೈಸೂರು ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ನಡೆದ ರಂಗಾಂತರಂಗ ಮೈಸೂರು ಕಲರವ ಮಕ್ಕಳ ಬೇಸಿಗೆ ಶಿಬಿರದ ಸಮಾರೋಪದಲ್ಲಿ ಹಿರಿಯ ಸಾಹಿತಿ ಡಾ.ರಾಜಪ್ಪ ದಳವಾಯಿ ಮಾತನಾಡಿದರು.

ಮೈಸೂರು, ಮೇ 10(ಎಸ್‌ಪಿಎನ್)– ಮನೆಗಳಲ್ಲಿ 'ಮಿಕ್ಕಿ ಮೌಸ್', 'ಛೋಟಾ ಭೀಮ್' ನಂತಹ ಕಾರ್ಟೂನ್‌ಗಳ ವೀಕ್ಷಣೆಗೆ ಮಕ್ಕಳಿಗೆ ಪೋಷಕರು ತಡೆ ಹಾಕಬೇಡಿ ಎಂದು ಹಿರಿಯ ಸಾಹಿತಿ ಡಾ.ರಾಜಪ್ಪ ದಳವಾಯಿ ಸಲಹೆ ನೀಡಿದರು.

ಮೈಸೂರು ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ನಡೆದ ರಂಗಾಂತರಂಗ ಮೈಸೂರು ಕಲರವ ಮಕ್ಕಳ ಬೇಸಿಗೆ ಶಿಬಿರದ ಸಮಾರೋಪದಲ್ಲಿ ಭಾಗವಹಿಸಿ, ಅವರು ಮಾತನಾಡಿದರು.

ಈ ಕಾರ್ಟೂನ್‌ಗಳ ಕ್ರಿಯೆಟಿವಿಟಿಯಲ್ಲಿ ನೂರಾರು ತಜ್ಞರು ಕೆಲಸ ಮಾಡಿದ್ದಾರೆ. ಅಲ್ಲದೆ, ಇವುಗಳ ತಯಾರಿಕೆಯಲ್ಲಿ ನೂರಾರು ಕೋಟಿ ವ್ಯವಹಾರವಿದೆ ಅಂತೆಯೇ ಮಕ್ಕಳಿಗೆ ಶಾಲೆಗಳಲ್ಲಿ ಸಿಗದಿರುವ ಖುಷಿ ಕಾರ್ಟೂನ್ ನೋಡಿದಾಗ ಸಿಗಬಹುದು. ಹಾಗಾಗಿ ಮಕ್ಕಳ ಸಂತೋಷಕ್ಕೆ ಪೋಷಕರು ಅಡ್ಡಿಯಾಗುವುದು ಬೇಡ. ಒಂದು ಗಂಟೆ ಕಾರ್ಟೂನ್ ನೋಡಿದಾಕ್ಷಣ ನಿಮ್ಮ ಮಕ್ಕಳೇನು ಓದಿನಲ್ಲಿ ಹಿಂದುಳಿಯುವುದಿಲ್ಲ. ಹಾಗಾಗಿ ಮಕ್ಕಳಿಗೆ ವಿಷಯಾಧಾರಿತ ಕಾರ್ಟೂನ್‌ಗಳನ್ನು ನೋಡಲು ಅಡ್ಡಿಪಡಿಸಬೇಡಿ ಎಂದು ಪೋಷಕರಿಗೆ ಸಲಹೆ ನೀಡಿದರು.

ಮಕ್ಕಳು ಕಾರ್ಟೂನ್ ನೋಡುವುದರಿಂದ ಪೋಷಕರಿಗೆ ಪ್ರತಿಷ್ಠೆ ಅಡ್ಡಿಯಾಗದು. ಸದಾ ಓದುವಂತೆ ಮಕ್ಕಳನ್ನು ಪೀಡಿಸುವ ಬದಲು ಮಕ್ಕಳು ಸ್ವತಂತ್ರವಾಗಿ ಆಲೋಚಿಸುವ ಕಡೆಗೆ ಹೆಚ್ಚು ಗಮನ ಹರಿಸಬೇಕು. ಇದಕ್ಕೆ ಬೇಕಾದ ಪೂರಕ ವಾತಾವರಣವನ್ನು ಮನೆ ಮತ್ತು ಶಾಲೆಗಳಲ್ಲಿ ಕಲ್ಪಿಸುವುದು ಪೋಷಕರು ಮತ್ತು ಶಿಕ್ಷಣ ಇಲಾಖೆ ಜವಾಬ್ದಾರಿ ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಶಾಲಾ ಕೊಠಡಿಗಳಿಗಿಂತ ಬೇಸಿಗೆ ಶಿಬಿರಗಳಲ್ಲೆ ಮಕ್ಕಳು ಹೆಚ್ಚು ಕ್ರಿಯಾಶೀಲರಾಗಿರುತ್ತಾರೆ ಎಂದು ಕೆಲ ವಿದ್ವಾಂಸರು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. ಮಕ್ಕಳನ್ನು ಕೇಳಿದರೆ, ಶಾಲೆ ಬೇಡ ವರ್ಷ ಪೂರ್ತಿ ಬೇಸಿಗೆ ಶಿಬಿರಗಳೆ ಇರಲಿ ಎನ್ನುತ್ತವೆ. ಮಕ್ಕಳು ತುಂಟರು, ತೀಟೆ ಮಾಡುತ್ತಾರೆ ಎನ್ನಬಹುದು. ಆದರೆ, ಅವರಲ್ಲಿನ ಭಿನ್ನಭಿನ್ನ ಸಾಂಸ್ಕೃತಿಕ ಆಲೋಚನೆಗಳಿಗೆ ಜಾಗ ನೀಡುವುದು ಪೋಷಕರ ಆದ್ಯ ಕರ್ತವ್ಯ ಎಂದು ತಿಳಿಸಿದರು.

ಶಾಲಾ ಶಿಕ್ಷಣದಲ್ಲಿ ಮಕ್ಕಳಿಗೆ ಬೇಕಾದ ಸಂತೋಷ, ಕಲಿಕಾ ಆಸಕ್ತಿ ಸಿಗುತ್ತಿಲ್ಲ. ಅಲ್ಲದೆ, ಮಗುವಿನ ಆಲೋಚನಾ ಲಹರಿಗೆ ತಕ್ಕಂತಹ ವಾತಾವರಣವನ್ನು ನಿರ್ಮಿಸಲು ಶಿಕ್ಷಣ ಇಲಾಖೆ ಮುಂದಾಗುತ್ತಿಲ್ಲ. ಆದ್ದರಿಂದ ಮಕ್ಕಳು ಬೇಸಿಗೆ ಶಿಬಿರದ ಚಟುವಟಿಕೆಗಳ ಕಡೆ ಹೆಚ್ಚು ಆಕರ್ಷಣೆಗೊಳ್ಳುತ್ತಿವೆ ಎಂದರು.

ಮಕ್ಕಳ ರಂಗಭೂಮಿಯಲ್ಲಿ ಸಿ.ಜಿ.ಕೃಷ್ಣಮೂರ್ತಿ ಸೇರಿದಂತೆ ಅನೇಕ ರಂಗಕರ್ಮಿಗಳ ಕೊಡುಗೆ ಅಪಾರ. ಮಕ್ಕಳ ರಂಗಭೂಮಿ ಉತ್ತೇಜನಕ್ಕಾಗಿ ಸಾಕಷ್ಟು ಮಂದಿ ಶ್ರಮಿಸಿದ್ದಾರೆ. ಈ ನಿಟ್ಟಿನಲ್ಲಿ ಪೋಷಕರು ಮಕ್ಕಳ ಸ್ವತಂತ್ರ ಆಲೋಚನೆ, ಕ್ರಿಯೆಟಿವಿಟಿಗೆ ಹೆಚ್ಚಿನ ಆದ್ಯತೆ ನೀಡುವಂತೆ ಕಿವಿಮಾತು ಹೇಳಿದರು. ವೇದಿಕೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ರಂಗಾಂತರಂಗ ಸಂಸ್ಥೆಯ ಕೆ.ಎಂ.ಕೀರ್ತಿರಾಜ್ ಉಪಸ್ಥಿತರಿದ್ದರು. ನಂತರ ಮಕ್ಕಳು ವಿವಿಧ ಕಲೆ, ನಾಟಕಗಳನ್ನು ಪ್ರದರ್ಶಿಸಿ, ಪ್ರೇಕ್ಷಕರ ಗಮನ ಸೆಳೆದರು.



ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ

ಮೈಸೂರು, ಮೇ 10– ಮೈಸೂರಿನ ವಿಜಯ ವಿಠಲ ಹೈಸ್ಕೂಲ್ ವಿದ್ಯಾರ್ಥಿನಿ ಎಂ.ಡಿ.ಸುದೀಕ್ಷಾ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625 ಕ್ಕೆ 620 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ದಿನೇಶ್ ಕೋಚಿಂಗ್ ಸೆಂಟರ್‌ನ ಎನ್.ವಿ.ದಿನೇಶ್ ಮತ್ತು ಡಾ.ಎನ್.ಸೌಮ್ಯ ದಂಪತಿ ಪುತ್ರಿ.



ಉನ್ನತ ಶ್ರೇಣಿಯಲ್ಲಿ ತೇರ್ಗಡೆ

ಮೈಸೂರು, ಮೇ 10– ಮೈಸೂರಿನ ಅಲನಹಳ್ಳಿಯಲ್ಲಿರುವ ಬಂಟ್ವಾಳ ಮಾಧವ ಶೆಣೈ ಹೈಸ್ಕೂಲ್ ವಿದ್ಯಾರ್ಥಿನಿ ಜೆ.ಅನನ್ಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 550 ಅಂಕ ಪಡೆದು ತೇರ್ಗಡೆಯಾಗಿದ್ದಾರೆ. ಈಕೆ ಅಲನಹಳ್ಳಿ ನಿವಾಸಿ, ಪತ್ರಿಕಾ ವಿತರಕ ಗಣೇಶ್ ಮತ್ತು ಮಂಗಳಾ ದಂಪತಿ ಪುತ್ರಿ.



ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ

ನಂಜನಗೂಡು, ಮೇ 10– ನಂಜನಗೂಡಿನ ರೋಟರಿ ಶಾಲೆ ವಿದ್ಯಾರ್ಥಿನಿ ಎಸ್.ಹಿತಶ್ರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 525 ಕ್ಕೆ 600 ಅಂಕ (ಶೇ96) ಗಳಿಸಿ ತೇರ್ಗಡೆಯಾಗಿದ್ದಾರೆ. ಈಕೆಯನ್ನು ಶಾಲೆಯ ಆಡಳಿತ ಮಂಡಳಿ ಮತ್ತು ಶಿಕ್ಷಕರು ಅಭಿನಂದಿಸಿದ್ದಾರೆ.



ಆರ್.ಮಹೇಶ್ ನೇಮಕ

ಮೈಸೂರು, ಮೇ 10– ಯುವ ಕಾಂಗ್ರೆಸ್ ಮೈಸೂರು ನಗರ ಕಾರ್ಯದರ್ಶಿಯಾಗಿ ಆರ್.ಮಹೇಶ್ ಅವರನ್ನು ನೇಮಿಸಲಾಗಿದೆ.

ಜಗಜ್ಯೋತಿ ಬಸವಣ್ಣನವರ ತತ್ವಾದರ್ಶಗಳು ಸಾರ್ವಕಾಲಿಕ

ಬಸವ ಜಯಂತಿಯಲ್ಲಿ ಶಾಸಕ ಡಿ.ರವಿಶಂಕರ್ ಬಣ್ಣನೆ



ಕೆ.ಆರ್.ನಗರದಲ್ಲಿ ಬಸವ ಜಯಂತಿ ಆಚರಿಸಲಾಯಿತು.

ಕೆ.ಆರ್.ನಗರ, ಮೇ 10– ಸಮ ಸಮಾಜ ನಿರ್ಮಾಣಕ್ಕೆ ಶ್ರಮಿಸಿದ ಜಗಜ್ಯೋತಿ ಬಸವಣ್ಣನವರ ತತ್ವ ಮತ್ತು ಆದರ್ಶಗಳು ಸಾರ್ವಕಾಲಿಕ. ಅವುಗಳನ್ನು ಯುವಜನತೆ ಪಾಲಿಸಿದಾಗ ಮಾತ್ರ ಅವರ ಆಶಯಗಳು ಈಡೇರಲು ಸಾಧ್ಯ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಪಟ್ಟಣದ ಮಲೆ ಮಹದೇಶ್ವರಸ್ವಾಮಿ ದೇವಾಲಯ ಆವರಣದಲ್ಲಿ ತಾಲೂಕು ವೀರಶೈವ ಸಮಾಜದಿಂದ ನಡೆದ ಬಸವ ಜಯಂತಿಯಲ್ಲಿ ಮಾತನಾಡಿದ ಅವರು, ವಚನಗಳ ಮೂಲಕ ಲೋಕದ ಅಂಕು ಡೊಂಕುಗಳನ್ನು ತಿದ್ದಿದ ಬಸವಣ್ಣ ಇಂದಿಗೂ ಅಜರಾಮರ ಎಂದರು.

800 ವರ್ಷಗಳ ಹಿಂದೆಯೇ ಸಮಾಜ ದಲ್ಲಿ ಮಹಿಳೆಯರಿಗೆ ಪುರುಷರಷ್ಟೇ ಸಮಾನತೆ ಮತ್ತು ಗೌರವ ಸಿಗಬೇಕು ಎಂದು ಪ್ರತಿಪಾದಿಸಿದ್ದ ಬಸವಣ್ಣನವರು ಮೀಸಲಾತಿ ಪರಿಕಲ್ಪನೆಯನ್ನು ಅಂದೇ ಜಾರಿಗೆ ತಂದಿದ್ದರು. ಇಂತಹ ಮಹಾತ್ಮರು ನಮ್ಮ ನಾಡಿನಲ್ಲಿ ಜನಿಸಿದ್ದು ನಮ್ಮೆಲ್ಲರ ಪುಣ್ಯ ಎಂದರು. ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಬಸವಣ್ಣ ನಾಡಿನ ಸಾಂಸ್ಕೃತಿಕ ನಾಯಕ ಎಂದು ಘೋಷಿಸುವ ಜೊತೆಗೆ ಸರ್ಕಾರಿ ಕಚೇರಿಗಳಲ್ಲಿ ಕಡ್ಡಾಯವಾಗಿ ಅವರ ಭಾವಚಿತ್ರ ಇಡುವಂತೆ ಆದೇಶ ಮಾಡಿದೆ. ಇದು ನಾವು ಬಸವಣ್ಣನವರಿಗೆ ಸಲ್ಲಿಸಿದ ಗೌರವ ಎಂದರು.

ವಿಧಾನ ಪರಿಷತ್ ಸದಸ್ಯ ಹೆಚ್. ವಿಶ್ವನಾಥ್ ಮಾತನಾಡಿ, ಈ ಹಿಂದೆ ನಾನು ಎಸ್.ಎಂ.ಕೃಷ್ಣ ಅವರ ಸಂಪುಟದಲ್ಲಿ ಶಿಕ್ಷಣ ಸಚಿವನಾಗಿದ್ದಾಗ ಅಕ್ಷರ ದಾಸೋಹ ಯೋಜನೆ ಜಾರಿಗೆ ತರಲು ಬಸವೇಶ್ವರರ ಪ್ರೇರಣೆಯೇ ಕಾರಣ ಎಂದರು.

ಪ್ರಸ್ತುತ ಜನಪ್ರತಿನಿಧಿಗಳು ಬಸವಣ್ಣ ನವರ ಕಾಯಕ ತತ್ವಕ್ಕೆ ವಿರುದ್ಧವಾಗಿದ್ದು, ಭವಿಷ್ಯದಲ್ಲಿ ಎಲ್ಲರೂ ತಮ್ಮ ತಪ್ಪನ್ನು ತಿದ್ದಿಕೊಂಡು ಅವರ ತತ್ವ ಮತ್ತು ಆದರ್ಶ ಗಳನ್ನು ಪಾಲಿಸಿ ಉತ್ತಮ ಸಮಾಜ ನಿರ್ಮಾಣಕ್ಕೆ ದುಡಿಯಬೇಕು ಎಂದರು.

ಕಾರ್ಯಕ್ರಮದಲ್ಲಿ ಜಿಪಂ ಮಾಜಿ ಉಪಾಧ್ಯಕ್ಷ ಎ.ಎಸ್.ಚನ್ನಬಸಪ್ಪ, ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಕೆಂಪರಾಜು, ರಾಜ್ಯ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಮಹೇಶ್, ಪುರ ಸಭೆ ಮಾಜಿ ಅಧ್ಯಕ್ಷ ಕೆ.ಜಿ.ಸುಬ್ರಹ್ಮಣ್ಯ, ಸದಸ್ಯ ಕೆ.ಪಿ.ಪ್ರಭುಶಂಕರ್, ಮಲೆ ಮಹದೇಶ್ವರ ಯುವ ಸೇನೆ ಅಧ್ಯಕ್ಷ ಭೋಜರಾಜು, ಸಾಹಿತಿ ಪ್ರಭಾಕರ್, ತಾಲೂಕು ನಿವೃತ್ತ ನೌಕರರ ಸಂಘದ ಮಾಜಿ ಅಧ್ಯಕ್ಷ ಸಣ್ಣಲಿಂಗಪ್ಪ, ವೀರಶೈವ ಮುಖಂಡರಾದ ಎಸ್‌ವಿಎಸ್ ಸುರೇಶ್, ಮನೋಹರಿ, ಎಲ್.ಪಿ.ರವಿಕುಮಾರ್, ಮಹೇಶ್, ರೂಪಾ ಮತ್ತಿತರರಿದ್ದರು.

ಕಾರ್ಯಕ್ರಮದಿಂದ ದೂರ ಉಳಿದ ಅಧಿಕಾರಿಗಳು

ಕೆ.ಆರ್.ನಗರ: ಪಟ್ಟಣದಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮದಿಂದ ತಹಸೀಲ್ದಾರ್ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ದೂರ ಉಳಿದರು.

ಪೂರ್ವ ನಿಗದಿಯಂತೆ ಬೆಳಗ್ಗೆ 11 ಗಂಟೆಗೆ ಕಾರ್ಯಕ್ರಮ ನಿಗದಿಯಾಗಿತ್ತು. ಆದರೆ ಸಮಾಜದ ಮುಖಂಡರ ಆಹ್ವಾನದಂತೆ ಶಾಸಕ ಡಿ.ರವಿಶಂಕರ್ ಮತ್ತು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಬಸವೇಶ್ವರರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ವೇದಿಕೆ ಬಳಿ ಬಂದರು. ಆದರೆ ಅಧಿಕಾರಿಗಳು ಬಸವ ಜಯಂತಿ ಕಾರ್ಯಕ್ರಮಕ್ಕೆ ಬಾರದ ಹಿನ್ನೆಲೆಯಲ್ಲಿ ವೇದಿಕೆ ಹಿಂದೆ ತಾಲೂಕು ಆಡಳಿತ ಮತ್ತು ವೀರಶೈವ ಸಂಘಟನೆಗಳ ಆಶ್ರಯದಲ್ಲಿ ಸಮಾರಂಭ ನಡೆಯುತ್ತದೆ ಎಂದು ಹಾಕಿದ್ದ ಫ್ಲೆಕ್ಸ್ ತೆರವು ಮಾಡಲಾಯಿತು. ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ತಹಸೀಲ್ದಾರ್ ಸಿ.ಎಸ್. ಪೂರ್ಣಿಮಾ ಕಾರ್ಯಕ್ರಮಕ್ಕೆ ಬರಲಿಲ್ಲ. ಜೊತೆಗೆ ಸ್ಥಳದಲ್ಲಿದ್ದ ತಾಪಂ ಇಓ ಹೆಚ್.ಕೆ.ಹರೀಶ್, ಸಿಡಿಪಿಓ ಅಣ್ಣಯ್ಯ, ಸಾಮಾಜಿಕ ವಲಯ ಅರಣ್ಯಾಧಿಕಾರಿ ಹರಿಪ್ರಸಾದ್, ಸೆಸ್ಕ್ ಎಇ ಪ್ರಸನ್ನ, ಉಪವಲಯ ಅರಣ್ಯಾಧಿಕಾರಿ ಮಂಜುನಾಥ್ ಮತ್ತು ಇತರ ಇಲಾಖೆ ಗಳ ಅಧಿಕಾರಿಗಳು ದೂರದಲ್ಲಿ ನಿಂತು ಪ್ರಮುಖರ ಭಾಷಣ ಆಲಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ವಾಲ್ಟರ್ ವೀರಯ್ಯ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಸ್ಟಾರ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಕ್ರೂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಅಂಜನೀಪುತ್ರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಅರಮನೆ 4 (ಕ)	4 ಪ್ರದರ್ಶನಗಳು
ಸಂಗಂ	
ಗ್ರೇ ಗೇಮ್ಸ್ (ಕ)	4 ಪ್ರದರ್ಶನಗಳು
ಲಿಡೋ	
ಅಂಜನೀಪುತ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಅರಮನೈ 4 (ತ)	4 ಪ್ರದರ್ಶನಗಳು
ಪ್ರಭಾ	
ನೈಟ್‌ಕರ್ಫ್ಯೂ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ದಿ ಬಾಯ್ ಅಂಡ್ ದಿ ಹೆರಾನ್ (ಜ): ಬೆ.11.20ಕ್ಕೆ, ಸಂ.4.20ಕ್ಕೆ, ಗ್ರೇ ಗೇಮ್ಸ್ (ಕ): ಮ.1.50ಕ್ಕೆ, ಆವೇಶಂ (ಮ): ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.40ಕ್ಕೆ, ಸ್ಟಾರ್ (ತ): ಮ.1ಕ್ಕೆ, ಸಂ.4.05ಕ್ಕೆ, ರಾಮನ ಅವತಾರ (ಕ): ರಾ.7.05ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10.05ಕ್ಕೆ.
ಸ್ಕ್ರೀನ್ 3	ಅಲೈಕ್ಯಾ (ಕ): ಬೆ.10.55ಕ್ಕೆ, ಪವರ್ (ಕ): ಮ.1.15ಕ್ಕೆ, ಶ್ರೀಕಾಂತ್ (ಹಿಂ): ಸಂ.4.30ಕ್ಕೆ, ರಾ.7.10ಕ್ಕೆ, ಕೃಷ್ಣಮ್ಮ (ತೆ): ರಾ.9.55ಕ್ಕೆ.
ಸ್ಕ್ರೀನ್ 4	ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10.35ಕ್ಕೆ, ಮ.1.25ಕ್ಕೆ, ಸಂ.4.15ಕ್ಕೆ, ರಾ.7.10ಕ್ಕೆ, ರಾ.10.05ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.25ಕ್ಕೆ, ರಾ.10ಕ್ಕೆ, ಯುವ (ಕ): ಮ.1ಕ್ಕೆ, ಸಂ.4.15ಕ್ಕೆ, O2 (ಕ): ರಾ.7.30ಕ್ಕೆ.
ಸ್ಕ್ರೀನ್ 2	ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಬೆ.10.45ಕ್ಕೆ, ಸಂ.5.55ಕ್ಕೆ, ಮೈದಾನ್ (ಹಿಂ): ಮ.2.10ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.9.20ಕ್ಕೆ.
ಸ್ಕ್ರೀನ್ 3	ಯುವ (ಕ): ಬೆ.10.10ಕ್ಕೆ, O2 (ಕ): ಮ.1.25ಕ್ಕೆ, ಪಾರಿಜಾತ ಪರ್ವಂ (ತೆ): ಮ.3.55ಕ್ಕೆ, ಆವೇಶಂ (ಮ): ಸಂ.6.50ಕ್ಕೆ, ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಮೈದಾನ್ (ಹಿಂ): ಬೆ.11.25ಕ್ಕೆ, ರಾ.9.50ಕ್ಕೆ, ವರ್ಷನ್‌ಗಲ್ಕು ಶೇಷಂ (ಮ): ಮ.3.10ಕ್ಕೆ, ಯುವ (ಕ): ಸಂ.6.35ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ತ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಲಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ತೆ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.35ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಯುವ (ಕ): ಬೆ.10.20ಕ್ಕೆ, ಬೆ.11.35ಕ್ಕೆ, ಮ.12.45ಕ್ಕೆ, ಮ.3.20ಕ್ಕೆ, ಸಂ.5.45ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.45ಕ್ಕೆ, ಮ.1.25ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ, ಅವತಾರ ಪುರುಷ 2 (ಕ): ಮ.12.40ಕ್ಕೆ, ಸಂ.6.35ಕ್ಕೆ, ಮ್ಯಾಟ್ನಿ (ಕ): ಮ.1.35ಕ್ಕೆ, ಭರ್ಜರಿ ಗಂಡು (ಕ): ಮ.2.50ಕ್ಕೆ, ದಿ ಫಸ್ಟ್ ಓಮನ್ (ಇಂ): ಸಂ.4ಕ್ಕೆ, ರಾ.9ಕ್ಕೆ, ಕ್ರೂವ್ (ಹಿಂ): ಸಂ.4.05ಕ್ಕೆ, ರಾ.9.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಸಂ.4.30ಕ್ಕೆ, ಮಾರಿಗೋಲ್ಡ್ (ಕ): ರಾ.7.25ಕ್ಕೆ, ಆಡುಜೀವಿತಂ (ಮ): ರಾ.10.15ಕ್ಕೆ.

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಯುವ (ಕ): ಬೆ.9.30ಕ್ಕೆ, ಮ.12.25ಕ್ಕೆ, ಮ.3.40ಕ್ಕೆ, ಸಂ.6.30ಕ್ಕೆ, ರಾ.10.30ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.50ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.10ಕ್ಕೆ, ಮ.3.50ಕ್ಕೆ, ರಾ.9.45ಕ್ಕೆ, ಅವತಾರ ಪುರುಷ 2 (ಕ): ಮ.2ಕ್ಕೆ, ರಾ.7.35ಕ್ಕೆ, ಮ್ಯಾಟ್ನಿ (ಕ): ಸಂ.4.40ಕ್ಕೆ, ಆಡುಜೀವಿತಂ (ಮ): ಸಂ.6.55ಕ್ಕೆ, ರಾ.10.15ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಬೆಳಗನಹಳ್ಳಿಯಲ್ಲಿ ವಿಜೃಂಭಣೆಯ ಬಸವ ಜಯಂತಿ



ಬೆಳಗನಹಳ್ಳಿಯಲ್ಲಿ ಬಸವ ಜಯಂತಿ ಆಚರಿಸಲಾಯಿತು.

ಹೆಚ್.ಡಿ.ಕೋಟೆ, ಮೇ 10– ತಾಲೂಕಿನ ಬೆಳಗನಹಳ್ಳಿಯಲ್ಲಿ ಬಸವ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಬಸವ ಜಯಂತಿ ಅಂಗವಾಗಿ ಗ್ರಾಮಸ್ಥರು ಜಾನುವಾರುಗಳನ್ನು ತೊಳೆದು ಸಿಂಗರಿಸಿ, ಜಮೀನುಗಳಿಗೆ ತೆರಳಿ ಪೂಜೆ ಸಲ್ಲಿಸಿದರು. ಬಳಿಕ ಬಸವಣ್ಣ ಹಾಗೂ ಸಿದ್ಧಗಂಗಾ ಮಠದ ಶ್ರೀಶಿವಕುಮಾರಸ್ವಾಮಿಜಿ ಅವರ ಭಾವಚಿತ್ರಗಳನ್ನು ಮೆರವಣಿಗೆ ಮಾಡ ಲಾಯಿತು. ಬಳಿಕ ಪ್ರಸಾದ ವಿನಿಯೋಗ ಮಾಡಲಾಯಿತು. ಈ ವೇಳೆ ರವಿ ಆರಾಧ್ಯ, ಶಿವಣ್ಣ, ಸೋಮಶೇಖರ್, ಚಂದ್ರಶೇಖರ್, ಕೆಂಡ, ಗಂಗೂಲಿ, ಸುರೇಶ್, ಉಮೇಶ್, ಮಂಜು, ಶಿವಪ್ಪ, ನಕುಲ್, ಲೋಹಿತ್ ಆರಾಧ್ಯ, ನಿಹಾಲ್ ಆರಾಧ್ಯ ಇದ್ದರು.



ತಿ.ನರಸೀಪುರದ ಬಿಜೆಪಿ ಕಚೇರಿಯಲ್ಲಿ ಜಗಜ್ಯೋತಿ ಬಸವೇಶ್ವರರ ಜಯಂತಿ ಆಚರಿಸಿ ಸಿಹಿ ಹಂಚಲಾಯಿತು. ಬಿಜೆಪಿ ಕ್ಷೇತ್ರಾಧ್ಯಕ್ಷ ಶಿವಕುಮಾರ್ (ಸತ್ಯಪ್ಪ), ಎಸ್‌ಎಂಆರ್ ಪ್ರಕಾಶ್, ಪುರಸಭಾ ಮಾಜಿ ಸದಸ್ಯರಾದ ಎನ್.ಲೋಕೇಶ್, ಕೆ.ನಂಜುಂಡಸ್ವಾಮಿ, ಕರೋಹಟ್ಟಿ ರಾಜಶೇಖರ್, ಚೌಹಳ್ಳಿ ಸಿದ್ದರಾಜು, ಕೆ.ಶಶಿ, ಲಕ್ಷ್ಮಣ್ ಸೇರಿದಂತೆ ಪಕ್ಷದ ಕಾರ್ಯಕರ್ತರರು ಹಾಜರಿದ್ದರು.

ಅನಿಷ್ಟ ಪದ್ಧತಿಗಳ ನಿರ್ಮೂಲನೆಗೆ ಹೋರಾಡಿದ ಬಸವಣ್ಣ

ವೀರಶೈವ ಸಮಾಜದ ಮುಖಂಡ ಬಸವರಾಜು



ಹುಣಸೂರಿನ ತಾಲೂಕು ಕಚೇರಿಯಲ್ಲಿ ಬಸವಣ್ಣ, ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಿಸಲಾಯಿತು.

ಹುಣಸೂರು, ಮೇ 10– ಬಸವಣ್ಣ ನವರು 12ನೇ ಶತಮಾನದಲ್ಲಿ ಅಸ್ಪೃಶ್ಯತೆ, ಜಾತೀಯತೆ, ಅಸಮಾನತೆಯಂತಹ ಅನಿಷ್ಟ ಪದ್ಧತಿಗಳ ನಿರ್ಮೂಲನೆಗೆ ಹೋರಾಡಿ ದರು ಎಂದು ವೀರಶೈವ ಸಮಾಜದ ಮುಖಂಡ ಬಸವರಾಜು ತಿಳಿಸಿದರು.

ನಗರದ ತಾಲೂಕು ಕಚೇರಿಯಲ್ಲಿ ಆಯೋಜಿಸಿದ್ದ ಬಸವಣ್ಣ, ಹೇಮರೆಡ್ಡಿ ಮಲ್ಲಮ್ಮ ಜಯಂತಿಯಲ್ಲಿ ಮಾತನಾಡಿದ ಅವರು, ಬಸವಣ್ಣನವರು ಜಾತಿ ಪದ್ಧತಿ ನಿರ್ಮೂಲನೆ ಮಾಡಲು ಅಂತರ್ಜಾತಿ ವಿವಾಹ ಮಾಡಿಸಿ ಸಮಾಜದಲ್ಲಿ ಒಂದು ದೊಡ್ಡ ಕ್ರಾಂತಿ ಮಾಡಿದರು. ಬಸವಣ್ಣ ನವರು ವೀರಶೈವರಿಗೆ ಮಾತ್ರ ಸೀಮಿತ ವಾಗಿಲ್ಲ. ಬದಲಿಗೆ ದಲಿತರು, ಹಿಂದುಳಿದ ವರು, ಬಡವರಿಗೂ ಬಸವಣ್ಣನವರು ಆದರ್ಶ ನಾಯಕರಾಗಿದ್ದಾರೆ ಎಂದರು.

ಮುಖಂಡ ಡಿ.ಕುಮಾರ್ ಮಾತನಾಡಿ, ಬಸವಣ್ಣನವರ ಸಾಮಾಜಿಕ ಕ್ರಾಂತಿ ಯಿಂದಾಗಿ ದಲಿತರಾದ ನಾವು ಅವರ ಅನುಭವ ಮಂಟಪದ ಮೂಲಕ ಸಮಾನತೆ ಕಂಡವರು. ಇಂತಹ ಮಹಾನ್ ನಾಯಕರ ಜಯಂತಿ ಕಾರ್ಯಕ್ರಮಕ್ಕೆ ಗೈರಾಗಿರುವ ಸರ್ಕಾರಿ ಅಧಿಕಾರಿಗಳಿಗೆ ತಹಸೀಲ್ದಾರ್ ನೋಟಿಸ್ ನೀಡಬೇಕು ಎಂದು ಒತ್ತಾಯಿಸಿದ ಅವರು, ಬಸವಣ್ಣ ನವರ ಭಾವಚಿತ್ರವನ್ನು ತಹಸೀಲ್ದಾರ್ ಕಚೇರಿ ಒಳಗೊಂಡಂತೆ ಎಲ್ಲಾ ಸರ್ಕಾರಿ ಕಚೇರಿಯಲ್ಲಿ ಅಳವಡಿಸಬೇಕೆಂದು ಒತ್ತಾಯಿಸಿದರು.

ಮುಸ್ಲಿಂ ಮುಖಂಡ ಗುರುಪುರದ ಖಾಲೀದ್ ಮಾತನಾಡಿ ಇವನ್ಯಾರವ, ಇವನ್ಯಾರವ ಇವ ನಮ್ಮವ ಇವ ನಮ್ಮವ ಎನ್ನುವ ಮೂಲಕ ಮನುಕುಲಕ್ಕೆ ಬಸವಣ್ಣ ಆದರ್ಶವಾಗಿದ್ದಾರೆ ಎಂದರು.

ದಸಂಸ ಮುಖಂಡ ನಿಂಗರಾಜ್ ಮಲ್ಲಾಡಿ, ಟಿಎಪಿಸಿಎಂಎಸ್ ಅಧ್ಯಕ್ಷ ಬಸವಲಿಂಗಯ್ಯ ಮಾತನಾಡಿದರು. ಈ ವೇಳೆ ತಹಸೀಲ್ದಾರ್ ನರಸಿಂಹಯ್ಯ, ಉಪ ತಹಸೀಲ್ದಾರ್ ಶ್ರೀಪಾದ, ರಾಷ್ಟ್ರೀಯ ಹಬ್ಬ ಗಳ ಆಚರಣ ಸಮಿತಿ ಸದಸ್ಯರಾದ ಜಯ ರಾಮ್, ರಾಚಪ್ಪ, ಭಾಸ್ಕರ್, ಸುಬ್ಬರಾವ್, ಕೆಂಪರಾಜು, ಕಾಂಗ್ರೆಸ್ ಮುಖಂಡ ಪುಟ್ಟರಾಜು ಸೇರಿದಂತೆ ಇನ್ನಿತರರಿದ್ದರು.

ನೇಮಕ



ತಿ.ನರಸೀಪುರ, ಮೇ 10– ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಪದವೀಧರ ಘಟಕದ ವರುಣ ಕ್ಷೇತ್ರದ ಅಧ್ಯಕ್ಷರಾಗಿ ಪಟ್ಟಣದ ತ್ರಿವೇಣಿ ನಗರದ ಉಮೇಶ್ ಅವರನ್ನು ಜಿಲ್ಲಾಧ್ಯಕ್ಷ ಎಂ.ರಮೇಶ್ ಅವರು ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

ಸಮಾಜದ ಬದಲಾವಣೆಗೆ ಶ್ರಮಿಸಿದ ಮಹಾನ್ ಸಂತ ಬಸವಣ್ಣ

ತಹಸೀಲ್ದಾರ್ ಸುರೇಂದ್ರ ಮೂರ್ತಿ



ಪಿರಿಯಾಪಟ್ಟಣದಲ್ಲಿ ಬಸವ ಜಯಂತಿ ಆಚರಿಸಲಾಯಿತು.

ಪಿರಿಯಾಪಟ್ಟಣ, ಮೇ 10– ವಚನ ಸಾಹಿತ್ಯದ ಮೂಲಕ ಸಮಾಜದ ಬದಲಾವಣೆಗೆ ಶ್ರಮಿಸಿದ ಮಹಾನ್ ಸಂತ ಬಸವಣ್ಣ ಎಂದು ತಹಸೀಲ್ದಾರ್ ಸುರೇಂದ್ರ ಮೂರ್ತಿ ತಿಳಿಸಿದರು.

ಪಟ್ಟಣದ ತಾಲೂಕು ಆಡಳಿತ ಭವನದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ನಡೆದ ಬಸವ ಜಯಂತಿಯಲ್ಲಿ ಮಾತನಾಡಿದ ಅವರು, ಸಮಾಜ ದಲ್ಲಿದ್ದ ಅಸ್ಪೃಶ್ಯತೆ ಹಾಗೂ ಸಾಮಾಜಿಕ ಪಿಡುಗುಗಳನ್ನು ಹೋಗಲಾಡಿಸುವ ಸಲುವಾಗಿ 12ನೇ ಶತಮಾನದಲ್ಲಿ ಬಸವಣ್ಣನವರು ಹೋರಾಟ ಮಾಡಿದರು ಎಂದರು.

ಶಿಕ್ಷಕ ಎನ್.ಆರ್.ಕಾಂತರಾಜು ಮಾತನಾಡಿ, ಕಾಯಕ ಯೋಗಿ ಬಸವಣ್ಣನವರ ತತ್ವಾದರ್ಶ ವನ್ನು ಎಲ್ಲರೂ ಮೈಗೂಡಿಸಿಕೊಳ್ಳಬೇಕು ಎಂದರು. ಈ ವೇಳೆ ಶಿರಸ್ತೇದಾರ್ ವಿನೋದ್ ಕುಮಾರ್, ಪಶುಸಂಗೋಪನಾ ಇಲಾಖೆ ಸಹಾಯಕ ನಿರ್ದೇಶಕ ಡಾ.ಸೋಮಯ್ಯ, ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ಚಂದ್ರಶೇಖರ್, ಬೆಟ್ಟದಪುರ ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಶಿವದೇವಪ್ಪ, ಪುರಸಭಾ ಸದಸ್ಯರಾದ ಮಂಜುನಾಥ್, ನಿರಂಜನ್, ಕಸಾಪ ತಾಲೂಕು ಅಧ್ಯಕ್ಷ ನವೀನ್ ಕುಮಾರ್, ಶಿವಕುಮಾರ ಸ್ವಾಮೀಜಿ ಅಭಿಮಾನಿಗಳ ಸಂಘದ ಅಧ್ಯಕ್ಷ ಶಿವಕುಮಾರ್ ಸೇರಿದಂತೆ ಇತರರಿದ್ದರು.

ಬಸವ ಜಯಂತಿ: ಶ್ರೀಚಂದ್ರಮೌಳೇಶ್ವರಸ್ವಾಮಿ ಮೆರವಣಿಗೆ



ಪಾರ್ವತಿ ಸಮೇತ ಶ್ರೀಚಂದ್ರಮೌಳೇಶ್ವರಸ್ವಾಮಿ ಮೆರವಣಿಗೆ ಮಾಡಲಾಯಿತು.

ಸರಗೂರು, ಮೇ 10– ಬಸವ ಜಯಂತಿ ಅಂಗವಾಗಿ ವೀರಶೈವ ಲಿಂಗಾಯತ ಸಮಾಜ ದಿಂದ ಪಟ್ಟಣದಲ್ಲಿ ಪಾರ್ವತಿ ಸಮೇತ ಶ್ರೀ ಚಂದ್ರಮೌಳೇಶ್ವರಸ್ವಾಮಿ ಉತ್ಸವಮೂರ್ತಿ ಮೆರವಣಿಗೆ ಮಾಡಲಾಯಿತು.

ಬಸವ ಜಯಂತಿ ಅಂಗವಾಗಿ ಪಟ್ಟಣದ ಬಸವೇಶ್ವರ ದೇವಾಲಯವನ್ನು ರಂಗೋಲೆ, ವಿದ್ಯುತ್ ದೀಪಗಳಿಂದ ಸಿಂಗರಿಸಲಾಗಿತ್ತು. ದೇವಾಲಯದಲ್ಲಿ ಮುಂಜಾನೆಯಿಂದಲೇ ಹೋಮ ನಡೆಸಲಾಯಿತು. ಗಣಪತಿ ಹೋಮ, ಪುಣ್ಯಾಹ, ಕಳಶ ಪ್ರತಿಷ್ಠಾಪನೆ, ಕುಂಕು ಮಾರ್ಚನೆ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳು ನಡೆಯಿತು. ನಂತರ ನದಿಗೆ ತೆರಳಿ ಗಂಗ ಪೂಜೆ ನೆರವೇರಿಸಿ ಪಾರ್ವತಿ ಸಮೇತ ಶ್ರೀಚಂದ್ರಮೌಳೇಶ್ವರ ಸ್ವಾಮಿಯನ್ನು ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಬಳಿಕ ಮಹಾಮಂಗಳಾರತಿ ಮಾಡಿ ಪ್ರಸಾದ ವಿನಿಯೋಗ ಮಾಡಲಾಯಿತು.

ಈ ವೇಳೆ ಅರ್ಚಕ ರವಿಶಾಸ್ತ್ರಿ, ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಎಸ್.ಎನ್.ಮೋಹನ್‌ಕುಮಾರ್, ಉಪಾಧ್ಯಕ್ಷ ನಾಗರಾಜು, ಕಾರ್ಯದರ್ಶಿ ಬಿ.ಎಸ್.ಲೋಕೇಶ್‌ಮೂರ್ತಿ, ಸಹ ಕಾರ್ಯದರ್ಶಿ ಅವಿನಾಶ್, ಖಜಾಂಚಿ ಚಂದ್ರಣ್ಣ, ಪಪಂ ಸದಸ್ಯ ವಿರೇಶ್, ಮಾಜಿ ಅಧ್ಯಕ್ಷ ಶ್ರೀಕಂಠಸ್ವಾಮಿ, ಎಸ್.ಎಸ್.ಪ್ರಭುಸ್ವಾಮಿ, ರೇಣುಕಾ, ಸೋಮಶೇಖರ್, ನಂದನ್, ಗುರು, ರಕ್ಷಿತ, ಪ್ರಮೋದ್, ಹೇಮಂತ್ ಸೇರಿದಂತೆ ಇನ್ನಿತರರು ಹಾಜರಿದ್ದರು.

ಆರ್.ವಿಜಯಲಕ್ಷ್ಮಿಗೆ 586 ಅಂಕ



ಹುಣಸೂರು, ಮೇ 10– ನಗರದ ಸಂತ ಜೋಸೆಫ್ ಪ್ರೌಢಶಾಲೆ ವಿದ್ಯಾರ್ಥಿ ಆರ್.ವಿಜಯಲಕ್ಷ್ಮಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 586 ಅಂಕ ಪಡೆದು ಉನ್ನತ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾಳೆ ಎಂದು ಶಾಲೆ ಪ್ರಕಟಣೆ ತಿಳಿಸಿದೆ.



ನಂಜನಗೂಡಿನ ತಹಸೀಲ್ದಾರ್ ಕಚೇರಿಯಲ್ಲಿ ಬಸವ ಜಯಂತಿ ಆಚರಿಸಲಾಯಿತು. ಈ ವೇಳೆ ತಹಶೀಲ್ದಾರ್ ಶಿವಕುಮಾರ್ ಕಾಸ್ನೂರ್, ನಗರಸಭೆ ಆಯುಕ್ತ ನಂಜುಂಡಸ್ವಾಮಿ ಸೇರಿದಂತೆ ಇತರರಿದ್ದಾರೆ.


ಆರ್.ಷಣ್ಮುಖಸ್ವಾಮಿ ನಿಧನ



ತಿ.ನರಸೀಪುರ, ಮೇ 10– ತಾಲೂಕಿನ ಮಾಜಿ ಕಸಾಪ ಅಧ್ಯಕ್ಷ, ಕುಂಬಾರ ಸಮುದಾಯದ ಹಿರಿಯ ಮುಖಂಡ ಹಾಗೂ ಪಟ್ಟಣದ ತ್ರಿವೇಣಿ ನಗರದ ನಿವಾಸಿ ಕೆ.ಆರ್.ಷಣ್ಮುಖಸ್ವಾಮಿ(76) ಶುಕ್ರವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಸಂಜೆ ಅಂತ್ಯಕ್ರಿಯೆ ನೆರ ವೇರಿಸಲಾಯಿತು. ಕುಂಬಾರ ಸಂಘದ ಗೌರವಾಧ್ಯಕ್ಷ ಕೇತಹಳ್ಳಿ ರಾಜಣ್ಣ ಅಂತಿಮ ದರ್ಶನ ಪಡೆದರು. ಮೃತರ ನಿಧನಕ್ಕೆ ಚಾಮ ರಾಜನಗರ ಜಿಲ್ಲಾಸ್ಪತ್ರೆ ಸ್ಥಾನಿಕ ವೈದ್ಯಾಧಿಕಾರಿ ಡಾ.ಎಂ.ಮಹೇಶ್ ಸಂತಾಪ ಸೂಚಿಸಿದ್ದಾರೆ.

ವಚನಗಳ ಮೂಲಕ ಜ್ಞಾನದ ಬೆಳಕು ಚೆಲ್ಲಿದ ಬಸವಣ್ಣ

ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ



ತಿ.ನರಸೀಪುರದ ವೀರಶೈವ ವಿದ್ಯಾರ್ಥಿ ನಿಲಯದಲ್ಲಿ ತಾಲೂಕು ವೀರಶೈವ ಮಹಾಸಭಾದಿಂದ ಬಸವ ಜಯಂತಿ ಆಚರಿಸಲಾಯಿತು.

ತಿ.ನರಸೀಪುರ, ಮೇ 10– ಜಗಜ್ಯೋತಿ ಬಸವಣ್ಣನವರು ತಮ್ಮ ವಚನಗಳ ಮೂಲಕವೇ ಜ್ಞಾನದ ಬೆಳಕು ಚೆಲ್ಲಿ, ಕ್ರಾಂತಿಯ ಬೀಜ ಬಿತ್ತಿದ್ದ ಸಮಾಜ ಸುಧಾರಕರು ಎಂದು ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ ತಿಳಿಸಿದರು.

ಪಟ್ಟಣದ ವಿವೇಕಾನಂದ ನಗರದಲ್ಲಿ ರುವ ವೀರಶೈವ ವಿದ್ಯಾರ್ಥಿ ನಿಲಯದಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮ ದಲ್ಲಿ ಬಸವೇಶ್ವರರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಬಸವಣ್ಣ ನವರ ಅನುಭವ ಮಂಟಪ ಎಂಬುದೇ ಅದ್ಭುತ ಪರಿಕಲ್ಪನೆ. ಅನುಭವ ಮಂಟಪದ ಮೂಲಕ ಎಲ್ಲಾ ವರ್ಗದವರನ್ನೂ ಒಂದೆಡೆ ತರುವ ಪ್ರಯತ್ನ ಮಾಡಿದ್ದರು. ಆ ಮೂಲಕ ಸಮಾಜದಲ್ಲಿ ಬೇರೂರಿದ್ದ ತಾರತಮ್ಯ, ಅಂದ ಶ್ರದ್ಧೆ ದೂರ ಮಾಡುವ ಕಾರ್ಯ ಮಾಡಿದ್ದಾರೆ. ಪ್ರತಿಯೊಬ್ಬರಿಗೂ ಸಮಾನ ಅವಕಾಶ ನೀಡಿದ ಬಸವಣ್ಣನವರ ತತ್ವಾ ದರ್ಶಗಳು ಇಂದಿಗೂ ಮಾದರಿಯಾಗಿದೆ ಎಂದರು. ಜಾತಿ ಪದ್ಧತಿ ನಿರ್ಮೂಲನೆಗೆ 12ನೇ ಶತಮಾನದಲ್ಲೇ ಅಂತರ್ಜಾತಿ ವಿವಾಹ ಮಾಡಿಸಿದ ಮಹಾನ್ ಮಾನವ ತಾವಾದಿ ಬಸವಣ್ಣ ಅವರು ಸರಳ ಭಾಷೆ ಯಲ್ಲಿ ವಚನಗಳ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದಿದರು. ಯಾವುದೇ ಜಾತಿ ಭೇದವಿಲ್ಲದೆ ಸಮಾಜಕ್ಕೆ ಒಳಿತು ಮಾಡುತ್ತಿದ್ದರು ಎಂದರು.

ಉಪನ್ಯಾಸಕ ಮೂಗೂರು ಕುಮಾರ ಸ್ವಾಮಿ ಮಾತನಾಡಿ, ಹೆಣ್ಣು ಮಕ್ಕಳಿಗೂ ಸಮಾನ ಶಿಕ್ಷಣ ನೀಡಬೇಕೆನ್ನುವ ಬಸ ವಣ್ಣನವರ ಈ ಪರಿಕಲ್ಪನೆ ಇಂದು ಹೆಣ್ಣು ಮಕ್ಕಳು ಸಾಧನೆಯತ್ತ ಮುಂದೆ ಸಾಗಲು ಸಹಕಾರಿಯಾಗಿದೆ. ಹೀಗಾಗಿ ವಿಶ್ವಗುರು ಬಸವಣ್ಣನವರು ಇಂದಿಗೂ ಕೂಡ ಜನರ ಮನದಲ್ಲಿ ಅಚ್ಚಳಿಯದೆ ಉಳಿದುಕೊಂಡಿದ್ದಾರೆ ಮತ್ತು ಅವರ ತತ್ವಾದರ್ಶಗಳು ಇಂದಿಗೂ ಯುವ ಪೀಳಿಗೆಗೆ ಸ್ಫೂರ್ತಿಯಾಗಿದೆ ಎಂದರು.

ತಾಲೂಕು ಕಚೇರಿ: ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಪಟ್ಟಣದ ತಾಲೂಕು ಕಚೇರಿಯಲ್ಲಿ ಬಸವ ಜಯಂತಿ ಆಚರಿಸ ಲಾಯಿತು. ತಾಲೂಕು ಮಟ್ಟದ ಅಧಿಕಾರಿ ಗಳು ಹಾಗೂ ವೀರಶೈವ ಲಿಂಗಾಯತ ಮುಖಂಡರ ಉಪಸ್ಥಿತಿಯಲ್ಲಿ ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಪೂಜೆ ಸಲ್ಲಿಸಿ ಗೌರವ ಸಲ್ಲಿಸ ಲಾಯಿತು. ತಹಸೀ ಲ್ದಾರ್ ಟಿ.ಜೆ.ಸುರೇಶ್ ಆಚಾರ್ ಮಾತನಾಡಿ, ಬಸವಣ್ಣನವರ ಆದರ್ಶ ಮತ್ತು ತತ್ವಗಳನ್ನು ಎಲ್ಲರೂ ತಮ್ಮ ಜೀವನದಲ್ಲಿ ಅಳವಡಿಸಿ ಕೊಳ್ಳುವ ಮೂಲಕ ಉತ್ತಮ ಬದುಕಿನೆಡೆಗೆ ತೊಡಗಿಸಿಕೊಳ್ಳುವಂತೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಪುರಸಭಾ ಸದಸ್ಯ ಎಸ್.ಕೆ.ಕಿರಣ್, ಗ್ರಾಪಂ ಮಾಜಿ ಅಧ್ಯಕ್ಷ ಶಿವಕುಮಾರ್, ಸದಸ್ಯ ಕಿರಗಸೂರು ಮಹ ದೇವಸ್ವಾಮಿ, ಸ್ಪಟಿಕ ಸಹಕಾರ ಸಂಘದ ಅಧ್ಯಕ್ಷ ರಾಜೇಶ್ ಪಟೇಲ್, ಡೈರಿ ಅಧ್ಯಕ್ಷ ಮಹದೇವಸ್ವಾಮಿ, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ತೋಂಟೇಶ್, ಜೆಎಸ್‌ಎಸ್ ಸಂತೋಷ್, ಬಸವಶ್ರೀ ಜಗದೀಶ್, ಕಾರ್ಮಿಕ ಸಂಘದ ಅಧ್ಯಕ್ಷ ರಾಜೇಶ್, ವಕೀಲ ಜ್ಞಾನೇಂದ್ರ ಮೂರ್ತಿ, ನಾಗರಾಜಪ್ಪ, ಪೂಜಿತ್ ಕುಮಾರ್, ಕೀರ್ತಿ ಮತ್ತಿತರರಿದ್ದರು.

ಬಳ್ಳಾರಿಯ ಜಿಂದಾಲ್ ಕಾರ್ಖಾನೆಯಲ್ಲಿ ನೀರಿನ ಟ್ಯಾಂಕ್‌ಗೆ ಬಿದ್ದು ಮೂವರು ಕಾರ್ಮಿಕರ ಸಾವು

ಬಳ್ಳಾರಿ: ಜಿಲ್ಲೆಯ ಸಂಡೂರು ತಾಲೂಕಿನ ತೋರಣಗಲ್ಲು ಬಳಿ ಇರುವ ಜಿಂದಾಲ್ ಉಕ್ಕಿನ ಕಾರ್ಖಾನೆಯ ನೀರಿನ ಹೊಂಡದಲ್ಲಿ ಬಿದ್ದು ಮೂವರು ಕಾರ್ಮಿಕರು ಮೃತಪಟ್ಟಿದ್ದಾರೆ. ಭುವನಹಳ್ಳಿ ಮೂಲದ ಜೆಡೆಪ್ಪ, ಬೆಂಗಳೂರು ಮೂಲದ ಸುಶಾಂತ, ಚೆನ್ನೈ ಮೂಲದ ಮಹಾದೇವನ್ ಮೃತಪ್ಟ ದುರ್ದೈವಿಗಳು. ನೀರಿನ ಹೊಂಡಕ್ಕೆ ಜೋಡಿಸಲಾಗಿದ್ದ ಪೈಪ್‌ನಲ್ಲಿ ಸಮಸ್ಯೆ ಕಂಡು ಬಂದು ರಿಪೇರಿ ಮಾಡಲು ಮೂವರು ಹೋಗಿದ್ದಾರೆ. ಪೈಪ್‌ನಲ್ಲಿ ಬರುತ್ತಿದ್ದ ನೀರನ್ನು ನಿಲ್ಲಿಸದೆ ಹಾಗೆ ದುರಸ್ತಿ ಕಾರ್ಯ ಮಾಡುವಾಗ, ನೀರಿನ ರಭಸಕ್ಕೆ ಚನ್ನೈ ಮೂಲದ ಮಹಾದೇವನ್ ನೀರಿನ ಹೊಂಡದಲ್ಲಿ ಬಿದ್ದಿದ್ದಾನೆ. ಈತನನ್ನು ರಕ್ಷಿಸಲು ಹೋಗಿ ಇನ್ನಿಬ್ಬರು ಇಳಿದು ಮೃತಪಟ್ಟಿದ್ದಾರೆ. ತೋರಣಗಲ್ಲು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ನಿಸರ್ಗ

ಮೈಸೂರು, ಮೇ 10(ಎಂಟಿವೈ)–



ಮೈಸೂರಿನ ಜಾಕಿ ಕ್ವಾಟ್ರಸ್‌ನಲ್ಲಿರುವ ಸರ್ಕಾರಿ ಆದರ್ಶ ವಿದ್ಯಾಲಯದ ವಿದ್ಯಾರ್ಥಿನಿ ಎಸ್. ನಿಸರ್ಗ ಎಸ್‌ಎಸ್ ಎಲ್‌ಸಿ ಪರೀಕ್ಷೆಯಲ್ಲಿ 591 ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಶಿವಣ್ಣ ಹಾಗೂ ಲಾವಣ್ಯ ದಂಪತಿ ಪುತ್ರಿಯಾಗಿರುವ ನಿಸರ್ಗ ಪ್ರಥಮ ಭಾಷೆ ಇಂಗ್ಲೀಷ್‌ನಲ್ಲಿ 119, ಕನ್ನಡ 99, ಹಿಂದಿ 95, ಗಣಿತ 91, ವಿಜ್ಞಾನ 94 ಹಾಗೂ ಸಮಾಜ ವಿಜ್ಞಾನದಲ್ಲಿ 93 ಅಂಕ ಪಡೆದು ತೇರ್ಗಡೆಯಾಗಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಅದರ ಮಾಲೀಕರಾದ, ಮೈಸೂರು ನಗರ, ರಾಜರಾಜೇಶ್ವರಿ ನಗರ, ಬಿ.ಇ.ಎಂ.ಎಲ್. ಬಡಾವಣೆ, ನಂಬರ್: 1120 ರ ನಿವಾಸಿಯಾದ ಶ್ರೀ, ನಿಂಗಪ್ಪ ಬಿ. ಬಿನ್ ಲೇಟ್ ಬೋರಯ್ಯ ಮತ್ತು ಅವರ ಕುಟುಂಬದ ಸದಸ್ಯರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.
ಷೆಡ್ಯೂಲ್ ಸ್ವತ್ತಿನ ಪರಬಾರೆಯ ವಿಚಾರದಲ್ಲಿ ಯಾರಿಗಾದಾರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್

ಐಟಂ–1: ಮೈಸೂರು ನಗರ, ಖಿಲ್ಲೆ ಮೊಹಲ್ಲಾ, ನಾಚನಹಳ್ಳಿ–ಕುಪ್ಪಲೂರು 3ನೇ ಹಂತ, ಬಿ–ಜೋನ್, ಇಲ್ಲಿರುವ ಪೂರ್ವ– ಪಶ್ಚಿಮ: 12 ಮೀಟರ್, ಉತ್ತರ–ದಕ್ಷಿಣ: 18 ಮೀಟರ್, ಒಟ್ಟು ವಿಸ್ತೀರ್ಣ: 216 ಚದರ ಮೀಟರ್ ಅಳತೆಯ ಖಾಲಿ ನಿವೇಶನ ಸ್ವತ್ತಿನ ಸಂಖ್ಯೆ: 304 ಮತ್ತು ಇದಕ್ಕೆ ಚಕ್ಕುಬಂದಿ – ಪೂರ್ವಕ್ಕೆ:– ಸ್ವತ್ತಿನ ಸಂಖ್ಯೆ: 303, ಪಶ್ಚಿಮಕ್ಕೆ:– ಸ್ವತ್ತಿನ ಸಂಖ್ಯೆ: 305, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ:– ರಸ್ತೆ.

ಐಟಂ–2: ಮೈಸೂರು ನಗರ, ಖಿಲ್ಲೆ ಮೊಹಲ್ಲಾ, ನಾಚನಹಳ್ಳಿ–ಕುಪ್ಪಲೂರು 3ನೇ ಹಂತ, ಬಿ–ಜೋನ್, ಇಲ್ಲಿರುವ ಪೂರ್ವ– ಪಶ್ಚಿಮ: 12 ಮೀಟರ್, ಉತ್ತರ–ದಕ್ಷಿಣ: 18 ಮೀಟರ್, ಒಟ್ಟು ವಿಸ್ತೀರ್ಣ: 216 ಚದರ ಮೀಟರ್ ಅಳತೆಯ ಖಾಲಿ ನಿವೇಶನ ಸ್ವತ್ತಿನ ಸಂಖ್ಯೆ: 305 ಮತ್ತು ಇದಕ್ಕೆ ಚಕ್ಕುಬಂದಿ – ಪೂರ್ವಕ್ಕೆ:– ಸ್ವತ್ತಿನ ಸಂಖ್ಯೆ: 304, ಪಶ್ಚಿಮಕ್ಕೆ:– ಸ್ವತ್ತಿನ ಸಂಖ್ಯೆ: 306, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ:– ರಸ್ತೆ.

Sd/- M.N. Prakash Kalappa,
KAR-1996-2000, Advocte & Legal Consultant,
67/7A, P.R.I. Complex, No. 2 & 3, 1st Floor,
New Sayyaji Rao Road, Fort Mohala,
Mysore-570004. Mob: 93431 12535
ಮೈಸೂರು:: 10/05/2024

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು